ಕಲ್ಯಾಣ ಕಿರಣ

ಜನವರಿ, ೧೯೯೧
ಬೆಲೆ : ೩ ರೂ.



ಕಲ್ಯಾಣ ಕಿರಣ

ಮಾಸ ಪತ್ರಿಕೆ ಬಿಡಿ ಸಂಚಿಕೆ ೩ ರೂ.

ಜನವರಿ-ಫೆಬ್ರವರಿ, 1991

ಸಂಪುಟ : 19 ಸಂಚಿಕೆ : 9-10 ಬಸವ ಶಕೆ : 885

ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300 ರೂ.

ಕಿರಣಗನ್ನಡಿ

ಮುಖ ಪುಟ ಮತ್ತು ಹೊದ್ದಿಕೆಯ 4ನೇ ಪುಟ : ನರ್ತಕಿಯಾಗಿ ರಂಗ ಪ್ರವೇಶ ಮಾಡಿದ ಅತ್ಯಂತ ಕಿರಿಯ ಕಲಾವಿದೆ ಎಂದು ಖ್ಯಾತಿ ಪಡೆದ **ಶೃತಿ-ಆನಂದ.**

ಬೆಂಗಳೂರು ವಿಳಾಸ : **ಕಲ್ಯಾಣ ಕಿರಣ ಮಾಸಪತ್ರಿಕೆ** ದೂರವಾಣಿ : **325335**

ಬಸವಮಂಟಪ, 2035, 2ನೇ ಬ್ಲಾಕು, 20 ನೆಯ ಮುಖ್ಯ ರಸ್ತೆ, ರಾಜಾಜಿನಗರ, ಬೆಂ–10

ಕಲ್ಯಾಣ ಕಿರಣ

ಸಂಪುಟ : 19 ಸಂಚಿಕೆ : 9-10 ಜನವರಿ-ಫೆಬ್ರವರಿ, 1991 ಬಸವ ಶಕೆ : 885

ನುಡಿ ನೈವೇದ್ಯ

ಬನ್ನಿ ಬನ್ನಿ ನೋಡಬನ್ನಿ ಸಂಗಮದ ಕ್ಷೇತ್ರವ
ಬನ್ನಿ ಬನ್ನಿ ನೋಡಬನ್ನಿ ಶರಣ ಮೇಳವ ॥ಪಲ್ಲವಿ॥

ದೇವ ಸಂಗಮೇಶನ ಭವ್ಯ ತಾಣ ಸಂಗಮ
ಗುರು ಬಸವೇಶನ ಐಕ್ಯಕ್ಷೇತ್ರ ಸಂಗಮ
ಮಹಾಮನೆಯ ಹೊಂದಿರುವ ದಿವ್ಯಕ್ಷೇತ್ರ ಸಂಗಮ
ಶರಣ ಮೇಳ ನಡೆಯುತಿರುವ ಧರ್ಮಕ್ಷೇತ್ರ ಸಂಗಮ ॥೧॥

ಕಲ್ಯಾಣ ನಾಡಿನೊಳು ಅಂದು ಒಂದು ಕ್ರಾಂತಿಯಾಗಿ
ಬಸವ ಸುತರು ಚದುರಿದರು ಹತ್ತು ಹಲವು ದಿಕ್ಕಿಗೆ
ನಲೆಯು ಇರದ ಮಕ್ಕಳಂತೆ ಸೋತು ಬಳಲಿ ಬಾಳುತಿರೆ
ಶರಣ ಮೇಳ ತೌರ ತೋರಿ ನಲುಮೆಯಿಂದ ಕರೆಯುತಿದೆ ॥೨॥

ಬಸವ ಕ್ರಾಂತಿ ದಿವ್ಯದಿನದಿ ನಡೆಯುತಿದೆ ಶರಣ ಮೇಳ
ನಾಡ ಮೂಲೆ ಮೂಲೆಯಿಂದ ಸೇರುತಿದೆ ಶರಣ ಬಳಗ
ನಮ್ಮ ನಿಮ್ಮ ಬಾಳಿನ ಬನ್ನವನ್ನು ಕಳೆಯುವ
ವಚನಮೇಳ, ತತ್ತ್ವಮೇಳ, ಕಮ್ಮನೆಯ ಶರಣ ಮೇಳ ॥೩॥

ತಮಿಳು ನಾಡು, ತೆಲುಗು ನಾಡು, ಮಹಾರಾಷ್ಟ್ರ ಹಿಂದಿ ನಾಡು
ಕರುನಾಡಿನ ಮೂಲೆಯಿಂದ ಬರುತಿಹರು ಸಂಗಮಕೆ
ಬಸವ ಲತೆಯು ಅರಳಿಸಿರುವ ಶರಣ ಸುಮಗಳಿವರ ನೋಡಿ
ಮಾಲೆ ಮಾಡಿ ಇಟ್ಟಿದೆ ಸಂಗಮದ ಶರಣ ಮೇಳ ॥೪॥

—**ಪೂಜ್ಯ ಜಗದ್ಗುರು ಮಾತೆ ಮಹಾದೇವಿ**

ನಾಲ್ಕನೆಯ ಶರಣ ಮೇಳ — ಅದ್ಭುತ ಯಶಸ್ಸು

ಭಕ್ತಿ-ಶ್ರದ್ಧೆ-ನಿಷ್ಠೆ-ಪರಿಶ್ರಮ ಒಟ್ಟುಗೂಡಿದಾಗ ಏನೇನನ್ನು ಸಾಧಿಸಬಹುದು ಎಂಬುದನ್ನು ಬಸವಾಯತರು ನಾಲ್ಕನೆಯ ಶರಣ ಮೇಳದಲ್ಲಿ ತೋರಿಸಿ ಕೊಟ್ಟರು. ನಾಲ್ಕನೆಯ ಶರಣಮೇಳ ಎಲ್ಲರನ್ನೂ ಭಕ್ತಿಪುಳಕಿತರನ್ನಾಗಿ ಮಾಡಿತು, ಬಸವ ಶಕ್ತಿಯ ಮಹಿಮೆಯನ್ನು ಸಾರಿಸಾರಿ ಹೇಳಿತು.

ಈ ಬಾರಿ ಶರಣ ಮೇಳ ಕುರಿತು ಸ್ವಲ್ಪ ಆತಂಕವಿತ್ತು. ಏಕೆಂದರೆ, ಶರಣ ಮೇಳದ ಪ್ರಚಾರ ಮಾಡಿ, ಧನ-ಧಾನ್ಯ ಸಂಗ್ರಹಿಸುವಾಗಲೇ ಅಂದರೆ ನವೆಂಬರ್-ಡಿಸೆಂಬರ್ ತಿಂಗಳೇ ಅಯೋಧ್ಯೆಯ ಸಮಸ್ಯೆಯಿಂದ ಸಂಕಷ್ಟದ ದಿವಸಗಳಾದವು. 144 ಜಾರಿಯಾಯಿತು. ಸಾರ್ವಜನಿಕವಾಗಿ ಪ್ರಚಾರ ಸಭೆಗಳನ್ನು ನಡೆಸುವಂತಿಲ್ಲ. ಈ ನಿಷೇಧಾಜ್ಞೆಯಿಂದ ಪ್ರವಚನವೂ ನಡೆಯದೆ, ಆರ್ಥಿಕ ತೊಂದರೆಯೂ ಎರಗಿತು. ಹೀಗಾಗಿ ಶರಣ ಮೇಳ ಹೇಗಾಗುತೋ ಎಂಬ ಆತಂಕ ಬಹಳವಾಯಿತು. ಬಸವ ಮಹಿಮೆ ಬಹು ಹಿರಿದು, ವಿವಿಧ ರಾಷ್ಟ್ರೀಯ ಬಸವ ದಳದವರು ಹೆಚ್ಚಿನ ಶ್ರಮವನ್ನು ವಹಿಸಿದರು. ತಮ್ಮ ಒತ್ತಡದ ಕಾರ್ಯಗಳ ಮಧ್ಯೆಯೂ ಬಿಡುವು ಮಾಡಿಕೊಂಡು ಧನ-ಧಾನ್ಯ ಸಂಗ್ರಹಣೆಗೆ ತೊಡಗಿದರು. ಎಪ್ಪತ್ತು-ಎಪ್ಪತ್ತೈದು ವರ್ಷಗಳ ಮುದುಕರಿಗೂ ತಾರುಣ್ಯದ ಉತ್ಸಾಹ ಪುಟಿಯಿತು. ಶರಣ ಮೇಳ ಎಲ್ಲರ ಹಬ್ಬ! ಮನೆಮನೆಗೆ ತಿರುಗಿದರು, ಪ್ರಚಾರ ಮಾಡಿದರು.

"ಬನ್ನಿ...ಕೂಡಲ ಸಂಗಮ ನಮ್ಮ ಧರ್ಮಕ್ಷೇತ್ರ, ವಿಶ್ವಗುರು ಬಸವಣ್ಣನವರು ಐಕ್ಯರಾದ ದಿವ್ಯ ಸ್ಥಾನ. ನಿಮಗೆ ಎಷ್ಟು ಸಾಧ್ಯವೋ ಅಷ್ಟನ್ನು ಗುರುವಿಗಾಗಿ ಸಲ್ಲಿಸಿರಿ. ಶರಣ ಮೇಳಕ್ಕೆ ಬರುವುದು ನಿಮ್ಮೆಲ್ಲರ ಕರ್ತವ್ಯ." ಹೀಗೆ ಸ್ವಯಂಸ್ಫೂರ್ತಿಯಿಂದ ಸಂಚರಿಸಿ ಪ್ರಚಾರ ಮಾಡಿದ್ದಾರೆ. ಈ ರೀತಿ ದುಡಿದ ಶರಣ ಬಂಧುಗಳ ಪರಿಶ್ರಮ ಅಪಾರ. ಅವರೆಲ್ಲರ ಹೆಸರನ್ನು ಕಾಣಿಸಬೇಕೆಂದು ಉತ್ಕಟ ಅಪೇಕ್ಷೆ ನನಗಿದ್ದರೂ ಹಾಗೆ ಕಾಣಿಸುವಾಗ ಯಾರದ್ದಾದರೂ ಹೆಸರು ಕೈಬಿಟ್ಟು ಹೋದರೆ, ಅವರು ಬೇಸರಗೊಳ್ಳಬಾರದು, ನಿರುತ್ಸಾಹಪಡಬಾರದು ಎಂದು ಚಿಂತಿಸಿ ಯಾರ ಹೆಸರನ್ನೂ ಕಾಣಿಸುತ್ತಲಿಲ್ಲ. ಅವರೆಲ್ಲರನ್ನೂ ನಾವು ಕೊಂಡಾಡುತ್ತಿರುತ್ತೇವೆ ಮತ್ತು ಅಂತಃಸಾಕ್ಷಿಯ ದುಡಿತವನ್ನು ಈ ಎಲ್ಲ ಶರಣ ಬಂಧುಗಳು ಮಾಡಿ ಖಂಡಿತವಾಗಿಯೂ ದೇವನ, ಧರ್ಮಗುರುವಿನ, ಎಲ್ಲ ಶರಣರ ಕೃಪೆಗೆ ಪಾತ್ರರಾಗುವುದು ನಿಶ್ಚಯ.

ಶರಣರ ದುಡಿಮೆಯಷ್ಟೆ, ಶರಣೆಯರ ದುಡಿಮೆಯೂ ಅಪಾರವಾಗಿದೆ. ಈ ದಿಶೆಯಲ್ಲಿ ತಮ್ಮ ಹೆಂಡತಿಯು ಮಹತ್ತರವಾದ ಈ ಸೇವೆಯಲ್ಲಿ ತೊಡಗಲು ಅನುವು

ಮಾಡಿಕೊಟ್ಟ ಯಜಮಾನರು ಸುತ್ತ್ಯಾರ್ಹರು. ಶರಣ ಮೇಳ ಒಟ್ಟಾರೆ ಸಾಮೂಹಿಕ ಪರಿಶ್ರಮದ ಯಶಸ್ವೀ ಸಮಾರಂಭ.

ಕೂಡಲ ಸಂಗಮ ಸದ್ಯದಲ್ಲಿ ಪುಟ್ಟ ಗ್ರಾಮ; ಇರುವ ಅನುಕೂಲತೆಗಳು ಕಡಿಮೆ. ಇರುವ ಸೀಮಿತ ಅನುಕೂಲತೆಯನ್ನು ಬಳಸಿಕೊಂಡು ಬಸವ ಭಕ್ತರು ಅಪಾರವಾಗಿ ದುಡಿದು, ಬಂದ ಶರಣ ಬಂಧುಗಳ ಸೇವೆ ಮಾಡಿದರು. ರಾಷ್ಟ್ರೀಯ ಬಸವ ದಳಗಳ ಅಚ್ಚುಕಟ್ಟಾದ ದುಡಿತಕ್ಕೆ ತಮ್ಮ ಪರಿಶ್ರಮದ ದುಡಿತವನ್ನು ಸಂಗಮಿಸಿದರು, ಭಾರತ ಸ್ಕೌಟ್ಸ್ ಮತ್ತು ಗೈಡ್ ಸಂಸ್ಥೆಯವರು. ಸುಮಾರು ಒಂದು ನೂರು ಜನ ಸ್ಕೌಟ್ ಸ್ಥಂಸೆಯ ಕಾರ್ಯಕರ್ತರು ಭದ್ರತಾ ವ್ಯವಸ್ಥೆ(*Security*), ಊಟೋಪಚಾರ, ಜನರಿಗೆ ಮಾರ್ಗದರ್ಶನ, ಕುಡಿಯುವ ನೀರನ್ನು ಒದಗಿಸುವುದು ಮುಂತಾದ್ದನ್ನು ಅಚ್ಚುಕಟ್ಟಾಗಿ ಮಾಡಿದರು. ಬಾಗಲಕೋಟೆಯ ಸಿವಿಲ್ ಆಸ್ಪತ್ರೆಯ ಮುಖ್ಯಾಧಿಕಾರಿ ಡಾ॥ ಜಿ.ಆರ್. ತಮಗೊಂಡ ಮತ್ತು ಕೂಡಲ ಸಂಗಮದ ಪ್ರಾಥಮಿಕ ವೈದ್ಯ ಕೇಂದ್ರದ ಡಾ॥ ಗಲಗಲಿಯವರು ವೈದ್ಯಕೀಯ ಸೇವೆಯನ್ನು ತಮ್ಮ ಸಹಾಯಕ ಸಿಬ್ಬಂದಿಯೊಡನೆ ನೆರವೇರಿಸಿದರು.

ಎಲ್ಲ ಆಹ್ವಾನಿತರು ತಪ್ಪದೆ ಬಂದುದು, ಪ್ರತ್ಯಕ್ಷ ಕಂಡು ಆನಂದ ತುಂದಿಲರಾದುದು, ಪ್ರತಿವರುಷ (ಅಂದರೆ ಮೂರೂ ಶರಣ ಮೇಳಗಳಲ್ಲಿ)ವೂ ಕಾಡುತ್ತಿದ್ದ ಶ್ರೀಮಾನ್ ಕೊಂಡೆ ಮಂಚಣ್ಣನವರ ಸಂತತಿಯವರು ಈ ಬಾರಿ ನಾಪತ್ತೆಯಾಗಿದ್ದುದು ಬಹಳ ಗಮನಾರ್ಹ ಸಂಗತಿಗಳು. ದೈವೀಶಕ್ತಿಯನ್ನು, ಸತ್ಯವನ್ನು ನಂಬಿದ ನಮಗೆ ಯಾವ ಭಯ– ಆತಂಕವಿರದೆ ಇದ್ದರೂ, ಪೋಲೀಸ್ ಇಲಾಖೆ ಕೊಂಡೆಯ ಮಂಚಣ್ಣಗಳ ಸಂತತಿಯವರ ಬಹುಬಗೆಯ ಚೇಷ್ಟೆಗಳಿಂದ ಆತಂಕಗೊಂಡು, ತುದಿಗಾಲ ಮೇಲೆ ನಿಲ್ಲುವುದು ತಪ್ಪಿದ್ದರಿಂದ ಅವರುಗಳೂ ನಿರಾತಂಕವಾಗಿ ಕರ್ತವ್ಯನಿರತರಾಗಿದ್ದರು.

ಶರಣ ಮೇಳಕ್ಕೆ ಭಕ್ತಿಯ ಸಿಂಚನೆ ಮಾಡಿದ ಇನ್ನಿತರ ಘಟಕಗಳೆಂದರೆ ಭಜನಾ ತಂಡಗಳು. ವಿಶೇಷವಾಗಿ ತಮಿಳುನಾಡಿನ ಕಾಟೇರಿ-ಸಕಲಟ್ಟಿಯ ಶರಣರ ತಂಡಗಳು ವಿದ್ಯಾವಂತರು, ಸುಸಂಸ್ಕೃತರೂ, ಭಕ್ತಿ ನಿರ್ಭರರೂ ಆದ ಶರಣರಿಂದ ಕೂಡಿ, ಹಾಡುತ್ತ-ಕುಣಿಯುತ್ತ-ಭಾವಾವೇಶದಿಂದ ರಾಗ-ತಾಳ ಬದ್ಧವಾಗಿ ಭಜನೆ ಮಾಡಿದುದು ಎಲ್ಲರನ್ನೂ ಪುಳಕಿತಗೊಳಿಸಿದೆ. ವಚನಗಳನ್ನು ರಾಗ-ತಾಳ ಸಹಿತವಾಗಿ ಭಜನಾರೂಪದಲ್ಲಿ ಸಾಮೂಹಿಕವಾಗಿ ಅಳವಡಿಸಿರುವುದು ಬಹು ಶ್ಲಾಘನೀಯ. ಅದೇ ರೀತಿ ಬಿಡದಿ, ತಬಕದ ಹೊನ್ನಳ್ಳಿ, ಹೊಸಪೇಟೆ ಮುಂತಾದ ಕಡೆಯಿಂದ ಬಂದ ಭಜನಾತಂಡಗಳು, ಬೊಮ್ಮಲಿಂಗಪ್ಪ-ಜಿ. ಟಿ. ಬಸವರಾಜಪ್ಪ ನೇತೃತ್ವದ ವೀರಗಾಸೆ ತಂಡಗಳು ಜನರ ಮೆಚ್ಚುಗೆಗೆ ಪಾತ್ರವಾದವು. ಬೆಂಗಳೂರಿನ ಶ್ರುತಿ ಆನಂದ, ಹಳ್ಯಾಳದ ಶ್ರುತಿ ಭಟ್,

ಕಂಪ್ಲಿಯ ರೋಹಿಣಿಯ ನೃತ್ಯಗಳು ಜನರ ಅಭಿಮಾನದ ಪೂರವನ್ನೇ ಹರಿಸಿಕೊಂಡವು.

ಈ ಬಾರಿ ಸುಮಾರು ನಾಲ್ಕು ಪೂರ್ಣ ದಿವಸಗಳ ಕಾಲವೇ ಶರಣ ಮೇಳ ಅತ್ಯಮೋಘವಾಗಿ ನಡೆದು ಬಿಟ್ಟು, ಎಲ್ಲರನ್ನೂ ಭಕ್ತಿ ಪರವಶರನ್ನಾಗಿ ಮಾಡಿದೆ ಎಂದು ನಾವಂದುಕೊಳ್ಳುವಾಗಲೇ ಬಳ್ಳಾರಿಯ ಮೆಡಿಕಲ್ ವಿದ್ಯಾರ್ಥಿನಿ ಕುಮಾರಿ ಬಸವ ಶ್ರೀ ಹೀಗೆ ಅಭಿಪ್ರಾಯ ಪಟ್ಟಿದ್ದಾಳೆ, "ಶರಣ ಮೇಳದ ಆ ನಾಲ್ಕು ದಿನ ಯಾವುದೋ ಲೋಕದಲ್ಲಿದ್ದಂತೆ ಭಾವಪರವಶರಾಗಿದ್ದೆವು. ಮೂರು ನಾಲ್ಕುದಿನ ಏತಕ್ಕೂ ಸಾಲವು. ಶರಣ ಮೇಳ ಇನ್ನೂ ಹೆಚ್ಚಿನ ದಿನ ನಡೆಯಬೇಕು."

ಅಂತೂ ಶರಣ ಮೇಳ ವರ್ಷದಿಂದ ವರ್ಷಕ್ಕೆ ಹೆಚ್ಚಿನ ಜನರನ್ನು, ಆಕರ್ಷಿಸುತ್ತ, ಅಚ್ಚುಕಟ್ಟಾದ ವ್ಯವಸ್ಥೆಯನ್ನು ಹೊಂದುತ್ತ ಮುನ್ನಡೆ ಸಾಧಿಸಿರುವುದು ಎಲ್ಲರ ಗಮನಕ್ಕೂ ಬಂದಿದೆ. ಈ ಎಲ್ಲ ಯಶಸ್ಸಿಗೆ ಕಾರಣರು, ತಮ್ಮ ಹೃನ್ಮನಚಿಂತನಗಳಲ್ಲಿ ಮಂತ್ರಪುರುಷ ಬಸವಣ್ಣನವರನ್ನು ತುಂಬಿಕೊಂಡ ಬಸವಾಯತರು. ಅವರೆಲ್ಲರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

—ಮಾತಾಜಿ



—: ವಿಶೇಷ ಸೂಚನೆ :—

ಕಲ್ಯಾಣಕಿರಣಕ್ಕೆ ಸಂಬಂಧಿಸಿದ ಪತ್ರ ವ್ಯವಹಾರ, ಕಳಿಸುವ ಚಂದಾ ಮುಂತಾದುವನ್ನು ಕುಂಬಳಗೋಡಿಗೆ ನೇರವಾಗಿ ಮಾಡಿದರೆ ಓದುಗರಿಗೆ ಬೇಗನೇ ಉತ್ತರ ಸಿಗುತ್ತದೆ.

ವಿಳಾಸ : **ಕಲ್ಯಾಣ ಕಿರಣ ಕಾರ್ಯಾಲಯ**
ಬಸವ ಗಂಗೋತ್ರಿ, ಕುಂಬಳಗೋಡು-560 074.
ಬೆಂಗಳೂರು ದಕ್ಷಿಣ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಬಸವ ವಚನಾಮೃತ

—ಮಾತಾಜಿ

ಅಡ್ಡದೊಡ್ಡ ನಾನಲ್ಲಯ್ಯಾ, ದೊಡ್ಡ ಬಸುರು ಎನಗಿಲ್ಲಯ್ಯಾ
ದೊಡ್ಡವರನಲ್ಲವೆ ನಿಮ್ಮ ಶರಣರು ಮನ್ನಿಸರಯ್ಯಾ
ಹಡೆದುಂಬ ಸೂಳೆಯಂತೆ ಧನವುಳ್ಳವರನರಸಿಯರಸಿ
ಬೋಧಿಸಲು, ಪ್ರಾರ್ಥಿಸಲು ಮುನ್ನ ನಾನರಿಯೆನಯ್ಯಾ
ದೊಡ್ಡತನವೆನಗಿಲ್ಲ; ಅಂಜುವೆನಂಜುವೆ ನಿಮ್ಮ ಪ್ರಮಥರಿಗೆ
ಅನಾಥ ನಾನಯ್ಯ, ಕೂಡಲ ಸಂಗಮದೇವಾ.

ಗುರು ಬಸವಣ್ಣನವರ ಈ ವಚನ ವಿಲಕ್ಷಣವಾಗಿದೆ. ವಿವಿಧಾರ್ಥಗಳಿಂದ ಕೂಡಿದೆ. ಯಾವುದೋ ಒಂದು ಸಂದರ್ಭದಲ್ಲಿ ಒಂದು ವಿಶೇಷವಾದ ಅನುಭವದ ಹಿನ್ನೆಲೆಯಲ್ಲಿ ವಚನಗಳು ಅರ್ಥವಾಗುತ್ತಿರುತ್ತವೆ. ನಾವು ಸಾಮಾನ್ಯವಾಗಿ ವಚನಗಳನ್ನು ಓದುತ್ತಿರುತ್ತೇವೆ. ಆಗ ಅವು ಅರ್ಥವಾಗುವುದಕ್ಕಿಂತಲೂ, ಏನಾದರೂ ವಿಶೇಷ ಪ್ರಸಂಗಗಳು ಎದುರಾದಾಗ ಆ ಪ್ರಸಂಗಗಳ ಹಿನ್ನೆಲೆಯಲ್ಲಿ ತಟ್ಟನೆ ಅರ್ಥವಾಗುತ್ತವೆ. ಬಸವಣ್ಣನವರು ಸತ್ಯವಾದಿಗಳು, ನಿಷ್ಠುರವಾಗಿಯಾದರೂ ಸತ್ಯವನ್ನು ನುಡಿಯುವವರು. ತಾವು ನಂಬಿದ ಮೌಲ್ಯಗಳು, ಇರಿಸಿಕೊಂಡ ಧ್ಯೇಯದ ವಿಷಯದಲ್ಲಿ ಚ್ಯುತಿತರುವಂತಹ ಯಾವ ವಿಷಯದಲ್ಲೂ ರಾಜಿಮಾಡಿಕೊಳ್ಳದವರು. ಈ ಕಾರಣದಿಂದ. ಇಂದು ವಿಚಾರಶೀಲರ ಹೃದಯದಲ್ಲಿ ಭದ್ರವಾದ ಸ್ಥಾನವನ್ನು ಪಡೆದಿದ್ದರೂ, ಅವರ ಕಾಲದಲ್ಲಿ ಅವರು ಸಾಕಷ್ಟು ಒತ್ತಡಗಳನ್ನು ಅನುಭವಿಸಿರಲಿಕ್ಕೇ ಬೇಕು.

ಸಾಮಾನ್ಯವಾಗಿ ಶ್ರೀಮಂತ ಸ್ವಾಮಿಗಳು, ಶ್ರೀಮಂತ ಭಕ್ತರು, ದೊಡ್ಡ ಹುದ್ದೆಯ ರಾಜಕಾರಣಿಗಳ ಮಧ್ಯೆ ವಿಶಿಷ್ಟ ನಂಟು ಇರುತ್ತದೆ. ಅಲ್ಲಿ, ಧಾರ್ಮಿಕವಾದ ಸಂಬಂಧ, ಗುರು-ಶಿಷ್ಯ ಬಾಂಧವ್ಯಕ್ಕಿಂತಲೂ ವ್ಯವಹಾರಿಕ ಸಂಬಂಧವೇ ಬಹಳ. ಆದರೆ ಜನಶಕ್ತಿ, ಅಥವಾ ಗಣಶಕ್ತಿ ಅಂತ ಒಂದಿರುತ್ತದೆ. ಇದು ತನ್ನದೇ ಆದ ರೀತಿಯಲ್ಲಿ ತೀರ್ಪು ನೀಡುತ್ತದೆ. ತನ್ನದೇ ಆದ ಬಾಯಿ, ಕೈ, ಕಾಲು ಇಲ್ಲದಿದ್ದರೂ ಈ ಜನಶಕ್ತಿ ಅತ್ಯದ್ಭುತವಾಗಿ ನ್ಯಾಯಾಧೀಶನಂತೆ (ಇಂದಿನ ಭಾರತದ ವಿವಿಧ ಒತ್ತಡಗಳಿಗೆ ಸಿಕ್ಕಿಬಿದ್ದ ನ್ಯಾಯಾಧೀಶರಲ್ಲ) ಕೆಲಸ ಮಾಡುತ್ತದೆ. ಇದೇ ಪ್ರಾಮಾಣಿಕ ತೀರ್ಪುಗಾರ. ಗುರುಬಸವಣ್ಣನವರೇ ಆಗಲಿ, ಬುದ್ಧ-ಏಸುವೇ ಆಗಲಿ ಇವರೆಲ್ಲ ಜನಶಕ್ತಿಯ ಬೆಂಬಲದಿಂದಲೇ ಎದ್ದು ನಿಂತು, ಅಮರಾತ್ಮರಾದವರು. ಸಾಮಾನ್ಯವಾಗಿ ನಿಜವಾದ ಮಹಾತ್ಮರು ತಂತಮ್ಮ ಕಾಲದಲ್ಲಿ ರಾಜರು, ಶ್ರೀಮಂತರಿಂದ ಓಲೈಸಿ

ಕೊಳ್ಳಲು ಸಾಧ್ಯವಾಗುವುದಿಲ್ಲ. ಆದರಲ್ಲೂ ಸಮಾಜದಲ್ಲಿ ಪರಿವರ್ತನೆ ತರಬಯಸುವ ಸಮಾಜ ಸುಧಾರಕರನ್ನು ಈ ಮೂರೂ ಜನರ ಕೂಟ ಎಂದೂ ಸಹಿಸದು. ಅವರ ಮೇಲೆ ಹಲವು ಬಗೆಯ ಒತ್ತಡಗಳನ್ನು ತರುತ್ತದೆ. ಈ ಮಹಾತ್ಮರೋ ಸರಳ ಜೀವಿಗಳು, ಅಂತಃಸಾಕ್ಷಿಯ ಬದುಕು ಬದುಕುವವರು.

ದೂಷಕನವನೊಬ್ಬ ದೇಶವ ಕೊಟ್ಟಡೆ
ಆಸೆ ಮಾಡಿ ಅವನ ಹೊರೆಯಲ್ಲಿರಬೇಡ
ಮಾದಾರ ಶಿವಭಕ್ತನಾದಡೆ,
ಆತನ ಹೊರೆಯಲ್ಲಿ ಭೃತ್ಯನಾಗಿಪ್ಪುದು ಕರಲೇಸಯ್ಯಾ ।

(ಬ. ಷ. ವ. 136)

ಇದು ಬಸವಣ್ಣನವರಂತಹವರ ಧೋರಣೆ. ಇಂಥವರಿಂದ ಹೊಗಳಿಸಿಕೊಳ್ಳುವ ಚಪಲ ರಾಜಮಹಾರಾಜರಿಗೆ, ಶ್ರೀಮಂತ ಭಕ್ತರಿಗೆ. ಕೆಲವರು ತತ್ತ್ವನಿಷ್ಠೆ, ಉದಾತ್ತ ಉದ್ದೇಶದಿಂದ ದಾನಮಾಡುವುದಕ್ಕಿಂತಲೂ ಅದರಿಂದ ಸಿಗಬಹುದಾದ ವ್ಯವಹಾರಿಕ ಲಾಭ, ಪ್ರಶಂಸೆಗಾಗಿಯೇ ಮಾಡುವುದು ಹೆಚ್ಚು. ಅಂಥವರು ಆಗುತ್ತಿರುವ ಕೆಲಸ ಕಾರ್ಯ ನೋಡಿಕೊಡರು. ಅವರು ತಪ್ಪುಮಾಡುತ್ತಿದ್ದರೂ ಅವರನ್ನು ಹೊಗಳಿ ಓಲೈಸಿಯೇ ಹಣವನ್ನು ಪಡೆದುಕೊಳ್ಳಬೇಕಾಗುವುದಷ್ಟೆ. ಸಮಾಜ ನಿರ್ಮಾಣ ಕಾರ್ಯ ಮುಂತಾಗಿ ಮಾಡುವಾಗ ಬೇಕಾಗುವ ಹಣ ವಿಪುಲ. ಅಂಥ ಹಣ ಶ್ರೀಮಂತರು, ರಾಜರು ಕೊಟ್ಟರೆ ಮಾತ್ರ ಸಾಧ್ಯ. ಅವರೋ ಹೊಗಳಿದರೆ, ಬೇಡಿದರೆ, ಒಲೈಸಿದರೆ ಕೊಡುವವರು. ಬಸವಣ್ಣನವರೋ,

ಧೃತಿಗೆಟ್ಟು ಅನ್ಯರ ಬೇಡದಂತೆ
ಮತಿಗೆಟ್ಟು ಅನ್ಯರ ಹೊಗಳದಂತೆ

ಇರುವವರು. ಹೀಗಾಗಿ ತಮ್ಮ ಮನೋವೇಗಕ್ಕೆ ತಕ್ಕಂತೆ ಯೋಜನೆಗಳನ್ನು ಪೂರೈಸದಾದಾಗ ಖಿನ್ನತೆ (*depression*) ಉಂಟಾಗುವುದು ಸಹಜ. ಆ ಖಿನ್ನತೆ 'ಅನಾಥ ನಾನಯ್ಯ' ಎಂಬ ವಚನ ವಾಕ್ಯದಲ್ಲಿ (ಬ.ಷ.ವ. 412) ಬಹಳ ಸ್ಪಷ್ಟವಾಗಿ ಶಕ್ತಿಶಾಲಿಯಾಗಿ ಮೂಡಿದೆ. ಅಂಥ ಸಂದರ್ಭದಲ್ಲಿ ಕೆಲವರು ಸೂಚಿಸಿರಬಹುದು. "ನೋಡಿ, ನೀವು ಇಷ್ಟು ಸರಳವಾಗಿದ್ದರೆ ಹೇಗೆ? ಸ್ವಲ್ಪ ಠೀವಿಯ ವೇಷಭೂಷಣ ಹಾಕಿಕೊಂಡು, ಹಣ ಉಳ್ಳವರ ಪರಿಚಯ ಮಾಡಿಕೊಂಡು ನಿಮ್ಮ ಯೋಜನೆಗೆ ಅವರಿಂದ ನೆರವು ಪಡೆಯಿರಿ. ಹೊಗಳಿಕೆಗೆ ಮರುಳಾಗದವರಾರು? ನಿಮ್ಮ ಅಂತಃಕರಣ ಶುದ್ಧಿ, ಉದಾತ್ತ ಧ್ಯೇಯವನ್ನು ಅರಿತು ದಾನಮಾಡುವವರು ಎಷ್ಟು ಜನ? ನೀವಾಗಿ ಅವರ ಬಳಿ ಹೋಗಿರಿ. ಅವರು ಸ್ವಲ್ಪ ಸ್ತುತಿಪ್ರಿಯರು, ನಮ್ಮ ಕಾರ್ಯ

ಸಾಧನೆಗಾಗಿ ಹೊಗಳಿದರೆ ನಮ್ಮ ಗಂಟೇನು ಹೋಗುವುದು. ನಿಮ್ಮ ಉದ್ದೇಶ ಒಳ್ಳೆಯದಿದೆ ತಾನೆ?

ನೀವೋ ಬರೀ ಬಡಪಾಯಿಗಳು, ಕಾಯಕ ಜೀವಿಗಳನ್ನು ಸುತ್ತ ಕಟ್ಟಿಕೊಂಡಿರುವಿರಿ. ಇವರು ದುಡಿದು ಅದಿನ್ನೆಷ್ಟು ಕೊಡಬಹುದು ? ಶರಣರು ಎಂದು ಇವರನ್ನೆಲ್ಲ ಕೂಡಿಸಿಕೊಳ್ಳುವ ಬದಲು ನಾಲ್ಕಾರು ಜನ ಶ್ರೀಮಂತರನ್ನು ನಿಮ್ಮ ಪ್ರಭಾವ ವಲಯದಲ್ಲಿ ಇಟ್ಟುಕೊಂಡಿದ್ದರೆ ನಿಮ್ಮ ಯೋಜನೆಗಳಿಗೆಲ್ಲ ಮಹಾಪೂರದಂತೆ ಹಣ ಬರುವುದಲ್ಲವೆ? ಈ ಬಡಪಾಯಿ ಶರಣರು ಕೊಡುವ ಮನ್ನಣೆಗಿಂತಲೂ ಅಂಥ ನಾಲ್ಕಾರು ಜನ ಶ್ರೀಮಂತ ಶಿಷ್ಯರು, ಪ್ರಭಾವಶಾಲಿ ರಾಜಕಾರಣಿಗಳಿದ್ದರೆ ಸಾಕು!"

ಈ ಹಿತೋಪದೇಶಕ್ಕೆ(?) ಬಸವಣ್ಣನವರು ಕೊಟ್ಟ ಉತ್ತರ "ಅಡ್ಡ ದೊಡ್ಡ ನಾನಲ್ಲವಯ್ಯ" ಎಂಬ ವಚನದಲ್ಲಿ ಪೂರ್ಣವಾಗಿ ಮೂಡಿಬಂದಿದೆ. "ನಿಮ್ಮ ಬುದ್ಧಿವಾದ ಬಹಳ ಮಾರ್ಮಿಕವಾಗಿದೆ ಮಹನೀಯರೆ! ಅಂಥ ದೊಡ್ಡವರ ಸಹವಾಸಮಾಡುವಷ್ಟು ದೊಡ್ಡವ ನಾನಲ್ಲ. ಠೀವಿಯ ನಿಲುವಿಗಾಗಲೀ, ವೈಭವದ ವೇಷವಾಗಲಿ ನನ್ನದಲ್ಲ. ನಮ್ಮ ಶರಣರು (ನೋಡಲು ಬಡಪಾಯಿಗಳಿರಬಹುದು. ಆದರೆ ಅವರು) ಗುಣಗ್ರಾಹಿಗಳು, ಅವರು ಅಂತರಂಗದಲ್ಲಿ ದೊಡ್ಡವರಿರುವವರನ್ನು ಮಾತ್ರ ಮನ್ನಿಸುವ ಗುಣವುಳ್ಳವರು. ವೇಶ್ಯೆ ಶ್ರೀಮಂತ ವಿಟನನ್ನು ಕಂಡಾಗ, ಅವನ ಕಡೆಯಿಂದ ಅತಿ ಹೆಚ್ಚು ಹಣ, ಆಭರಣಗಳನ್ನು ಹೇಗೆ ಸಂಪಾದಿಸಬಹುದೆಂದು ಲೆಕ್ಕ ಹಾಕಿ ಬಗೆಬಗೆಯಿಂದ ಹೊಗಳುವಳು, ಸ್ತೋತ್ರ ಮಾಡುವಳು. ಉಳಿದೆಲ್ಲ ವಿಟರಿಗಿಂತಲೂ ಈತನ ಬಗ್ಗೆಯೇ ಅವಳಿಗೆ ನಿಜವಾದ ಪ್ರೇಮ ಎಂದು ಅನ್ನುವಳು. ಅದೇ ರೀತಿ ಗುಣ, ಭಕ್ತಿ ಇಲ್ಲದೆ ಬರೀ ಹಣ ಇರುವವರನ್ನು ಹುಡುಕಿ ಹುಡುಕಿ ಅವರಿಗೇ (ಇಷ್ಟವಿಲ್ಲದೆ ಇರಲಿ, ಬಿಡಲಿ) ಬೋಧೆ ಮಾಡುವುದು, ದೀನನಾಗಿ ಅವರನ್ನು ದಾನ ಮಾಡಲು ಪ್ರಾರ್ಥಿಸುವುದು, ಅವರನ್ನು ಸುಪ್ರೀತರನ್ನಾಗಿ ಮಾಡಲು ಮತಿಗೆಟ್ಟು ಹೊಗಳುವುದು ನನ್ನ ಕೈಲಾಗದು. ನಾನೇನು ಬಹುದೊಡ್ಡ ಮನುಷ್ಯನೆಂದು ತೋರಿಸಿಕೊಳ್ಳಲು ಬಯಸುವುದಿಲ್ಲ. ನಾನು **ಅಂಜುವುದು** ಅಂತಃಸಾಕ್ಷಿಯ ಬದುಕು ಬದುಕುವ ಶರಣರಿಗೇ ವಿನಾ ರಾಜರಿಗಲ್ಲ, ಸಿರಿವಂತರಿಗಲ್ಲ. ಅವರೇ ನಿಷ್ಪಕ್ಷಪಾತದಿಂದ ಸತ್ಯವನ್ನು ನುಡಿಯುವವರು ಮತ್ತು ಸತ್ಯವನ್ನು ಎತ್ತಿಹಿಡಿಯುವವರು. ಆ ದೃಷ್ಟಿಯಲ್ಲಿ ನಾನು ಅನಾಥನಿರಬಹುದು; ಏಕೆಂದರೆ ಸಮಾಜದಲ್ಲಿ ಅತಿದೊಡ್ಡವರೆನ್ನಿಸಿಕೊಂಡವರು ನನ್ನೊಡನೆ ಸಹಕರಿಸಲಿಕ್ಕಿಲ್ಲ. ಇರಲಿ, ದೇವರ ಕೃಪೆ ಪಡೆದ ಶರಣರು ನನ್ನ ಬಂಧು ಬಳಗ ಸರ್ವಸ್ವವಾಗಿದ್ದಾರೆ.

ಬಸವಣ್ಣನವರು ದೀನರಲ್ಲಿ ದೀನರನ್ನೂ, ದುಃಖಿತರಲ್ಲಿ ಅತಿ ದುಃಖಿತರನ್ನು ಗುರುತಿಸಿ, ಅವರೊಡನೆ ಸ್ಪಂದಿಸಿ, ಅವರನ್ನು ಸಾಂತ್ವನಿಸಿ, ಅವರಲ್ಲಿ ಆತ್ಮವಿಶ್ವಾಸ

ತುಂಬಿ, ನಡೆಲಿಂಗಗಳನ್ನಾಗಿ ಮಾಡಿದರು. ಅವರನ್ನು ತಮ್ಮ ಶಿವಪಥದ ಸಹ ಪಥಿಕರೆಂದು ಭಾವಿಸಿದರು. ಶರಣರನ್ನು ಜಾತಿ ಉದ್ಯೋಗ ಅಂತಸ್ತುಗಳಿಂದ ಅಳೆಯದೆ ಅವರು ಸಾಧಿಸಿದ ಸಾಧನೆಯಿಂದ ಅಳೆದರು.

ಅಂಜುವೆ ಪ್ರಮಥರಿಗೆ

"ಅಂಜುವೆನಂಜುವೆ ನಿಮ್ಮ ಪ್ರಮಥರಿಗೆ" ಎಂಬ ಮಾತು ಬಹಳ ಶಕ್ತಿಶಾಲಿಯಾಗಿದೆ. ಪ್ರಮಥರಿಗೆ, ಶರಣರಿಗೆ, ಸಾತ್ವಿಕರಿಗೆ, ನೀತಿವಂತರಿಗೆ ಅಂಜುವುದು ಕಲ್ಯಾಣ ರಾಜ್ಯದ ಲಕ್ಷಣವೇ ವಿನಾ ಸರ್ವಾಧಿಕಾರಿಗಳಾದ ಅಧಿಕಾರಿಗಳು, ಮದದಿಂದ ಬೀಗಿದ ಹಣವಂತರಿಗಲ್ಲ. *Philosophers should rule the country* ಎಂದು ಅನೇಕ ಮಹನೀಯರು ಹೇಳಿದರು. ಇಲ್ಲಿ ಫಿಲಾಸಫರ್ಸ್ ಎಂದರೆ ದಂತ ಗೋಪುರದ ತತ್ತ್ವಜ್ಞಾನಿಗಳಲ್ಲ. ಅಂತಃಸಾಕ್ಷಿಯ ಬದುಕನ್ನು ಬದುಕುವ ಸತ್ಯ ಚಿಂತಕರು ಎಂದು ಅರ್ಥ.

ಇಂದಿನ ದೇಶದಲ್ಲಿ ನಾವು ಏನನ್ನು ಕಾಣುತ್ತೇವೆ. ದರ್ಪದ ಕೆಲವು ಅಧಿಕಾರಿಗಳಿಗೆ, ಅಧಿಕಾರದಲ್ಲಿರುವ ರಾಜಕಾರಣಿಗೆ ಹೆದರಿದಷ್ಟು ಕೆಲವು ಜನ ಯಾವ ಧಾರ್ಮಿಕ ಗುರುವಿಗೂ ಹೆದರರು. ಇದು ಬಿಡಿ ;ಧಾರ್ಮಿಕ ನೇತಾರರೇ ಅಧಿಕಾರಿಗಳನ್ನೂ, ರಾಜಕಾರಣಿಗಳನ್ನೂ ಹೊಗಳಿ, ಸ್ತುತಿಸಿ, ಓಲೈಸುವಾಗ ಇನ್ನೂ ಹೆಂಡತಿ ಮಕ್ಕಳು ಸಂಸಾರ ತಾಪತ್ರಯ ಇರುವ ಗೃಹಸ್ಥನ ಗತಿ ಏನು ?

ಇನ್ನು ಊರು-ಹಳ್ಳಿಗಳಿಗೆ ಬರುವುದಾದರೆ ಅಟ್ಟಹಾಸದ ಜನರಿಗೆ, ಗೂಂಡಾಗಳಿಗೆ ಹೆದರಿ ಓಲೈಸುವರು. ಅಲ್ಲಿ ಯಾರಾದರೂ ಸಾತ್ವಿಕರು, ಸಜ್ಜನರು, ಪ್ರಾಮಾಣಿಕರು, ನೀತಿವಂತರು ಇದ್ದು ಬುದ್ಧಿ ಹೇಳ ಹೋದರೆ ಅವರನ್ನೇ ವಿಡಂಬಿಸಿ, ಅಪಹಾಸ್ಯ ಮಾಡುವರು. "ಬೇಡಿ....ಹೀಗೆ ಮಾಡಬೇಡಿ. ಅನ್ಯಾಯ ದೇವರು ಮೆಚ್ಚ." ಎಂದು ಅಂಥವರು ಸಾತ್ವಿಕವಾದ ಆದರ್ಶ ಹೇಳಿದರೆ ಅವನನ್ನು, 'ಓಹೋ ....ಸತ್ಯ ಹರಿಶ್ಚಂದ್ರನ ಮೊಮ್ಮಗ, ಗಾಂಧೀಜಿ ತುಂಡು, ಬಸವಣ್ಣನವರ ಮರಿ ಮಗ...."ಎಂದೆಲ್ಲ ಹೀಯಾಳಿಸುವರು. ಸತ್ಯ–ನೀತಿ–ನ್ಯಾಯಗಳನ್ನು ಕೈಕಟ್ಟಿ ಮೂಲೆಗೆ ಕೂರಿಸಿ, ಅಸತ್ಯ, ಅನೀತಿ–ಅನ್ಯಾಯ ವಿಜೃಂಭಿಸುವ ಸಮಾಜ, ಮಾನವ ಸಮಾಜದ ದುರಂತವೇ ಸರಿ.

ಇದು ಆಗದೆ, ನೀತಿ-ನ್ಯಾಯಗಳು ಪಟ್ಟವೇರಬೇಕು ಎಂಬುದೇ ಬಸವಗೀತೆಯ ಅಂತರಾರ್ಥ.

* *

ಭೂ ಸ್ವಾಧೀನ ಬೇಡ

—: ಮುಖ್ಯ ಮಂತ್ರಿಗಳಿಗೆ ಸಲ್ಲಿಸಿದ ಮನವಿ :—

ಮಾನ್ಯರಾದ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ, ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ :

1. ಉಲ್ಲೇಖ : ಕರ್ನಾಟಕ ರಾಜ್ಯ ಪತ್ರ, ಗುರುವಾರ, ಜೂನ್ 14, 1990, ಭಾಗ ೯ ಬ 4 (1), ಕ್ರ– LAQ/LMT/C. R-2/89-90 ದಿ. 30-5-1990. ಈ ಉಲ್ಲೇಖದ ಪ್ರಕಾರ ಸೂಚಿಸಿರುವ, ಭೂ ಸ್ವಾಧೀನವನ್ನು ಕೈಬಿಡುವುದು.
2. ಸರ್ಕಾರವು ಈಗಾಗಲೇ ವಶಪಡಿಸಿಕೊಂಡು ಖಾಲಿ ಬಿಟ್ಟಿರುವ ಜಮೀನಿನಲ್ಲಿ ಅಂತರರಾಷ್ಟ್ರೀಯ ಬಸವ ಕೇಂದ್ರ ನಿರ್ಮಾಣ ಮಾಡುವುದು.
3. ಶ್ರೀ ಸಂಗಮೇಶ್ವರ ದೇವಾಲಯದ ಪುನರ್‌ರಚನೆ, ಬಸವೇಶ್ವರ ಐಕ್ಯ ಮಂಟಪವನ್ನು ಪೂರ್ಣಗೊಳಿಸುವ ಕಾರ್ಯಗಳನ್ನು ಬೇಗನೆ ಪೂರೈಸುವುದು.
4. ವಿಶ್ವನಾಥರೆಡ್ಡಿ ಮುದ್ನಾಳ್ ಸಮಿತಿಯ ವರದಿಯಲ್ಲಿ ತಿದ್ದುಪಡಿ.

ಕೂಡಲ ಸಂಗಮವು ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿರುವ ಸುಕ್ಷೇತ್ರ. ಇದು ಪುರಾತನ ಶ್ರೀ ಸಂಗಮೇಶ್ವರ ದೇವಾಲಯವನ್ನು ಹೊಂದಿರುವುದೇ ಅಲ್ಲದೆ ಜಗತ್ತಿನ ಪ್ರಥಮ ಸಮತಾವಾದಿ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರವೂ ಹೌದು. ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಬಸವ ಸಾಗರ ಜಲಾಶಯ ನಿರ್ಮಾಣವಾದಾಗ ಒತ್ತಿ ನಿಲ್ಲುವ ಹಿನ್ನೀರಿನಿಂದಾಗಿ ಕೂಡಲಸಂಗಮದ ಶ್ರೀ ಬಸವೇಶ್ವರ ಐಕ್ಯ ಮಂಟಪವು ಮುಳುಗಡೆ ಆಗುವುದೆಂದು ಕಾಂಕ್ರೀಟ್ ಕೊಳವೆ ಭಾವಿ ಹಾಕಿ ರಕ್ಷಿಸಲ್ಪಟ್ಟಿದೆ. ಶ್ರೀ ಸಂಗಮೇಶ್ವರ ದೇವಾಲಯವು ಮುಳುಗಡೆ ಆಗುವುದೆಂಬ ತಪ್ಪು ಕಲ್ಪನೆಯಿಂದಾಗಿ ಬಿಚ್ಚಲ್ಪಟ್ಟಿತಾದರೂ ಕಾಲಾನಂತರದಲ್ಲಿ ದೇವಾಲಯವು F.R.L. (ಪೂರ್ಣ ಜಲಾಶಯ ಮಟ್ಟ)ಕ್ಕಿಂತ ಮೇಲಿರುವುದಾಗಿ

ಮನವರಿಕೆಯಾಯಿತು. ಶ್ರೀ ಸಂಗಮೇಶ್ವರನ ಭಕ್ತವೃಂದವು ಮೂಲ ಸ್ಥಳದಲ್ಲೇ ದೇವಾಲಯವನ್ನು ಉಳಿಸಿಕೊಳ್ಳಲು ಚಳುವಳಿ ಪ್ರಾರಂಭಿಸಿದಾಗ ಹಿಂದಿನ ಸರಕಾರವು ಜನರ ಒತ್ತಾಯಕ್ಕೆ ಬೆಲೆ ಕೊಟ್ಟು ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ ಸಮಿತಿಯನ್ನು ನೇಮಕ ಮಾಡಿತು. ಈ ಸಮಿತಿಯು ಜೂನ್ 7ನೆಯ ತಾರೀಖು 1988ರಲ್ಲಿ ವರದಿಯನ್ನು ಸಲ್ಲಿಸಿತು.

ಈ ವರದಿಯಲ್ಲಿ ಕೂಡಲ ಸಂಗಮ ಕ್ಷೇತ್ರದ ಮತ್ತು ಹೊಸ ಸಂಕೀರ್ಣ ಅಭಿವೃದ್ಧಿ ಕುರಿತು ಕೆಲವು ಯೋಜನೆಗಳು, ಶಿಫಾರಸುಗಳು ಇವೆ. ಸಂಗಮೇಶ್ವರ ದೇವಾಲಯವನ್ನು, ಈಗ ಗರ್ಭಗುಡಿ ಮಾತ್ರ ಉಳಿದಿರುವುದರಿಂದ ಕಳಚಬಾರದೆಂದು (6:1) ಅದರ ತಳಪಾಯವನ್ನು ಮತ್ತು ಗರ್ಭಗುಡಿಯನ್ನು ಆಧುನಿಕ ತಂತ್ರಜ್ಞಾನ ಬಳಸಿ ಭದ್ರಗೊಳಿಸಿ ಪುನಃ ಅದೇ ಸ್ಥಳದಲ್ಲಿ ಮೊದಲಿನಂತೆ ನಿರ್ಮಾಣ ಮಾಡಿಕೊಡಬೇಕೆಂದು ಶಿಫಾರಸು ಮಾಡಲಾಗಿದೆ.

ದೇವಾಲಯದ ಪರಿಸರವನ್ನು ಅಂದಗೊಳಿಸಬೇಕೆಂದು (6:10) ಶಿಫಾರಸು ಮಾಡಲಾಗಿದೆ. 6ನೆಯ ಅಧ್ಯಾಯದಲ್ಲಿ ಬಂದಿರುವ 1ರಿಂದ 19ರ ವರೆಗಿನ ಅಂಶಗಳು ಬಹಳ ಸೂಕ್ತವಾಗಿವೆ ಮತ್ತು ಜನರ ಮೆಚ್ಚುಗೆಗೆ ಪಾತ್ರವಾಗಿವೆ.

ಕ್ಷೇತ್ರದ ಹಿತಾಸಕ್ತಿ, ಬಸವ ಧರ್ಮ ಪೀಠ ಮತ್ತು ಜನಹಿತಕ್ಕೆ ವಿರುದ್ಧ ವಿಚಾರ

ಅಧ್ಯಾಯ 7ರಲ್ಲಿ ನೂತನ ಅಭಿವೃದ್ಧಿ ಕುರಿತು ಯೋಜನೆ, ಸೂಚನೆ, ಶಿಫಾರಸುಗಳಿವೆ. 7:2ರಲ್ಲಿ ಅಂತರ ರಾಷ್ಟ್ರೀಯ ಬಸವ ಕೇಂದ್ರವನ್ನು ಸ್ಥಾಪಿಸಲು ಮಾಡಿರುವ ಶಿಫಾರಸು ಚೆನ್ನಾಗಿರುವುದಾದರೂ 7:3 ಮತ್ತು 7:4 ಅಂಶಗಳು ಈಗ ಜನರ ಆಗ್ರಹಕ್ಕೆ ಕಾರಣವಾಗಿವೆ.

1. ಮುದ್ನಾಳ ಸಮಿತಿ ವರದಿಯು ಸಲ್ಲಿಸಲ್ಪಟ್ಟು ಇಲ್ಲಿಗೆ ಎರಡು ವರ್ಷ ಒಂದು ತಿಂಗಳು ಗತಿಸಿದರೂ ಶ್ರೀ ಸಂಗಮೇಶ್ವರ ದೇವಾಲಯದ ಪುನರ್ನಿರ್ಮಾಣ ಕೆಲಸ ಕಿಂಚಿತ್ತೂ ಆರಂಭವಾಗಿಲ್ಲ. ಮಳೆಗಾಲಗಳು ಧಾವಿಸುತ್ತಿದ್ದರೂ ಗ್ರೌಟಿಂಗ್ ತಂತ್ರಜ್ಞಾನ ಬಳಸಿ ಅಡಿಪಾಯವನ್ನು ಭದ್ರಗೊಳಿಸಲಿಲ್ಲ.
2. ದಿನನಿತ್ಯ ಸಹಸ್ರಾರು ಜನರು, ಶರಣ ಮೇಳದಂತಹ ಸಮಯದಲ್ಲಿ ಲಕ್ಷಾಂತರ ಯಾತ್ರಿಕರು ಶ್ರಮಪಟ್ಟು ಕಟ್ಟಿಗೆಯ ಮೆಟ್ಟಿಲ ನೆರವಿನಿಂದ ಶ್ರೀ ಬಸವೇಶ್ವರ ಐಕ್ಯಮಂಟಪಕ್ಕೆ ಹೋಗುತ್ತಿದ್ದಾರೆ. ಹಲಗೆಗಳು ಸಡಲಿ ಅಥವಾ ಕೊಳೆತು ಸ್ವಲ್ಪ ಕುಸಿದರೂ ಕೆಳಗೆ ಜಲಾಶಯದಲ್ಲಿ ವಿಪರೀತ ನೀರು ಇರುವುದರಿಂದ ಸಾಕಷ್ಟು ಜೀವಹಾನಿಯಾಗುತ್ತದೆ. ಆ ದುರಂತ ಕಲ್ಪನಾತೀತವಾದುದು. ಹೀಗಿದ್ದರೂ ಸಂಬಂಧಿಸಿದ ಸರ್ಕಾರಿ ಅಧಿಕಾರಿಗಳು ತೋರುವ ನಿರ್ಲಕ್ಷ್ಯ ಕಂಡು

ಜನರು ಆಶ್ಚರ್ಯಚಕಿತರಾಗಿದ್ದಾರೆ, ಬಂದು ಹೋಗುವ ಪ್ರವಾಸಿಕರೂ ಚರ್ಚಿಸುತ್ತ ಹೋಗುತ್ತಾರೆ. ಶ್ರೀ ಬಸವೇಶ್ವರ ಐಕ್ಯ ಮಂಟಪಕ್ಕೆ ಸುಭದ್ರವಾದ ಶಾಶ್ವತ ಸೋಪಾನ ಮಾಡುವುದು ತೀರಾ ಅತ್ಯಗತ್ಯವಾದ ಕೆಲಸವಾಗಿದೆ.

3. ಸಂಗಮೇಶ್ವರ ದೇವಾಲಯವನ್ನು ¾ ಭಾಗ ಬಿಚ್ಚಿರುವುದರಿಂದ ಅದು ಬಹಳ ಶಿಥಿಲವಾಗಿ, ಪಾಳು ದೇವಾಲಯದಂತೆ ಕಾಣುತ್ತಿದೆ. ಅದರ ಸುತ್ತಲೂ ಇದ್ದ ಮಣ್ಣಿನ ಮನೆಗಳನ್ನು ಕೆಡವಿಸಲಾಗಿದೆ. ದೇವಾಲಯದ ಆವರಣ ಮತ್ತು ಪರಿಸರವನ್ನು ಯೋಜನೆ ಪ್ರಕಾರ ಸುಂದರೀಕರಣ ಮಾಡುವ ಕೆಲಸವನ್ನು ಕೈಗೆತ್ತಿಗೊಂಡಿಲ್ಲ. ಈಗ ಆ ಪ್ರದೇಶವೆಲ್ಲ ಬಿದ್ದ ಗೋಡೆ, ಕಲ್ಲುಮಣ್ಣಿನ ರಾಶಿಯಿಂದ ಕೊಂಪೆಯಾಗಿ (Slum) ತೋರುತ್ತಿದೆ. ಹೀಗಾಗಿ ಬಂದ ಜನರೆಲ್ಲ ಪರಿಸ್ಥಿತಿಯನ್ನು ಕಂಡು ಮರುಗುತ್ತ, ಸರ್ಕಾರಿ ಅಧಿಕಾರಿಗಳನ್ನು ದೂಷಿಸುತ್ತಾ ಹೋಗುವುದು ಸಾಮಾನ್ಯವಾಗಿದೆ.

ಪರಿಸ್ಥಿತಿ ಹೀಗಿರುವಾಗ ಘನ ಸರ್ಕಾರದ ಅಧಿಕಾರಿಗಳು ಮೇಲೆ ಸೂಚಿಸಿದ ಅತ್ಯಗತ್ಯವಾದ ಯಾವ ಕೆಲಸಗಳನ್ನೂ ಕೈಗೆತ್ತಿಕೊಳ್ಳದೆ ಅಥವಾ ಆ ಬಗ್ಗೆ ಸರ್ಕಾರಕ್ಕೆ ಶಿಫಾರಸು ಮಾಡದೆ, ದಿಢೀರೆಂದು ಬಹು ಜನರಿಗೆ ತೊಂದರೆಯನ್ನುಂಟುಮಾಡುವ ಕೆಲಸಕ್ಕೆ ತೊಡಗಿದ್ದು, ಇಡೀ ಕೂಡಲ ಸಂಗಮ ಮತ್ತು ಸುತ್ತಲಿನ ಗ್ರಾಮಗಳವರನ್ನು ಮಾತ್ರವಲ್ಲ ಕರ್ನಾಟಕದ ಎಲ್ಲ ಜನರನ್ನು ದಿಗ್ಭ್ರಾಂತಗೊಳಿಸಿದೆ.

(ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ ಮತ್ತು ಸುಧಾ ಮುಂತಾದ ಪತ್ರಿಕೆಗಳಲ್ಲಿ ಈ ಬಗ್ಗೆ ಜನರ ಗಮನ ಸೆಳೆಯುವ ಲೇಖನಗಳು ಪ್ರಕಟವಾಗಿವೆ.)

ಮುದ್ನಾಳ್ ಸಮಿತಿ ವರದಿಯ 7:3ನೇ ಅಂಶವನ್ನು ಜಾರಿಗೆ ತರುವ ಉದ್ದೇಶದಿಂದಲೋ ಏನೋ ಈಗ ಕೃಷ್ಣಾ ಮೇಲ್ದಂಡೆ ಅಧಿಕಾರಿಗಳು ನೂರಾರು ಎಕರೆ ಹೊಸ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ತಜವಿಜಿಯಲ್ಲಿರುವರು. ಭೂಮಾಲಿಕರುಗಳಿಗೆ 4 (1) ಕಲಂ ನೋಟೀಸು ಜಾರಿ ಮಾಡಿರುವರು. ನೋಡಿರಿ–ಕರ್ನಾಟಕ ರಾಜ್ಯ ಪತ್ರ, ಗುರುವಾರ, ಜೂನ್ 14, 1990, ಭಾಗ ೯ ಬ. 4 (1) ನೋಟೀಸಿನ ಉಲ್ಲೇಖ ಸಂಖ್ಯೆ, ಕ್ರ. LAQ/LMT/C.R.–2/89-90-ದಿನಾಂಕ 30-5-1990.

ಅಂತರ ರಾಷ್ಟ್ರೀಯ ಬಸವ ಕೇಂದ್ರವನ್ನು ಮಾಡಿ ಕೂಡಲ ಸಂಗಮವನ್ನು ಅಂತರ ರಾಷ್ಟ್ರೀಯ ಖ್ಯಾತಿ ಹೊಂದುವಂತೆ ಮಾಡುವ ಸರ್ಕಾರದ ಉದ್ದೇಶ ಘನವಾಗಿದ್ದರೂ ಜನರಿಗೆ ಹೆಚ್ಚಿನ ಕಿರುಕುಳವಾಗದಂತೆ, ಯೋಜನೆಯನ್ನು ಕಾರ್ಯಗತ ಮಾಡಲು ಸಾಧ್ಯವಿದೆ.

1. ಈಗಾಗಲೇ ಕರ್ನಾಟಕ ಸರ್ಕಾರವು ವಶಪಡಿಸಿಕೊಂಡು ತಂತಿ ಬೇಲಿ ಹಾಕಿಟ್ಟು ಪಾರ್ಥೇನಿಯಂ ಮತ್ತು ಜಾಲಿವನವನ್ನು ನಿರ್ಮಿಸಿರುವ ಸುಮಾರು 102 ಎಕರೆ ಜಮೀನು ಖಾಲಿ ಬಿದ್ದಿದೆ. ಈ ವಿಸ್ತಾರವಾದ ಮೈದಾನವನ್ನು ಶ್ರೀ

ಸಂಗಮೇಶ್ವರ ದೇವಾಲಯವನ್ನು ಕಟ್ಟಲಿಕ್ಕಾಗಿ ವಶಪಡಿಸಿಕೊಳ್ಳಲಾಗಿತ್ತು. ಈಗ ಸಂಗಮೇಶ್ವರ ದೇವಾಲಯ ಮೂಲಸ್ಥಳದಲ್ಲಿಯೇ ಉಳಿಯುವುದರಿಂದ ವಶಪಡಿಸಿಕೊಂಡಿರುವ ಜಮೀನನ್ನು ಖಾಲಿ ಬಿಡುವ ಬದಲು ಬಸವ ತತ್ತ್ವ ಪ್ರಸಾರ ಕೇಂದ್ರಕ್ಕೆ ವಿನಿಯೋಗಿಸಬಹುದು. ಬೇಲಿ ಹಾಕದೆ ಇರುವ, ಭೂಮಾಲಿಕರಿಗೆ ಪರಿಹಾರ ನೀಡಿ ವಶಪಡಿಸಿಕೊಂಡಿರುವ ಜಮೀನು, ನದಿ ದಂಡೆಗೆ ಹೊಂದಿಕೊಂಡಂತೆ ಸಾಕಷ್ಟಿದೆ. ಇದನ್ನೂ ಉಪಯೋಗಿಸಿಕೊಳ್ಳಬಹುದು.

2. ವಿವೇಚನಾ ರಹಿತವಾಗಿ ಈಗ ಪುನಃ 300 ಎಕರೆ ಜಮೀನುಗಳನ್ನು ವಶಪಡಿಸಿಕೊಂಡು ಇಡುವುದರಿಂದ ಸರ್ಕಾರಕ್ಕೆ ಅನುತ್ಪಾದಕ ವೆಚ್ಚವಾಗುವುದು. ಬೆಳೆಯುವ ಜಮೀನು ಹಾಳಾಗುವುವು.

ಕೂಡಲ ಸಂಗಮ ಗ್ರಾಮ ಮತ್ತು ಅದರ ಸುತ್ತಲಿನ ಚೌಡಕಮಲದಿನ್ನಿ, ಕಜಗಲ್, ಕೆಂಗಲ್ ಮುಂತಾದ ಗ್ರಾಮಗಳು ಬಡಗ್ರಾಮಗಳಿದ್ದು ಕೃಷಿ ಕಾರ್ಮಿಕರು ಬಹಳ ಸಂಖ್ಯೆಯಲ್ಲಿದ್ದಾರೆ. ಸರ್ಕಾರವು ಮನಸ್ಸಿಗೆ ಬಂದಂತೆ ಜಮೀನನ್ನು ವಶಪಡಿಸಿಕೊಳ್ಳುವುದರಿಂದ, ಇಲ್ಲಿಯ ಎಲ್ಲ ಕಾರ್ಮಿಕರು ನಿರುದ್ಯೋಗಿಗಳಾಗಿ, ಅನ್ಯ ಜಿಲ್ಲೆ, ರಾಜ್ಯಗಳಿಗೆ ವಲಸೆ ಹೋಗುವ ಪರಿಸ್ಥಿತಿಯುಂಟಾಗುತ್ತದೆ.

ಮುಳುಗಡೆ ಪ್ರದೇಶವೆಂದು, ಗರಸು ಮಣ್ಣಿಗೆಂದು, ವಿವಿಧ ಯೋಜನೆಗಳಿಗೆ ಈಗಾಗಲೇ ಸಾಕಷ್ಟು ಜಮೀನನ್ನು ಕಳೆದುಕೊಂಡಿರುವ ಸಂಗಮ ಗ್ರಾಮದ ಭೂಮಾಲಿಕರು ಮತ್ತು ಕೃಷಿಕರು ದಿಕ್ಕು ತೋಚದಂತಾಗಿದ್ದಾರೆ. ಜಲಾಶಯದ ಹಿನ್ನೀರಿನ ಸೌಲಭ್ಯ ಸದುಪಯೋಗ ಮಾಡಿಕೊಳ್ಳಲು ಸಂಬಂಧಿಸಿದ ಇಲಾಖೆಗಳಿಂದ ಅನುಮತಿ ಪಡೆದು ಸಾವಿರಾರು ಅಡಿ ಪೈಪುಗಳನ್ನು ತಂದು ಲಕ್ಷಾಂತರ ರೂಪಾಯಿಗಳ ಬಂಡವಾಳ ಹಾಕಿರುವ ಜನರ ಸಂಕಟ ವಿಪರೀತ.

"ಯೋಜನೆಗಳು ಜನರು ಬದುಕಲೆಂದೇ ಹೊರತು ಜನರನ್ನು ಹಿಂಸಿಸಲಲ್ಲ." ಎಂದು ನಮ್ರವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇವೆ.

3. ಮುದ್ನಾಳ್ ವರದಿಯಲ್ಲಿ ಶಿಫಾರಸು ಮಾಡಲಾಗಿರುವ ಬಸವ ತತ್ತ್ವ ಪ್ರಸಾರ ಕೇಂದ್ರದ ಕಲ್ಪನೆ ಕಾಗದದಲ್ಲಿ ಬಹು ರಮ್ಯವಾಗಿ ತೋರಿದರೂ ಸರ್ಕಾರವು ಅದನ್ನು ಜಾರಿಗೆ ತರುವ **ಪ್ರಾಯೋಗಿಕತೆ ಬಗ್ಗೆ ಮುಂದಾಲೋಚನೆ ಮಾಡುವುದು ಸೂಕ್ತ.** ಸರ್ಕಾರಿ ಇಲಾಖೆಗಳ ಮೂಲಕ ಅಂಥವನ್ನು ಕಾರ್ಯಗತಗೊಳಿಸುವಾಗ ಇತಿಮಿತಿ ಅರಿಯುವುದು ಅಗತ್ಯ. ಈಗಾಗಲೇ ಕೂಡಲ ಸಂಗಮದಲ್ಲಿ ಸಾರ್ವಜನಿಕರಿಗೆ ಯಾವುದೇ ರೀತಿ ಉಪಯೋಗವಾಗದೆ ಇರುವ, ಸರ್ಕಾರದ ಬೊಕ್ಕಸದಿಂದ ಸಾಕಷ್ಟು ಹಣ ಅರ್ಥರಹಿತವಾಗಿ ವ್ಯಯವಾಗಿರುವ ಕೆಲಸಗಳು ಅರ್ಧಂಬರ್ಧ ಆಗಿ ನಿಂತಿವೆ. ಮುಂದಾಲೋಚನೆಯಿಲ್ಲದೆ ಸರ್ಕಾರಿ ಅಧಿಕಾರಿಗಳು ಮಾಡುವ ಕೆಲಸಕ್ಕೆ ಮೂಕ ಸಾಕ್ಷಿಯಾಗಿವೆ.

7:4ನೇ ಅಂಶದಲ್ಲಿ ತಿದ್ದುಪಡಿಗೆ ಮನವಿ.

ಸಂಗಮ ಸಂಕೀರ್ಣದ ಸುತ್ತಣ ಗಡಿಗೆ ಒಂದು ಕಿಲೋಮಿಟರ್ ದೂರದಲ್ಲಿ ಯಾವುದೇ ಕಟ್ಟಡ ನಿರ್ಮಾಣಕಾರ್ಯ ನಡೆಯಬಾರದೆಂದು ಮುದ್ನಾಳ ಸಮಿತಿ ವರದಿಯಲ್ಲಿ (7:4) ಹೇಳಲಾಗಿದೆ.

1. 1988ರಲ್ಲಿ ಈ ವರದಿಯು ಅಂಗೀಕೃತವಾಗುವುದಕ್ಕೆ ಮೊದಲಿಗೇ ಸಂಗಮದ ಸಂಕೀರ್ಣದ ಸುತ್ತಲೂ ಶ್ರೀ ಸಂಗಮೇಶ್ವರ ಬೋರ್ಡಿಂಗ್, ಮಾಧ್ಯಮಿಕ ಶಾಲೆ, ಪಶುವೈದ್ಯ ಶಾಲೆ, ಪ್ರವಾಸಿ ಮಂದಿರ, ಇನ್ಸ್‌ಪೆಕ್ಷನ್ ಬಂಗಲೆ, ಬಸವ ಧರ್ಮ ಪೀಠದ ಅತಿಥಿಗೃಹ, ಬಸವೇಶ್ವರ ದೇವಾಲಯ, ಅರ್ಚಕರ ಕಾಲನಿ, ದಲಿತರಿಗಾಗಿಯೇ ಸರ್ಕಾರವು ಕಟ್ಟಿಸಿಕೊಟ್ಟ ಜನತಾ ಮನೆಗಳು ಇವೆ. ಯಾವುದೇ ಕಟ್ಟಡ ಇರಬಾರದು ಎಂದರೆ ಈ ಕಟ್ಟಡಗಳನ್ನು ಏನು ಮಾಡಬೇಕು ? ಅರ್ಚಕ ಸಮುದಾಯ ಇರುವ ಕಾಲನಿಯು ಸಂಗಮ ಸಂಕೀರ್ಣದ ಗಡಿಗೆ ಹೊಂದಿಕೊಂಡೇ ಇದೆ. ದೇವಾಲಯದ ಸುತ್ತಲೂ ಇದ್ದವರನ್ನು ಅಲ್ಲಿಂದ ಬಿಡಿಸಿ, ಸರ್ಕಾರವೇ ಅವರಿಗೆ ಹೊಸದಾದ ಕಾಲನಿ ರಚಿಸಿ, ಕಟ್ಟಡ ಕಟ್ಟಲು ಸಲಕರಣೆ ಒದಗಿಸಿದೆ. ತಮಗೆ ಕೊಡಲ್ಪಟ್ಟ ಸೈಟುಗಳಲ್ಲಿ ಅರ್ಚಕರು ಮನೆ ಕಟ್ಟಿಕೊಂಡಿದ್ದಾರೆ. ಕಟ್ಟಿಸಿಕೊಳ್ಳುತ್ತಿದ್ದಾರೆ. ಇನ್ನು ಇವರೆಲ್ಲ ಪುನಃ ಎತ್ತಂಗಡಿ ಆಗಬೇಕೆ?

ಈಗಾಗಲೇ ಸಂಗಮೇಶ್ವರನ ಪೂಜೆಗೆ ಅರ್ಚಕರು ಒಂದೂವರೆ ಕಿಲೋಮೀಟರ್ ದೂರ ಕ್ರಮಿಸಿ ಬರುತ್ತಿರುವರು : ಮಳೆಗಾಲದಲ್ಲಿ ಬೆಳಗಿನ ಜಾವದ ಪೂಜೆಗೆ ಬರಲು ಬಹಳ ತೊಂದರೆ ಪಡುತ್ತಿರುವರು. ಇನ್ನು ಒಂದು ಕಿಲೋಮೀಟರ್ ಆಚೆಗೆ ಅವರನ್ನು ಕಳಿಸಿದರೆ ಎರಡೂವರೆ ಕಿಲೋಮೀಟರ್ ದೂರದಿಂದ ಅವರು ದೇವಾಲಯಕ್ಕೆ ಪೂಜಾದಿ ಕೈಂಕರ್ಯಕ್ಕೆ ಓಡಾಡುವುದಾದರೂ ಹೇಗೆ ?

ಕೂಡಲ ಸಂಗಮ ಕ್ಷೇತ್ರಕ್ಕೆ ಯಾತ್ರಾರ್ಥಿಗಳಾಗಿ ಬರುವ ಜನರಿಗೆ ಅನುಕೂಲತೆ ಮಾಡಿಕೊಡುವ ಸಲುವಾಗಿ ಬಸವ ಧರ್ಮ ಪೀಠ ಎಂಬ ಟ್ರಸ್ಟ್ ವಸತಿ ವ್ಯವಸ್ಥೆಯನ್ನು ಮತ್ತು ನಿತ್ಯ ದಾಸೋಹ ಯೋಜನೆ ಮೂಲಕ ಊಟದ ವ್ಯವಸ್ಥೆಯನ್ನು ಮಾಡುತ್ತಲಿದೆ. ಬಸವ ಧರ್ಮ ಪೀಠದ ಮಹಾಮನೆ ಆವರಣವು ಈಗ ಸಂಗಮೇಶ್ವರ ದೇವಾಲಯದಿಂದ ಒಂದು ಕಿಲೋಮೀಟರ್ ದೂರದಲ್ಲಿಯೂ, ಸಂಗಮ ಸಂಕೀರ್ಣಕ್ಕೆ ಹೊಂದಿಕೊಂಡಂತೆಯೂ ಇದೆ. ಇಂತಹ ಸಂಸ್ಥೆಗಳನ್ನು ಜನರಿಗೆ ಉಪಯೋಗವಾಗದಷ್ಟು ದೂರದಲ್ಲಿ ಕಟ್ಟಲು ಬರುವುದೆ?

ಒಂದು ಧಾರ್ಮಿಕ ಕ್ಷೇತ್ರದ ಬೆಳವಣಿಗೆಗೆ ಧರ್ಮಛತ್ರ, ದಾಸೋಹ ಮಂಟಪ, ಉಪಾಹಾರ ಗೃಹಗಳು, ಧಾರ್ಮಿಕ ವಸ್ತುಗಳ ಮಾರಾಟ ಮಳಿಗೆಗಳು, ಮಠ-ಆಶ್ರಮ

ಮುಂತಾದವು ಅತ್ಯಗತ್ಯ. ಒಂದು ಕಿಲೋಮೀಟರ್ ದೂರದ ಒಳಗೆ ಸರ್ಕಾರದವರು ಜಮೀನುಗಳನ್ನು ವಶಪಡಿಸಿಕೊಂಡು ಬೀಳುಗೆಡವಿ, ವೈಯಕ್ತಿಕ ಮತ್ತು ಸಾರ್ವಜನಿಕ ಸಂಘ-ಸಂಸ್ಥೆಗಳನ್ನು ಬೆಳೆಸಲು ಅವಕಾಶ ನೀಡದಿದ್ದರೆ ಜನರಿಗೆ ಮತ್ತು ಯಾತ್ರಾರ್ಥಿಗಳಿಗೆ ಎಷ್ಟು ಅನಾನುಕೂಲ ಎಂಬುದನ್ನು ತಾವೇ ಊಹಿಸಿರಿ.

ಬಸವ ಧರ್ಮ ಪೀಠ ಟ್ರಸ್ಟ್ ಕಾರ್ಯಚಟುವಟಿಕೆ

ಕೂಡಲ ಸಂಗಮವು ಚಾರಿತ್ರಿಕವಾಗಿ, ಅಧ್ಯಾತ್ಮಿಕವಾಗಿ, ಪ್ರಾಕೃತಿಕವಾಗಿ ಅತ್ಯಂತ ಮಹತ್ವದ ಕ್ಷೇತ್ರವಾಗಿದ್ದರೂ ಯಾರೂ ಅದರ ಬಗ್ಗೆ ಲಕ್ಷ್ಯಕೊಡದೆ ಇರುವುದನ್ನು ಮತ್ತು ಬಂದ ಯಾತ್ರಾರ್ಥಿಗಳು ಬಹಳ ತೊಂದರೆ ಪಡುತ್ತಿರುವುದನ್ನು ಕಂಡು ನಾವು ಬೆಂಗಳೂರಿನಿಂದ ಕೂಡಲ ಸಂಗಮಕ್ಕೆ ಹೋಗಿ ಕಾರ್ಯಮಾಡುವ ಸಂಕಲ್ಪ ಕೈಗೊಂಡೆವು. ವಿಶ್ವನಾಥ ರೆಡ್ಡಿ ಮುದ್ನಾಳ್ ಸಮಿತಿಯ ವರದಿ ಸಿದ್ಧವಾಗುವ (7. ಜೂನ್ 1988) ಪೂರ್ವದಲ್ಲೇ 1987 ರಲ್ಲಿಯೇ ಜಮೀನನ್ನು ಖರೀದಿಸಿದೆವು. 1950ನೇ ಇಸವಿಯ ಮುಂಬಯಿಯ ಟ್ರಸ್ಟ್ ಆಕ್ಟಿನ 18ನೇ ಕಲಮಿನನ್ವಯ ಬಸವ ಧರ್ಮ ಪೀಠ ಟ್ರಸ್ಟನ್ನು ನೋಂದಾಯಿಸಿದೆವು. R. No. A 1798-BJP. ಕರ್ನಾಟಕ, ತಮಿಳುನಾಡು, ಆಂಧ್ರಗಳಲ್ಲಿರುವ ಅನೇಕ ಉದಾರ ದಾನಿಗಳನ್ನು ಸಂಪರ್ಕಿಸಿ ದೇಣಿಗೆ ಸ್ವೀಕರಿಸಿ ಹಲವಾರು ಕಟ್ಟಡಗಳನ್ನು ಕಟ್ಟಿಸಿದ್ದೇವೆ.

1. ಬಸವ ಮಂಟಪ ಕಟ್ಟಿಸಿ, 8-1-1990ರಂದು ಮೂರ್ತಿಯನ್ನು ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಲಾಗಿದೆ.
2. ಬಸವ ಮಂಟಪದ ಸುತ್ತಲೂ 16 ಜನ ಶರಣರ ಮಂಟಪ ಕಟ್ಟಿಸಿ, ಅಲ್ಲಿ ಶರಣರ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ.
3. ಮೂರು ಅಂತಸ್ತಿನ ಅತಿಥಿಗೃಹ, ಬಂದ ಪ್ರವಾಸಿಗರಿಗೆ ಏಕೈಕ ತಂಗುದಾಣವಾಗಿದೆ.
4. ಬಸವ ಧರ್ಮ ಪೀಠದ ಮಹಾಮನೆ ಆವರಣದಲ್ಲಿರುವ ಬೋರ್‌ವೆಲ್ ಮತ್ತು ನೀರಿನ ಟ್ಯಾಂಕ್, ಬೇಸಿಗೆಯಲ್ಲಿ ನದಿ ಬತ್ತಿದಾಗ ಜನರು ಮತ್ತು ದನಗಳಿಗೆ ಕುಡಿಯುವ ನೀರನ್ನೊದಗಿಸುತ್ತದೆ.
5. ಕ್ಷೇತ್ರಕ್ಕೆ ಬಂದ ಯಾತ್ರಾರ್ಥಿಗಳಿಗೆ ಉಚಿತ ದಾಸೋಹದ ವ್ಯವಸ್ಥೆ ಮಾಡಲಾಗುತ್ತಿದೆ.
6. ಸರ್ವಜ್ಞ ಅನಾಥಾಲಯ ತೆರೆದು, ತಾಯಿತಂದೆಗಳಿಲ್ಲದ ಮಕ್ಕಳಿಗೆ ಪೀಠವು ಆಶ್ರಯ ನೀಡಿದೆ.

ಜನಹಿತ ದೃಷ್ಟಿಯಿಂದ ಬಹುದೊಡ್ಡ ಯೋಜನೆಗಳನ್ನು ಬಸವ ಧರ್ಮ ಪೀಠವು ಹಮ್ಮಿಕೊಂಡಿದೆ. ಈಗಾಗಲೇ ಅಪಾರ ಹಣ ಉಪಯೋಗಿಸಿ ನಿರ್ಮಾಣ ಮಾಡಲಾಗಿ

ರುವ ಕಟ್ಟಡ, ಬಸವೇಶ್ವರ ದೇವಾಲಯ ಅತಿಥಿಗೃಹ ಮುಂತಾದುವನ್ನು ನಿರ್ಮಾಮ ಮಾಡುವುದು ಸಾಧುವೆ ?

ಶ್ರೀ ಸಂಗಮೇಶ್ವರ ದೇವಾಲಯ, ಬೋರ್ಡಿಂಗ್, ಸಂಗಮೇಶ್ವರ ಮಾಧ್ಯಮಿಕ-ಪೌಢಶಾಲೆ, ಬಸವ ಧರ್ಮ ಪೀಠದ ಮಹಾಮನೆ ಮಹಾಮಠ-ಮುಂತಾದುವು ಜನಸಾಮಾನ್ಯರ ಬದುಕು-ಭಕ್ತಿಗೆ ಸಂಬಂಧಪಟ್ಟವು. ಒಂದು ವೇಳೆ "ಅಂತರ ರಾಷ್ಟ್ರೀಯ ಬಸವ ಕೇಂದ್ರ"ವನ್ನು ಆದಷ್ಟು ಬೇಗನೆ ಪ್ರಾರಂಭಿಸುವ ಆಕಾಂಕ್ಷೆ ಸರ್ಕಾರಕ್ಕೆ ಇದ್ದುದೇ ಆದರೆ ಅದಕ್ಕಾಗಿ ಪುನಃ ಭೂಮಿಯನ್ನು ಹೊಸದಾಗಿ ಸ್ವಾಧೀನ ಮಾಡಿಕೊಳ್ಳದೆ, ಈಗಾಗಲೇ ವಶಪಡಿಸಿಕೊಂಡಿರುವ, ಬೀಳಾಗಿ ಇಟ್ಟಿರುವ 200 ಎಕರೆ ಭೂಮಿಯನ್ನೇ ಪೂರ್ಣವಾಗಿ ಸದುಪಯೋಗ ಮಾಡಿಕೊಳ್ಳುವುದು ಸೂಕ್ತ.

ಕೂಡಲ ಸಂಗಮ ಗ್ರಾಮದ ಪುನರ್ವಸತಿ

ಕೂಡಲ ಸಂಗಮ ಸದ್ಯದ ಗ್ರಾಮವು ಹಿನ್ನೀರಿಗೆ ಸಮೀಪದಲ್ಲಿದ್ದು ಮಲೇರಿಯಾ ಏರಿಯಾ ಎಂದು ಗುರುತಿಸಲ್ಪಟ್ಟು. ಅದರ ಪುನರ್ವಸತಿಗೆ ಏರ್ಪಾಡು ಮಾಡಲಾಗುತ್ತಿದೆ. ಅದನ್ನು ಸಂಗಮ ಸಂಕೀರ್ಣಕ್ಕೆ ಹೊಂದಿಯೇ ಮಾಡಬೇಕಾಗುತ್ತದೆ. ಅಲ್ಲಿಂದ ಒಂದು ಕಿಲೋಮೀಟರ್ ಆಚೆಗೆ ಊರನ್ನು ಕಟ್ಟಲು ಸಾಧ್ಯವೇ ಇಲ್ಲ. ಇದಕ್ಕೆ ಗ್ರಾಮಸ್ಥರ ಒಪ್ಪಿಗೆ ಖಂಡಿತಾ ಇಲ್ಲ.

ಈ ಬಗ್ಗೆ ಸಮಸ್ತ ಗ್ರಾಮಸ್ಥರೂ ಸಭೆ ಸೇರಿ ನೂತನ ಸಂಗಮ ಸಂಕೀರ್ಣಕ್ಕೆ ಪಶ್ಚಿಮ ದಿಕ್ಕಿನಲ್ಲಿ, ಸಂಕೀರ್ಣಕ್ಕೆ ಹೊಂದಿಕೊಂಡಿರುವ ಭೂಮಿಯನ್ನು ಗ್ರಾಮದ ಪುನರ್ವಸತಿಗಾಗಿ ವಶಪಡಿಸಿಕೊಂಡು, ಗ್ರಾಮವನ್ನು ನಿರ್ಮಿಸಬೇಕೆಂದು, ಬಾಗಲಕೋಟೆ-ಸಂಗಮ ರಸ್ತೆಯ ದಕ್ಷಿಣದ ಜಮೀನುಗಳಲ್ಲಿ ಕಟ್ಟಡ ರಚನೆಗೆ ಪಾಯಸಿಗುವುದಿಲ್ಲವಾದ ಕಾರಣ, ಆ ಜಮೀನುಗಳು ಗ್ರಾಮರಚನೆಗೆ ಯೋಗ್ಯವಲ್ಲವೆಂದು, ಸಾರ್ವಜನಿಕ ಸೇವಾ ಸಂಸ್ಥೆಗಳಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಒಪ್ಪಿಗೆಯನ್ನು ನೀಡುವುದಿಲ್ಲವಾಗಿ ನಿರ್ಣಯ ಮಾಡಿದ್ದಾರೆ. ಮಂಡಲ ಪಂಚಾಯಿತಿ ಸದಸ್ಯರೂ 30-6-1990ರಂದು ಇದೇ ರೀತಿ ನಿರ್ಣಯ ಕೈಗೊಂಡಿದ್ದಾರೆ. ಆದ್ದರಿಂದ ಘನ ಸರ್ಕಾರವು ಜನರಿಗೆ ಅನವಶ್ಯಕ ತೊಂದರೆ ಉಂಟು ಮಾಡುವ ವಿಚಾರ ಕೈಬಿಡಲು ಮನವಿ ಮಾಡುತ್ತಿದ್ದೇವೆ. ಆದಷ್ಟು ಬೇಗನೆ ಸಂಪುಟ ಸಭೆ ಸೇರಿಸಿ ಈ ಕೆಳಕಂಡಂತೆ ಕಾರ್ಯೋನ್ಮುಖರಾಗಲು ಕೋರುತ್ತೇವೆ.

1. **ಉಲ್ಲೇಖ :** ಕ್ರ. LAQ/LMT/C.R.-2.89-90 ದಿ. 30-5.90ರ ಪ್ರಕಾರ ಭೂಸ್ವಾಧೀನಕ್ಕಾಗಿ ನೀಡಿರುವ 4. (1) ನೋಟೀಸುಗಳನ್ನು ವಾಪಸ್ಸು ತೆಗೆದುಕೊಳ್ಳಲು ಕೋರುತ್ತೇವೆ.
2. ಈ ಬಗ್ಗೆ ಹೊರಡಿಸಿರುವ ಗೆಜೆಟ್ ನೋಟಿಫಿಕೇಶ‍ರ್ ಕರ್ನಾಟಕ ರಾಜ್ಯ ಪತ್ರ, ಗುರುವಾರ ಜೂನ್, 14, 1990 ಭಾಗ 9 ಬ ಇದನ್ನು ಕ್ಯಾನ್ಸಲ್ ಮಾಡಬೇಕೆಂದು ಕೋರುತ್ತೇವೆ.

3. ಮುದ್ನಾಳ್ ಸಮಿತಿ ವರದಿಯನ್ನು ಪರಿಶೀಲಿಸಿ ಮೊದಲ ಭಾಗವನ್ನು ಬೇಗನೆ ಜಾರಿಗೆ ತಂದು, ಎರಡನೆ ಭಾಗದ ಪುನರ್ ಪರಿಶೀಲನೆ ಮಾಡಬೇಕು. ಸಂಗಮ ಸಂಕೀರ್ಣದಿಂದ 1 ಕಿ. ಮೀ. ದೂರದಲ್ಲಿ ಯಾವುದೇ ಕಟ್ಟಡ ಆಗಬಾರದು ಎಂಬ ಸಲಹೆಯನ್ನು ತೆಗೆದುಹಾಕಬೇಕು ಇಲ್ಲವೇ ಧಾರ್ಮಿಕ ಚಟುವಟಿಕೆಗಳಿಗೆ ವಿರುದ್ಧವಾದ, ಯಾವುದೇ ಕಟ್ಟಡ ಆಗಬಾರದು ಎಂದಾದರೂ ಸೇರಿಸಬೇಕು.

4. ಕೀಳಲ್ಪಟ್ಟು, ಕರುಣಾಜನಕ ಸ್ಥಿತಿಯಲ್ಲಿರುವ ಸಂಗಮೇಶ್ವರ ದೇವಾಲಯವನ್ನು ಬೇಗನೆ ನಿರ್ಮಾಣ ಮಾಡಬೇಕೆಂದು, ದೇವಾಲಯದ ಸುತ್ತಲೂ ಇರುವ ಪರಿಸರವನ್ನು ಅಂದಗೊಳಿಸಿ ಬಸವೇಶ್ವರ ಐಕ್ಯಮಂಟಪದ ಸೋಪಾನ ನಿರ್ಮಾಣವನ್ನು ಪೂರ್ಣಗೊಳಿಸಬೇಕೆಂದು ಕೋರುವೆವು.

ಜನಾಂದೋಲನಕ್ಕೆ ಅವಕಾಶ ಕೊಡದಿರಲು ಕೋರಿಕೆ

ಜನರ ಹಿತಾಸಕ್ತಿ, ಸರ್ಕಾರದ ಆರ್ಥಿಕ ಪರಿಸ್ಥಿತಿ, ಯೋಜನೆಗಳ ಉಪಯುಕ್ತತೆ-ಮುಂತಾಗಿ ಏನನ್ನೂ ಆಲೋಚಿಸದ ಕೃ.ಮೇ.ಯೋ ಭೂಸ್ವಾಧೀನಾಧಿಕಾರಿಗಳು ತರಾತುರಿಯಿಂದ ಭೂಸ್ವಾಧೀನದ ಕೆಲಸ ಆರಂಭಿಸಿರುವುದು ಜನತೆಯಲ್ಲಿ ಹಲವಾರು ಸಂಶಯಗಳನ್ನು ಬಿತ್ತಿದೆ. ಶಾಂತವಾದ ಪರಿಸ್ಥಿತಿಯನ್ನು ಕದಡುವ ಚಳುವಳಿ, ಪ್ರತಿಭಟನೆ, ಹೋರಾಟ ಆರಂಭವಾಗುವ ಮೊದಲೇ ತಾವು ಬೇಗನೆ ಗಮನ ಹರಿಸುವುದು ಅತ್ಯಗತ್ಯ. ಜನತೆ ಮತ್ತು ಸರ್ಕಾರದ ಮಧ್ಯೆ ಸಂಪರ್ಕಮಾಧ್ಯಮವಾಗಿ ಕೆಲಸ ಮಾಡಬೇಕಾದ ಅಧಿಕಾರಿಗಳು ತಾವೇ ಸರ್ವಶಕ್ತರೆಂಬಂತೆ ಹುಚ್ಚುಚ್ಚಾರ ಕಾರ್ಯ ಚಟುವಟಿಕೆ ಆರಂಭಿಸಿ, ವಿನಾ ಕಾರಣ ಜನರು ರೊಚ್ಚಿಗೇಳುವಂತೆ ಮಾಡುವರು. ಆದ್ದರಿಂದ ಸದಾ ವಿಧಾಯಕ ರೀತಿಯಲ್ಲಿಯೇ ಸಾಗಬೇಕೆನ್ನುವ ನಾವು, ಕೂಡಲ ಸಂಗಮವು ಅನವಶ್ಯಕವಾಗಿ ವಿವಾದ-ಹಿಂಸೆಯ ತಾಣವಾಗಲು ತಾವು ಅವಕಾಶ ಕೊಡಬಾರದೆಂದು, ಬೇಗನೆ ಗಮನವನ್ನು ಇತ್ತ ಹರಿಸಬೇಕೆಂದು ಹೃತ್ಪೂರ್ವಕವಾಗಿ ಸೂಚಿಸುತ್ತೇವೆ.

ಈಗಾಗಲೇ ವಶಪಡಿಸಿಕೊಂಡಿರುವ ಜಮೀನನ್ನು ಸಾರ್ಥಕಗೊಳಿಸಬೇಕೆಂದು ; ಪುನಃ ಜಮೀನನ್ನು ಸ್ವಾಧೀನಪಡಿಸಿಕೊಂಡು ಜನಸಾಮಾನ್ಯರಿಗೆ ಕಿರುಕುಳ ಉಂಟು ಮಾಡಬಾರದೆಂದು ವಿನಮ್ರವಾಗಿ ಪ್ರಾರ್ಥಿಸುತ್ತೇವೆ. ನಮ್ಮ ಮನವಿಗೆ ಓಗೊಟ್ಟು ಕೃಷ್ಣಾ ಮೇಲ್ದಂಡೆ ಯೋಜನೆ ಅಧಿಕಾರಿಗಳ ಭೂಸ್ವಾಧೀನ ಕೆಲಸವನ್ನು ಆದಷ್ಟು ತೀವ್ರವಾಗಿ ನಿಲ್ಲಿಸಬೇಕೆಂದು ಮತ್ತು ಮುದ್ನಾಳ ಸಮಿತಿ ವರದಿಯಲ್ಲಿ ತಿದ್ದುಪಡಿ ತರಬೇಕೆಂದು ಕೋರುತ್ತೇವೆ.

ಹೃತ್ಪೂರ್ವಕ ಶುಭಹಾರೈಕೆಗಳೊಡನೆ

ಬಸವ ಧರ್ಮ ಪೀಠ

ಕಾರ್ಯಾಧ್ಯಕ್ಷೆ, **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.**

ಬಸವಣ್ಣನವರು ಮತ್ತು ಜಂಗಮತತ್ತ್ವ

—ಜಗದ್ಗುರು ಮಾತೆ ಮಹಾದೇವಿ

ವಚನ ಸಾಹಿತ್ಯ ಪ್ರಪಂಚದಲ್ಲಿ ಬಸವಣ್ಣನವರ ವ್ಯಕ್ತಿತ್ವ, ಸಾಧನೆಗಳಿಗೆ ಕೇಂದ್ರ ಸ್ಥಾನವಿದೆ. ಅವರ ವ್ಯಕ್ತಿತ್ವವು ಸರ್ವಾಂಗ ಪರಿಪೂರ್ಣವಾಗಿದೆ. ದೇವ ನಿರ್ಮಿತ ಈ ಸೃಷ್ಟಿಯಲ್ಲಿ ಅತಿಮಾನವತ್ವದ ಚರಮಸೀಮೆಯನ್ನು ಮುಟ್ಟಿದ ಮಹಾನುಭಾವರವರು. ಒಂದೇ ವ್ಯಕ್ತಿಯಲ್ಲಿ ಲೌಕಿಕದ ಕರ್ತೃತ್ವ ಶಕ್ತಿಯ ಪರಾಕಾಷ್ಠತೆ ಮತ್ತು ಪಾರಲೌಕಿಕದ ಆಳವಾದ ಆಧ್ಯಾತ್ಮ ಚಿಂತನೆ ಎರಡೊಂದಾಗಿ ಮೇಳವಿಸುವುದು ಕಷ್ಟ. ಆಳವಾದ ಆತ್ಮಚಿಂತನೆಯೊಡನೆ ಸಮಾಜಸೇವೆಯ ಕಳಕಳಿಯನ್ನು, ಪಾರಮಾರ್ಥಿಕ ಪ್ರಪಂಚದ ಪ್ರಾಧಾನಿತ್ವವನ್ನು ಮೈಗೂಡಿಸಿಕೊಂಡು ಬಾಳುವುದು ಕಷ್ಟಕರ. ಆದರೆ ಇಂತಹ ಅಪರೂಪ ಗುಣಗಳ ಸಮಾವೇಶವನ್ನು ಬಸವಣ್ಣನವರಲ್ಲಿ ಕಾಣುತ್ತೇವೆ. ಬಸವಣ್ಣನವರಲ್ಲಿ ಕಾಣುವ ಮತ್ತೆರಡು ಗುಣಗಳೆಂದರೆ ವಿನಯ ಮತ್ತು ವೀರತ್ವಗಳು. ಎಷ್ಟು ವಿನಯ ಮತ್ತು ಭೃತ್ಯಭಾವ ಅವರಲ್ಲಿ ಇವೆಯೋ ಅದಕ್ಕಿಂತ ಮಿಗಿಲಾಗಿ ಕೆಚ್ಚು ಮತ್ತು ತತ್ತ್ವನಿಷ್ಠೆ ತುಂಬಿವೆ. ದೇವರ ಸ್ವರೂಪವನ್ನು ಹೇಳುವ ಒಂದು ವಚನದಲ್ಲಿ ಅವರು ದೇವನನ್ನು, ಎಡದ ಕೈಯಲ್ಲಿ ಹಾಲಿನ ಬಟ್ಟಲು, ಬಲದ ಕೈಯಲ್ಲಿ ಹೆದರಿಸುವ ಬೆತ್ತವನ್ನು ಹಿಡಿದ ತಾಯಿಗೆ ಹೋಲಿಸುತ್ತಾರೆ (ಬ.ಷ.ವ. ೩೮೮). ಅದೇ ಉಪಮೆಯನ್ನು ಅಣ್ಣನವರಿಗೆ ಮರಳಿಸಬಹುದು. ಸಜ್ಜನರಿಗೆ, ಸಮಾಜಕ್ಕೆ, ಸಮಷ್ಟಿಯ ಏಳ್ಗೆಗಾಗಿ ಕಿಂಕರರಾಗಿ ದುಡಿಯುವ ಅವರು, ಸಮಾಜದ ದೋಷ ದೌರ್ಬಲ್ಯ, ಸಂಪ್ರದಾಯಗಳನ್ನು ಎದೆಗಾರಿಕೆಯಿಂದ ಎದುರಿಸಿದ ತತ್ತ್ವನಿಷ್ಠ ಗಣಾಚಾರಿಯೂ ಹೌದು. ವಿನಯವಿಲ್ಲದ ವೀರತ್ವ ಕ್ರೂರತ್ವವಾದರೆ, ವೀರತ್ವವಿಲ್ಲದ ವಿನಯ ಹೇಡಿತನ, ಅಣ್ಣನವರಾದರೋ ವಿನಯ–ವೀರತ್ವಗಳೆರಡರ ಮೇರುಪರ್ವತ.

ಹೀಗೆ ದ್ವಂದ್ವ ಗುಣಗಳನ್ನು ಮೈಗೂಡಿಸಿಕೊಂಡು ಸಕಲಗುಣ, ಸರ್ವ ಕಲೆ, ಸರ್ವ ಶಕ್ತಿಗಳ ಸಂಗಮವಾಗಿ ಶೋಭಿಸುವ ಬಸವಣ್ಣನವರನ್ನು ಆಳವಾಗಿ ಅಭ್ಯಸಿಸುವುದು ಕಷ್ಟದ ಕೆಲಸ. ಅವರು ಉಪನಿಷತ್ಕಾರರಂತೆ ದ್ರಷ್ಟಾರರು, ಶ್ರೀ ರಾಮ-ಕೃಷ್ಣ ಪರಮಹಂಸರಂತೆ ಅನುಭಾವಿಗಳು, ಶ್ರೀ ಅರವಿಂದರಂತೆ ಯೋಗಿಗಳು, ಮಹಾತ್ಮಾಜಿಯವರಂತೆ ಸಮಾಜ ಸುಧಾರಕರು, ಕಾರ್ಲ್ ಮಾರ್ಕ್ಸನಂತೆ ಅರ್ಥ ಶಾಸ್ತ್ರಜ್ಞರು, ಘನ ಮೇಧಾವಿಗಳು, ಗಣಿತ ಶಾಸ್ತ್ರ ಪಂಡಿತರು, ಏಸು ಕ್ರಿಸ್ತನಂತೆ ಪ್ರಗತಿಪರ ಧರ್ಮವನ್ನು ನೀಡಿದ ಪ್ರವಾದಿಗಳು, ಮಹಮ್ಮದ ಪೈಗಂಬರನಂತೆ ದಿಟ್ಟ ಸ್ವಭಾವದವರು, ಬುದ್ಧನಂತೆ ಮಾನವತಾವಾದಿಗಳು, ಮಹಾವೀರನಂತೆ ಅಹಿಂಸಾ ತತ್ತ್ವ ಪ್ರತಿಪಾದಕರು, ವಚನ ಶಾಸ್ತ್ರ ನಿರ್ಮಾಪಕ ಸಾಹಿತಿಗಳು, ರಾಜಕಾರಣ ಪ್ರಪಂಚ

ದಲ್ಲಿ ಪ್ರಾಮಾಣಿಕ ಮುತ್ಸದ್ದಿಗಳು. ಹೀಗೆ ಮನುಷ್ಯನಿಗೆ ಸಾಧನೀಯವಾದ ಯಾವುದೇ ಅತ್ಯುನ್ನತ ಆದರ್ಶವನ್ನು ತೆಗೆದುಕೊಂಡರೂ ಅದನ್ನು ಅವರ ವ್ಯಕ್ತಿತ್ವದಲ್ಲಿ ಕಾಣುವುದು ಮಾತ್ರವಲ್ಲ, ಅದರ ಪರಿಪೂರ್ಣ ವಿಕಾಸವನ್ನೇ ಅಲ್ಲಿ ಗುರುತಿಸಬಹುದು.

ಬಸವಣ್ಣನವರ ಬಹುಮುಖ ಸಾಧನೆಗಳಲ್ಲಿ ಎದ್ದು ಕಾಣುವಂತಹದು ಧಾರ್ಮಿಕ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಸಾಧಿಸಲ್ಪಟ್ಟ ಸಮಾನತೆ. ಧರ್ಮ-ಅಧ್ಯಾತ್ಮಗಳು ಯಾವೊಂದು ವ್ಯಕ್ತಿ ಅಥವಾ ಜಾತಿಯ ಸೀಮಿತ ಸೊತ್ತಲ್ಲ. ಅವು ಜಾತಿ, ಕಸಬುಗಳಿಗೆ ಅತೀತವಾಗಿ ಎಲ್ಲ ಮಾನವರಿಗೆ ದೊರೆಯಬೇಕಾದ ಸಂಜೀವಿನಿಗಳು ಎಂದು ಘೋಷಿಸಿದ ಬಸವಣ್ಣನವರು ವರ್ಣ, ವರ್ಗ, ಲಿಂಗಭೇದವಿಲ್ಲದೆ ಎಲ್ಲರಿಗೂ ಧರ್ಮಸಂಸ್ಕಾರವನ್ನು ನೀಡಲು ಸಿದ್ಧರಾದರು. ಚತುರ್ವರ್ಣಾತ್ಮಕ ಸಮಾಜದಲ್ಲಿ ಗುರುವಾಗುವ ಹಕ್ಕು ಒಂದು ವರ್ಣಕ್ಕೆ ಸೀಮಿತವಾಗಿ, ಕೇವಲ ಭಕ್ತರಾಗುವ ಹಕ್ಕು ಇನ್ನೆರಡು ವರ್ಣಗಳಿಗೆ ಸೀಮಿತವಾಗಿ, ಸಮಾಜ ವ್ಯವಸ್ಥೆಯ ಏಣಿಯಲ್ಲಿ ಕಡೆಯ ಕಾಲಿನಲ್ಲಿ ನಿಂತವರೆಂದು ಕರೆಯಲ್ಪಡುತ್ತಿದ್ದ ಶೂದ್ರ ವರ್ಣಕ್ಕೆ ಆ ಭಕ್ತರಾಗುವ ಹಕ್ಕು ಸಹ ಕೊಡಲ್ಪಟ್ಟಿರಲಿಲ್ಲ. ಪಂಚಮವರ್ಣವೆಂದು ಹೆಚ್ಚಿನ ಶೋಷಣೆಗೊಳಗಾಗಿ ಸಂಸ್ಕಾರವನ್ನು ಪಡೆಯುವ ಸೌಲಭ್ಯದಿಂದ ಮಾತ್ರವಲ್ಲ ಮುಟ್ಟಿಸಿಕೊಳ್ಳುವ ಸಹಜ ಮಾನವೀಯ ಕ್ರಿಯೆಯಿಂದಲೂ ವಂಚಿತರಾಗಿದ್ದ ಅಸ್ಪೃಶ್ಯ. ಹೊಲೆಯ, ಮಾದಿಗ ಜನಾಂಗದ ಅವಸ್ಥೆಯಂತೂ ಹೇಳತೀರದಾಗಿತ್ತು. ಇದನ್ನು ಕಂಡ ಬಸವಣ್ಣನ ಹೃದಯ ಮಾನವೀಯ ಭಾವನೆಗಳಿಂದ ಕರಗಿ, ದೇವನಿರ್ಮಿತ ಸಮಾನತೆಯ ವಿರುದ್ಧ ನಿರ್ಮಾಣಗೊಂಡ ಮಾನವ ಕಲ್ಪನೆಯ ಅಸಮಾನತೆಯನ್ನು ತೊಡೆಯಲೆತ್ನಿಸಿತು. ಬಸವಣ್ಣನವರು ಈ ಬಹುಬಗೆಯ ವಿಂಗಡಣೆಯನ್ನು ಟೀಕಿಸಿ ಮಾನವ ಸಮಾಜವನ್ನು ಎರಡಾಗಿ, ಗುಣೈಕ ದೃಷ್ಟಿಯಿಂದ ವಿಭಜಿಸಿದರು. "ಅರಿದೊಡೆ ಶರಣ, ಮರೆದೊಡೆ ಮಾನವ"–ಇವೆರಡೇ ನಿಜ ಜಾತಿಗಳು. ಮರೆವಿನ ಪಂಜರದಲ್ಲಿ ಸಿಕ್ಕಿಬಿದ್ದವನು ಮಾನವ ; ಮರೆವಿನ ಜಾಲವನ್ನು ದಾಟಿ ಅರಿವಿನ ಬಯಲಿನಲ್ಲಿ ವಿಹರಿಸುವವನು ಶರಣ. ಈ ಶರಣತ್ವದ ಗಳಿಕ್ಕೆ ಮಾನವನ ಜನ್ಮಸಿದ್ಧ ಹಕ್ಕು ಎಂದು ಮನವರಿಕೆ ಮಾಡಿಕೊಟ್ಟರು. ಇದರ ಪರಿಣಾಮವಾಗಿ ಭಕ್ತತ್ವ ಗುರುತ್ವದ ಹಕ್ಕುಗಳು ನಿಸ್ಪೃಹ ಆಧ್ಯಾತ್ಮ ಜೀವಿಗಳ ಕೈ ಸೇರಿದವು.

ಈ ಧಾರ್ಮಿಕ ಸ್ವಾತಂತ್ರ್ಯದ ಸೂತ್ರವನ್ನೇ ಇನ್ನಷ್ಟು ವಿಸ್ತರಿಸಿ ಬಸವಣ್ಣನವರು ಸಾಮಾಜಿಕ ಸಮತೆಯನ್ನು ಆಚರಣೆಗೆ ತಂದರು. ಗುರುವಿನ ಅನುಗ್ರಹ ಹೊಂದಿ ಆತ್ಮಿಕ ಪುನರ್ಜನ್ಮ ಪಡೆದ ಸಾಧಕರು ಜನ್ಮತ: ಯಾವುದೇ ಜಾತಿಯವರಿರಲಿ ದೀಕ್ಷಾನಂತರ ಅವರಲ್ಲಿ ಭೇದವನ್ನು ಮಾಡಬಾರದು: ಸ್ತ್ರೀ-ಪುರುಷರು ಇಬ್ಬರೂ ಸಾಮಾಜಿಕ ಆಧ್ಯಾತ್ಮಿಕ ಹಕ್ಕುಭಾದ್ಯತೆಗಳಲ್ಲಿ ಸರಿಸಮಾನರು: ಸ್ತ್ರೀಯನ್ನು ಶೂದ್ರವರ್ಗಕ್ಕೆ ಸೇರಿಸಿ

ಧಾರ್ಮಿಕ ಸಂಸ್ಕಾರವನ್ನೇ ಕೊಡದ ಪಕ್ಷಪಾತವು ಸರಿಯಲ್ಲ ಎಂಬುದನ್ನು ಬಸವಣ್ಣನವರು ಮನವರಿಕೆ ಮಾಡಿಕೊಟ್ಟರು.

ಸ್ತ್ರೀಗೆ ಸಂಸ್ಕಾರ ಕೊಡದಿರಲು ಎರಡು ಕಾರಣಗಳಿದ್ದವು. ಸ್ತ್ರೀಯು ಸ್ವಭಾವತ: ಚಂಚಲೆ, ದುರ್ಬಲಳು, ಆದ್ದರಿಂದ ಆಕೆ ಮಾಯೆ: ಆಧ್ಯಾತ್ಮ ಜೀವನಕ್ಕೆ ಅನರ್ಹಳು ಮಾತ್ರವಲ್ಲ ಬಾಧಕಳು ಎಂಬ ಭಾವ ಬೆಳೆದಿತ್ತು. ಅದನ್ನರಿತ ಶರಣರು ಹೆಣ್ಣು, ಹೊನ್ನು, ಮಣ್ಣುಗಳು ಮಾಯೆಯಲ್ಲ. ಮಾಯೆತನವೆಂಬುದು ತನ್ನಲ್ಲಿ ತಾನೇ ಇರುವ ವಸ್ತುವಲ್ಲ. ಅದು ನಮ್ಮ ಮನೋದೌರ್ಬಲ್ಯದ ಪ್ರತಿರೂಪ. ತಮ್ಮ ಮನಸ್ಸನ್ನು ನಿಗ್ರಹಿಸಿಕೊಳ್ಳಲಾರದೆ ಆ ದೌರ್ಬಲ್ಯ, ಮಾಯೆತನವನ್ನು ಹೊರಗೆ ಆರೋಪಿಸುವುದು ತಪ್ಪು ಎಂದು ಭಾವಿಸಿದರು. ಮಾತ್ರವಲ್ಲ ಅಕ್ಕಮಹಾದೇವಿಯಂತಹ ವೀರವೀರಾಗಿಣಿಯು ಮನೋಸಾಮರ್ಥ್ಯದ ಮುಖವನ್ನು ಅರಿತು ಹೇಳುತ್ತಾಳೆ: ಪುರುಷನಿಗೆ ಸ್ತ್ರೀ ಮಾಯೆಯಾದರೆ, ಸ್ತ್ರೀಗೆ ಪುರುಷನು ಮಾಯೆಯೇ ! ಆದರೆ ಅಧ್ಯಾತ್ಮ ಜೀವನಕ್ಕೆ ಬಂದು, ಭಾವ ಪಕ್ವಗೊಂಡ ಸಾಧಕರು ಪುರುಷತ್ವ–ಸ್ತ್ರೀತ್ವಗಳ ಎಲ್ಲೆಯನ್ನು ದಾಟಿನಿಂತ ಕಾರಣ ಅವರಿಗೆ ಮಾಯೆಯ ಕಾಟವಿಲ್ಲ.

"ಸ್ತ್ರೀಯು ಪ್ರತಿ ಮಾಸಕ್ಕೊಮ್ಮೆ ಬಹಿಷ್ಠೆಯಾಗುವ ಕಾರಣ ಹೊಲೆತನ ಅಂಗಾಂಗ ಭರಿತವಾಗಿದೆ. ಆದ್ದರಿಂದ ಆಕೆ ಸಂಸ್ಕಾರಕ್ಕೆ ಅನರ್ಹಳು" ಎಂಬ ವಾದವೂ ಪ್ರಬಲವಾಗಿತ್ತು. ಆಗ ಬಸವಣ್ಣನವರು ಹೊಲೆತನದ ಅರ್ಥವನ್ನು 'ಕೊಳೆ' ಎಂಬುದಾಗಿ ಹೇಳಿ ಸ್ವಚ್ಛತೆಯೇ ಬೇರೆ, ಶುದ್ಧತೆಯೇ ಬೇರೆ ಎಂಬುದಾಗಿ ಸಾರಿದರು. ಸಗಣಿ ಮುಟ್ಟಿದಾಗ ಕೈಕೊಳೆಯಾಗುತ್ತದೆ, ಅಶುದ್ಧವಾಗುವುದಿಲ್ಲ. ಅಂತಹ ಕೈಯಿಂದ ದೇವರ ಪೂಜೆಯನ್ನು ಮಾಡಬಾರದಂತಹ ಅಪರಾಧವೇನೂ ನಡೆದಂತಾಗಿಲ್ಲ. ಆದರೆ ಅದೇ ಕೈಯಿಂದ ಪರಧನ-ಪರಸ್ತ್ರೀಗೆ ಎಳೆಸಿದರೆ ಅದು ಅಶುದ್ಧವಾಗಿ, ದೇವನ ಪೂಜೆಯ ಹಕ್ಕನ್ನು ಕಳೆದುಕೊಳ್ಳುವುದು, ಅಂತಹ ದುರ್ಧರ ಪ್ರಸಂಗದಲ್ಲೂ ಪಶ್ಚಾತ್ತಾಪ ಪಟ್ಟು ದೇವನ ಅಡಿಗೆ ಶರಣಾದರೆ ಆಗಲೂ ಅವನ ಅನುಗ್ರಹ ದೊರೆಯಲು ಸಾಧ್ಯವಿದೆ. ಅದೇ ರೀತಿ ಸ್ತ್ರೀಯು ಬಹಿಷ್ಠೆಯಾದಾಗ ಆಕೆಯ ಶರೀರ ಹೊಲಸಾಗಿರಬಹುದು, ಅಪವಿತ್ರವಾಗಿರುವುದಿಲ್ಲ. ಆಕೆ ಅನೀತಿವಂತಳಾದಾಗ ಮಾತ್ರ ಅಪವಿತ್ರಳಾಗುವಳು. ಹೀಗೆ ಕೇವಲ ಹೊಲೆ-ತನಕ್ಕೆ (ಕೊಳೆಗೆ) ಅಪವಿತ್ರತೆಯನ್ನು ಗಂಟು ಹಾಕಿ ಸಂಸ್ಕಾರವಂಚಿತರನ್ನಾಗಿ ಮಾಡುವುದು ಅಮಾನವೀಯತೆ ಎಂದ ಬಸವಣ್ಣನವರು ಹೆಣ್ಣುಮಕ್ಕಳಿಗೂ ಧರ್ಮಸಂಸ್ಕಾರದ ಹಕ್ಕನ್ನು ನೀಡಿದರು. ಈ ಬಗೆಯ ಆಶ್ವಾಸನೆ ಹೆಣ್ಣುಮಕ್ಕಳಿಗೆ ಅಪೂರ್ವವಾದ ಅವಕಾಶವನ್ನು ಒದಗಿಸಿಕೊಟ್ಟಿತು. ಅವರಲ್ಲಿ ಸುಪ್ತವಾಗಿ ಹುದುಗಿದ್ದ ಅಂತಃಶಕ್ತಿಯು ಅರಳಲು ಅನುವು ಮಾಡಿಕೊಟ್ಟಿತು. ಪ್ರತಿಫಲವಾಗಿ ಜಗತ್ತಿನಲ್ಲಿ ೭೭೦ ಶರಣರ ಸದಸ್ಯರನ್ನೊಳಗೊಂಡು ಮೊಟ್ಟಮೊದಲ ಪಾರ್ಲಿಮೆಂಟಿನ(ಲೋಕಸಭೆ) ಕಲ್ಪನೆಯನ್ನು ತಂದು

ಕೊಡುವ ಅನುಭವ ಮಂಟಪವು ೬೦ ಮಂದಿ ಶರಣೆಯರನ್ನು, ಅವರಲ್ಲಿ ೩೦ ಮಂದಿ ವಚನಕಾರ್ತಿಯರನ್ನು ಹೊಂದುವ ಸೌಭಾಗ್ಯ ಪಡೆಯಿತು. ಯೋಗಸಾಧನೆ ಮಾಡಿದಾಗ ಸಾಧಕರಲ್ಲಿ ಪವಾಡಗಳನ್ನು ಮಾಡುವ ಮತ್ತು ಅಪೂರ್ವ ಸಿದ್ಧಿಗಳನ್ನು ತೋರುವ ಶಕ್ತಿಯು ಸಂಚಯವಾಗುವುದೆಂದು ಕೇಳುತ್ತೇವೆ. ಆ ದೃಷ್ಟಿಯಿಂದ ಘನಯೋಗಿಯೂ ದೈವೀಕರುಣೆಯ ಮೂರ್ತಸ್ವರೂಪವಾಗಿ ಬಸವಣ್ಣನವರು ೮೮ ಪವಾಡಗಳನ್ನು ಮಾಡಿದರು. ೩೬೦ ಸತ್ತ ಜೀವಗಳನ್ನು ಬದುಕಿಸಿದರು. (ಬಸವಣ್ಣನವರ ಷಟಸ್ಥಲದ ಹೆಚ್ಚಿನ ವಚನಗಳು ೧೩೮೧). ಬಸವಣ್ಣನವರನ್ನು ಈ ದೃಷ್ಟಿಯಿಂದ ಮಹಾಪುರುಷರು ಎನ್ನುವುದರ ಜೊತೆಗೆ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಸತ್ತಂತಿದ್ದ ಸಹಸ್ರಾರು ಜೀವಿಗಳಿಗೆ ಆಶ್ವಾಸನೆ ನೀಡಿ ಪುನರ್ಜನ್ಮವಿತ್ತು ಶರಣತ್ವದ ಬಾಳುವೆಗೆ ಪ್ರೋತ್ಸಾಹಿಸಿದ್ದು ಬಹುದೊಡ್ಡ ಪವಾಡ ಎನ್ನಬಹುದು. "ನಾವು ಶೂದ್ರರು, ಅಸ್ಪೃಶ್ಯರು, ಪಾಪಿಗಳು, ಪತಿತರು ಎಂದು ನಿಟ್ಟುಸಿರ್ಗರೆದು ನೊಂದ ಸಾಂಪ್ರದಾಯಿಕ ಶಾಸ್ತ್ರಗಳ ಗುಹೆಯಲ್ಲಿ ಉಸಿರು ಕಟ್ಟಿ ಒದ್ದಾಡುತ್ತಿದ್ದವರನ್ನು ಅಲ್ಲಿಂದ ಬಿಡುಗಡೆಮಾಡಿ ಸ್ವತಂತ್ರ ವಿಚಾರದ ಸ್ವಚ್ಛಗಾಳಿಯನ್ನು ಉಸಿರಿಸಲು ಅವಕಾಶ ಕಲ್ಪಿಸಿಕೊಟ್ಟುದು ಮಹಾಸಿದ್ಧಿ ಎನ್ನಬೇಕು. ಹಲವಾರು ನಾಸ್ತಿಕ ಹೃದಯಗಳಲ್ಲಿ, ಮಾನವೀಯತೆ_ಅನುಕಂಪ ಬತ್ತಿ-ಹೋಗಿ ಬಂಜರಾಗಿದ್ದ ಹೃದಯಗಳಲ್ಲಿ, ಭಕ್ತಿ-ದಯೂರಸಗಳು ಸೆಲೆಯೊಡೆದು ಸೂಸುವಂತೆ ಮಾಡಿಮುದೇ ಅಣ್ಣನವರ ಮಹಾಪವಾಡ.

ಅಣ್ಣನವರು ಕೈಕೊಂಡ ಪತಿತೋದ್ಧಾರ ಕಾರ್ಯವು ಆದರ್ಶ ಪೂರ್ಣವಷ್ಟೇ ಅಲ್ಲ, ಆಧುನಿಕ ಸಮಾಜ ಸುಧಾರಕರಿಗೆ ಅನುಕರಣೀಯಪ್ರಾಯವಾಗಿದೆ. ರಾಜರಿಂದ ಸಿರಿವಂತರಿಂದ ಪ್ರೋತ್ಸಾಹಿಸಲ್ಪಡುತ್ತಿದ್ದ ವೇಶ್ಯಾವೃತ್ತಿಯು ಸಮಾಜದ ನೈತಿಕ ಮುಖಕ್ಕೆ ಬಲವಾದ ಪೆಟ್ಟು ಕೊಡುತ್ತಿತ್ತು ; ಹಲವಾರು ಮುಗ್ಧ ಸಂಸಾರಗಳನ್ನೂ ಬಲಿಗೊಡುತ್ತಿತ್ತು. ಈ ವೇಶ್ಯಾವೃತ್ತಿಗೆ ಮನದ ದೌರ್ಬಲ್ಯ, ಅಥವಾ ಹೊಟ್ಟೆಯ ಪಾಡು, ಅಥವಾ ಕರ್ಮವಾದಗಳೇ ಮುಖ್ಯಕಾರಣಗಳು. ವೇಶ್ಯಾ ಜಾತಿಯಲ್ಲಿ ತನಗೆ ಬೇರಾವ ಹಾದಿಯೂ ಇಲ್ಲ; ಬೇರೆ ಯಾವುದನ್ನಾದರೂ ಹಿಡಿದರೆ ತನ್ನ 'ಜಾತಿಧರ್ಮ'ಕ್ಕೆ ಚ್ಯುತಿ ಬರುವುದಲ್ಲದೆ ಸಮಾಜದಲ್ಲಿ ಗರತಿಯ ಬದುಕಿಗಾಗಲೀ, ನೀತಿಯ ನಿರ್ಲಿಪ್ತ ಜೀವನಕ್ಕಾಗಲೀ ಅವಕಾಶವಿಲ್ಲ ಎಂಬ ಭಾವ ಅಬಲೆಯರಲ್ಲಿ ಮನೆಮಾಡಿಕೊಂಡಿತ್ತು. ಜಾತಿಗೆ ಮತ್ತು ಕಸುಬಿಗೆ ಯಾವ ಸಂಬಂಧವಿಲ್ಲ ಎಂಬ ಸೂತ್ರವನ್ನು ತೋರಿಸಿದ ಬಸವಣ್ಣನವರು ಆ ಜಾತಿಯಲ್ಲಿ ಹುಟ್ಟಿದವರು ವೇಶ್ಯೆಯರು ಎಂಬುವುದಕ್ಕಿಂತ ಯಾವ ಜಾತಿಯಲ್ಲಿ ಹುಟ್ಟಿದವರೇ ಇರಲಿ, ದೇಹವನ್ನು ಮಾರಿಕೊಂಡುಂಬುವವರು ವೇಶ್ಯೆಯರೆಂದು ಹೇಳಿ ಕರ್ಮವಾದವನ್ನು ಅಲ್ಲಗಳೆದರು. ಆ ಕಸುಬು ಬಿಟ್ಟವರಿಗೆ ಅನುಭವ ಮಂಟಪದಲ್ಲಿ ಆಶ್ರಯ ನೀಡಿದರು. ಹೊಟ್ಟೆಯ ಪಾಡಿಗಾಗಿ ಆ ವೃತ್ತಿ ಮಾಡುತ್ತಿದ್ದ

ವೇಶ್ಯೆಯರಿಗೆ ಸತ್ಯಶುದ್ಧ ಕಾಯಕಗಳನ್ನು ಒದಗಿಸಿ ಅವರನ್ನು ಸಂಸ್ಕರಿಸಿದರು, ಕಾಮತೃಪ್ತಿಗೆ, ಮನೋದೌರ್ಬಲ್ಯಕ್ಕೆ ವೇಶ್ಯಾವೃತ್ತಿ ಮಾಡುತ್ತಿದ್ದವರಿಗೆ ವಿವಾಹವಾಗಲು ಪ್ರೇರೇಪಿಸಿದರು. ಬಸವಣ್ಣನವರ ತತ್ತ್ವಾನುಯಾಯಿಗಳಾಗಿ ಬಂದ ಧೀರ ಪ್ರವೃತ್ತಿಯ ಸ್ವತಂತ್ರ ವಿಚಾರದ ಯುವಕರಿಗೆ ಅಂತಹ ವೇಶ್ಯೆಯರನ್ನು ಪರಿವರ್ತಿಸಿ ಮದುವೆಯಾಗಿ ಅವರನ್ನು ಸಭ್ಯ ಗೃಹಿಣಿಯರನ್ನಾಗಿ ಮಾಡಲು ಮನವಿ ಮಾಡಿಕೊಂಡರು. ಮಾತ್ರವಲ್ಲ ಆ ರೀತಿಯಾಗಿ ತ್ಯಾಗಕ್ಕೆ ಮುಂದಾದ 'ಮಿಂಡ ನಾಗಯ್ಯ' 'ಮಿಂಡ ಮಲ್ಲಯ್ಯ' ನಂತಹವರಿಗೆ ಧನಕನಕ ವಸ್ತ್ರಒಡವೆಗಳನ್ನು ನೀಡಿ ವೇಶ್ಯೆಯರನ್ನು ಪರಿವರ್ತಿಸಲು ವೇಶ್ಯಾವಾಟಿಕೆಗಳಿಗೆ ಕಳಿಸುತ್ತಿದ್ದರು. ಇದರಿಂದಾಗಿ ಇಂತಹ 'ವಿಟ ಜಂಗಮ'ರು ಕಲ್ಯಾಣ ನಗರದಲ್ಲಿ ೧೨,೦೦೦ ವಿದ್ದುದು ಮಾತ್ರವಲ್ಲದೆ, ಅಲ್ಲಿಯ ಪಣ್ಯಾಂಗನೆಯರೆಲ್ಲರೂ ಪುಣ್ಯಾಂಗನೆಯರಾಗಿದ್ದರು. ಇದು ಬಸವಣ್ಣನವರು ಸಾಧಿಸಿದ ಕ್ರಾಂತಿಕಾರಕ ಸಮಾಜ ಸುಧಾರಣೆ. ಏಸುಕ್ರಿಸ್ತನ ಜೀವನದಲ್ಲಿ ಅವನು ಪತಿತೆಯೊಬ್ಬಳನ್ನು ಕ್ಷಮಿಸಿದುದನ್ನು (*John. 8:3*) 'ಇನ್ನು ಮೇಲೆ ಪಾಪಮಾಡಬೇಡ' ಎಂದು ಬೋಧೆಮಾಡಿ ಕಳಿಸಿಕೊಟ್ಟುದನ್ನು ಕಾಣುತ್ತೇವೆ. ಹಾಗೆಯೇ ಬುದ್ಧನು ವೇಶ್ಯೆಯೊಬ್ಬಳು ಅಪಾರ ಭಕ್ತಿಯಿಂದ ನೀಡಿದ ಭಿಕ್ಷೆಯನ್ನು ಸ್ವೀಕರಿಸಿ ಅವಳ ಜೀವನದಲ್ಲಿ ಪರಿವರ್ತನೆಯನ್ನುಂಟು ಮಾಡಿದುದನ್ನು ಕಾಣುತ್ತೇವೆ. ಹೀಗೆ ಸಮಾಜದಿಂದ ತಿರಸ್ಕೃತರಾಗಿದ್ದ ಪತಿತರ ಬಗೆಗೆ ಅಪಾರ ಮರುಕ-ಮಮತೆಗಳನ್ನು ಈ ಮಹಾನುಭಾವರ ಬಾಳಿನಲ್ಲಿ ಕಾಣುತ್ತೇವೆ. ಆದರೆ ಬಸವಣ್ಣನವರ ಹೋರಾಟದಲ್ಲಿ ವೇಶ್ಯೆಯರ ಬಗ್ಗೆ ಮೇಲಿನಂತೆ ಅಪಾರ ಮರುಕವಿರುವುದಲ್ಲದೆ, ವೇಶ್ಯಾವೃತ್ತಿಯೇ ಸಮಾಜದಲ್ಲಿ ನಿರ್ಮೂಲನವಾಗಬೇಕು ಎಂಬ ತತ್ತ್ವನಿಷ್ಠೆ, ಸಾಮಾಜಿಕ ಹೋರಾಟಗಳು ಕಂಡುಬರುತ್ತವೆ.

ಇಲ್ಲಿ ಎರಡು ತತ್ತ್ವಗಳು ಸಮಾವೇಶವಾದುದನ್ನು ಗುರುತಿಸಬಹುದು. ಒಂದು ಮಾನವೀಯ ನೀತಿವಂತಿಕೆ, ಇನ್ನೊಂದು ವ್ಯಕ್ತಿಗತ ನೀತಿವಂತಿಕೆಯನ್ನು ಒಳಗೊಂಡ ಸಮಾಜಿಕ ತತ್ತ್ವನಿಷ್ಠೆ. ಉದಾಹರಣೆಗೆ: ಬಡವನೊಬ್ಬನನ್ನು ಕಂಡು ಮರುಕಗೊಂಡು ಒಂದು ಹೊತ್ತಿನ ಊಟ ಮಾಡಿಸುವುದು, ಕೆಲಸ ಕೊಡುವುದು ವ್ಯಕ್ತಿಗತ ನೀತಿವಂತಿಕೆ; ಬಡತನವೇ ನಿರ್ಮೂಲನವಾಗಬೇಕೆಂದು ಹೋರಾಡುವುದು ತತ್ತ್ವನಿಷ್ಠೆ. ಮೊದಲಿನದು ವ್ಯಕ್ತಿಗತ ಅಭಿವೃದ್ಧಿಗೆ ಹಾದಿಮಾಡಿದರೆ ಎರಡನೆಯದು ಸಾರ್ವತ್ರಿಕ ಶುದ್ಧೀಕರಣ-ಶ್ರೇಯಸ್ಸಿಗೆ ದಾರಿಮಾಡುವುದು. ನೀತಿವಂತಿಕೆಯ ಮುಂದುವರಿದ ಶ್ರೇಷ್ಠ ಹಂತವೇ ತತ್ತ್ವನಿಷ್ಠೆ. ಇವೆರಡೂ ಬಸವಣ್ಣನವರಲ್ಲಿ ಸಮಾವೇಶವಾಗಿ ಸಮಾಜದ ದೋಷ-ದೌರ್ಬಲ್ಯ-ಮೂಢ ಸಂಪ್ರದಾಯಗಳನ್ನು ಕಿತ್ತೆಸೆಯುವ ದಿಟ್ಟತನವನ್ನು ಅವರಲ್ಲಿ ಕಾಣುತ್ತೇವೆ.

ಬಸವಣ್ಣನವರು ಹೊಸ ಅರ್ಥಶಾಸ್ತ್ರ ಒಂದನ್ನು ಕೊಟ್ಟ ಅರ್ಥ ಶಾಸ್ತ್ರಜ್ಞರು, ಮಹಾಮುತ್ಸದ್ದಿಗಳು. ಅವರ ಅರ್ಥ ಶಾಸ್ತ್ರವನ್ನು ಇನ್ನೂ ಜಿಜ್ಞಾಸುಗಳು ಸರಿಯಾಗಿ ಅಭ್ಯಸಿಸಿ, ಅರ್ಥ ಮಾಡಿಕೊಳ್ಳಲೆತ್ನಿಸಿಲ್ಲ. ಅದಕ್ಕೆ ಕಾರಣವೆಂದರೆ, ವಚನ ಸಾಹಿತ್ಯವು ಕನ್ನಡದಲ್ಲಿ ಸೀಮಿತವಾಗಿ ಉಳಿದುದರಿಂದ ಕನ್ನಡಿಗರಲ್ಲದವರು ಓದಲು ಪ್ರಯತ್ನಿಸಲಿಲ್ಲ. ಎರಡನೆಯದಾಗಿ ಅಂದಿನ ಭಾಷೆಯ ಕೆಲವು ಪ್ರತಿಕ್ರಿಯೆ ಶಬ್ದಗಳು ಇಂದಿನ ಬಳಕೆಗಿಂತ ಪೂರ್ಣ ಭಿನ್ನವಾಗಿರುವುದು. ಅವರು ಗಣಿತ ಶಾಸ್ತ್ರ, ಅರ್ಥ ಶಾಸ್ತ್ರದಲ್ಲಿ ತಜ್ಞರು ಎಂಬುದು ಹಲವಾರು ದೃಷ್ಟಾಂತಗಳಿಂದ ಸಿದ್ಧವಾಗುತ್ತದೆ. ಮೊದಲಬಾರಿ ಮಾವನೊಡನೆ ಅರಮನೆಗೆ ಬಂದಾಗ, ಭಂಡಾರದ ಲೆಖ್ಖ-ಪತ್ರದ ತಪಾಸಣೆ ನಡೆವದ್ದು, ಅದರಲ್ಲಿ ಸ್ವಲ್ಪ ಅಚಾತುರ್ಯವೋ ಅವ್ಯವಹಾರವೋ ನಡೆದಾಗ ಬರೀ ನೋಟ ಮಾತ್ರದಿಂದಲೇ ತಪ್ಪನ್ನು ತೋರಿಸಿ ಅನ್ಯಾಯವನ್ನು ತಡೆದುದು ಇದಕ್ಕೆ ದೃಷ್ಟಾಂತ. ಎಲ್ಲಿಂದಲೋ (ಶಿವನಿಂದ) ಹಾರಿ ಬಂದು ಬಿದ್ದ ತಾಮ್ರಪಟದ ವಿಚಿತ್ರ, ಲಿಪಿಯನ್ನು ಓದಿ ಅರಸನಿಗೆ ಹುದುಗಿದ್ದ ಸಂಪತ್ತನ್ನು ತೆಗೆದು ಕೊಡುವುದನ್ನು ಕಾಣುತ್ತೇವೆ. ಇದೊಂದು ಪವಾಡದಂತೆ ಚಿತ್ರಿತವಾಗಿದ್ದು ಬಸವಣ್ಣನವರು ಬಹುಭಾಷಾತಜ್ಞ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇನ್ನೊಂದು ದಿಕ್ಕಿನಿಂದ ಅರ್ಥವಿಸಿದರೆ ಕೆಲವು ನೂತನ ಆರ್ಥಿಕ ತತ್ತ್ವಗಳ ಅನುಷ್ಠಾನದಿಂದ ಬಸವಣ್ಣನವರು ಅಪಾರ ಸಂಪತ್ತಿನ ಆವಿಷ್ಕಾರ ಮಾಡಿಕೊಟ್ಟರು ಎಂದೂ ತಿಳಿಯಲು ಸಾಧ್ಯತೆಯುಂಟು.

ಬಸವಣ್ಣನವರು ಕೊಟ್ಟ "ಕಾಯಕವೇ ಕೈಲಾಸ" ಎಂಬುದು ಒಂದು ಧಾರ್ಮಿಕ ತತ್ತ್ವ ಮಾತ್ರವೇ ಅಲ್ಲ. ಅದು ಅರ್ಥ ಶಾಸ್ತ್ರದ ಒಂದು ಸಿದ್ಧಾಂತ ಎಂದು ನನ್ನ ಅಭಿಪ್ರಾಯ. ರಾಷ್ಟ್ರದ ಸಂಪತ್ತಿಗೆ ಎರಡು ಮುಖಗಳು: ಉತ್ಪಾದನೆ ಮತ್ತು ವಿತರಣೆ. ಸಮರ್ಥವಾಗಿ ಉತ್ಪಾದಿಸಲು "ಕಾಯಕವೇ ಕೈಲಾಸ" ಎಂಬ ಉತ್ಪಾದನಾ ಸೂತ್ರವನ್ನು, ಮತ್ತು ಆ ಉತ್ಪಾದನೆಯನ್ನು ಸಮರ್ಪಕವಾಗಿ ಹಂಚಲು " ದಾಸೋಹವೇ ದೇವಧಾಮ " ಎಂಬ ವಿತರಣಾ ಸೂತ್ರವನ್ನು ಬಸವಣ್ಣವನರು ಕಂಡು ಹಿಡಿದರು. ಇಲ್ಲಿ ಕಾಯಿದೆಯ ಮೂಲಕ ಜನರನ್ನು ನಿಯಂತ್ರಿಸುವುದಕ್ಕಿಂತ ಅವರಲ್ಲಿ ನೈತಿಕ ಪ್ರಜ್ಞೆಯನ್ನು ಉದ್ದೀಪಿಸಿ ಜನರನ್ನು ಕಾಯಕಕ್ಕೆ ಹಚ್ಚಿದ ಅಣ್ಣನವರು ತಮ್ಮ ಪ್ರಯತ್ನವು ಯಶಸ್ವಿಯಾಯಿತೋ ಇಲ್ಲವೋ ಎಂದು ಒರೆಗೆ ಹಚ್ಚಿ ಪರೀಕ್ಷಿಸಿದುದನ್ನು ಕಾಣಬಹುದು. ಸ್ವಯಂಪ್ರೇರಿತರಾಗಿ ಸರಳ ಜೀವನ ನಡೆಯಿಸುತ್ತಿದ್ದ ಅವರ ಅನುಯಾಯಿಗಳು ಅವಶ್ಯಕತೆಗಿಂತ ಹೆಚ್ಚಾಗಿ ಒಂದು ದುಡ್ಡನ್ನು ಸ್ವೀಕರಿಸಲು ಸಿದ್ಧರಿರಲಿಲ್ಲ. ಇದನ್ನು ಪರೀಕ್ಷಿಸಲು ಅಣ್ಣನವರು ಮೋಳಿಗೆ ಮಾರಯ್ಯನ ಮನೆಯಲ್ಲಿ ಹೊನ್ನಿನ ತುಂಡುಗಳನ್ನು ಚಲ್ಲಿದರು. ನುಲಿಯ ಚಂದಯ್ಯ ಹಗ್ಗ ಮಾರಲು ಬಂದಾಗ ಬೆಲೆಗಿಂತ ಹೆಚ್ಚೇ ಹಣ ನೀಡಿ ಅವನ ಪರೀಕ್ಷೆ ಮಾಡಿದರು. ಆಯ್ದಕ್ಕಿ ಮಾರಯ್ಯ ಅಕ್ಕಿ ಆಯುವಾಗ ಹೆಚ್ಚು ಅಕ್ಕಿ

ಯನ್ನು ಚೆಲ್ಲಿದ್ದರು. ಆ ಪರೀಕ್ಷೆಯಲ್ಲಿ ಮೋಳಿಗೆ ಮಾರಯ್ಯ, ನುಲಿಯ ಚಂದಯ್ಯ ಮತ್ತು ಆಯ್ದಕ್ಕಿ ಮಾರಯ್ಯಗಳು ಗೆದ್ದಾಗ ಅತೀವ ಆನಂದವನ್ನು ಅನುಭವಿಸಿ ತಮ್ಮ ಅರ್ಥ ಶಾಸ್ತ್ರವು ಸಫಲವಾದುದಕೆ ಹರ್ಷಪಟ್ಟರು. ತಾವಾಗಿ ಬಯಸಿ ಅವಶ್ಯಕತೆಗಿಂತ ಹೆಚ್ಚು ಸಂಗ್ರಹಿಸಬಾರದು, ಮಾತ್ರವಲ್ಲ ತಾನಾಗಿ ಬಂದರೂ ಅವಶ್ಯಕತೆಗಿಂತ ಹೆಚ್ಚು ಸಂಗ್ರಹಿಸಬಾರದು, ಒತ್ತಾಯ ಪೂರ್ವಕವಾಗಿ ಕೊಟ್ಟರೂ ಸಹ ಸ್ವೀಕರಿಸಬಾರದು. ಇದು ಅಣ್ಣನವರ ತತ್ತ್ವ. ಆಯ್ದಕ್ಕಿ ಮಾರಯ್ಯಾ ತುಸು ತಪ್ಪಿದ. ಆದರೇನು ಅವನ ಧರ್ಮಪತ್ನಿ ಹೆಚ್ಚಿನದನ್ನು ಹಿಂತಿರುಗಿಸಿದಾಗ ಅಣ್ಣನವರು ಹರ್ಷಿಸಿದರು, ತಮ್ಮನುಯಾಯಿಗಳ ಮನೋಸ್ಥೈರ್ಯವನ್ನು ಆಮಿಷಕ್ಕೆ ಒಡ್ಡಿ ಅಣ್ಣನವರು ಪರೀಕ್ಷಿಸುತ್ತಿದ್ದರು. ಆ ಯಾವ ಕಾಯಕ ಜೀವಿಗಳಲ್ಲಿಯೂ ಆಸೆ–ಆಮಿಷ ಸುಳಿಯಲಿಲ್ಲ ; ಅವರು ನಾಳೆಗಾಗಿ ಶೇಖರಿಸಲಿಲ್ಲ. ಇಂದಿನ ವಿಚಾರವಾದಿಗಳು ಪ್ರಶ್ನಿಸಬಹುದು : "ನಾಳೆಗಾಗಿ ಬೇಡ ಎಂದರೆ ಬದುಕಲು ಸಾಧ್ಯವೇ ? ಮಕ್ಕಳ ಮದುವೆಗೆ ಬೇಡವೆ ? ನಾಳೆಗಾಗಿ ಚಿಂತಿಸದಿದ್ದರೆ ಹೇಗೆ? ಬಸವಣ್ಣನವರ ವಿಚಾರ ಈ ಕಾಲಕ್ಕೆ ಪ್ರಾಯೋಗಿಕವಲ್ಲ." ಪ್ರಸ್ತುತ ಸಮಾಜಕ್ಕೆ ಅದು ಸರಿಯೋ ಅಲ್ಲವೋ ಎಂಬುದರ ಚರ್ಚೆ ನಮಗೆ ಬೇಡ. ಜನಗಳಲ್ಲಿ ಸಂಪತ್ತಿನ ಸಂಗ್ರಹದ ಬಗ್ಗೆ ನಿರಾಸಕ್ತಿ ಇಷ್ಟಿರುವಾಗ ಆ ನಾಡು ಎಷ್ಟು ಸಮೃದ್ಧವಿರಬೇಕು !

ಜೀವನದ ಸುಭದ್ರತೆ ಆಗ ಎಷ್ಟಿರಬಹುದು ! ಯಾವ ಕ್ಷಣವಲ್ಲಾದರೂ ದುಡಿದು ಗಳಿಸಿ ಸುಖವಾಗಿ ಬದುಕಬಲ್ಲೆ ಎಂಬ ವಿಶ್ವಾಸ ಜನಗಳಲ್ಲಿ ಇಷ್ಟಿದ್ದಾಗ ಬಸವಣ್ಣನವರ ಅರ್ಥ ಶಾಸ್ತ್ರ ಎಂತಹ ಪವಾಡವನ್ನು ಮಾಡಿರಬಹುದು ಎನ್ನಿಸದೆ? ಅಂತೆಯೇ ಕಳ್ಳನೊಬ್ಬ ನೀಲಾಂಬಿಕೆಯವರ ಓಲೆಗಾಗಿ ಕಳ್ಳತನಕ್ಕೆ ಬಂದು ಸಿಕ್ಕಿಬಿದ್ದಾಗ ಅಣ್ಣನವರು ದುಃಖಿಸುವರು ; ಇನ್ನೂ ಕೆಲವರ ಬಡತನ ನಿವಾರಣೆಯಾಗಿಲ್ಲವೇ ಎನ್ನುತ್ತಾರೆ. ನೀಲಾಂಬಿಕೆಯವರ ಓಲೆಗಾಗಿ ಕಳ್ಳತನ ನಿರ್ಮೂಲವಾಗಲಿಲ್ಲವೆ? ಅವನಿಗಿಲ್ಲದುದನ್ನು ಹೆಚ್ಚಾಗಿ ಇರಿಸಿಕೊಂಡು ನಾನು ಕಳ್ಳ ಎಂಬ ತತ್ತ್ವವನ್ನು ಆಗ ಕಂಡುಕೊಳ್ಳುತ್ತಾರೆ. ಅವರ ಮಹಾಮನೆಯ ಗೋವುಗಳನ್ನು ಕಳ್ಳರು ಒಯ್ದಾಗ ಇದ್ದವರು ಇಲ್ಲದವರಿಗೆ ಸ್ವಯಂ ಪ್ರೇರಿತರಾಗಿ ಕೊಡಬೇಕೆಂಬ ತತ್ತ್ವ ಹಿಡಿದು ಕರುಗಳನ್ನು ಕಳ್ಳರ ಮನೆಗೆ ಅಟ್ಟುತ್ತಾರೆ. ಆದರೆ ಅವರು ಇಲ್ಲದ, ಬಡತನದ ಬವಣೆಯ ಕಳ್ಳರಾಗಿರಲಿಲ್ಲ. ಕಳ್ಳರ ವೇಷದ ಅವರ ವಿರೋಧಿಗಳೆಂದು ನಂತರ ತಿಳಿಯುತ್ತದೆ.

ಅಣ್ಣನವರ ಅರ್ಥಶಾಸ್ತ್ರ, ಉತ್ಪಾದನಾ–ವಿತರಣಾ ಸೂತ್ರಗಳು ಯಶಸ್ವಿಯಾದ್ದರಿಂದಲೇ ಕಲ್ಯಾಣದಲ್ಲಿ ಆರ್ಥಿಕ ವಿಪ್ಲವ (*Economic crisis*) ಆಗಲಿಲ್ಲ. ಲಕ್ಷಾವಧಿ ಮಂದಿ ತಂಡೋಪತಂಡವಾಗಿ ಆಗಮಿಸಿದರೂ ನಿರುದ್ಯೋಗದ ಸಮಸ್ಯೆ

ಯಾಗಲಿ, ಸಂಪತ್ತಿನ ಕೊರತೆಯಾಗಲೀ ಎದುರಾಗಲಿಲ್ಲ. ಅಲ್ಲಿ ಎಲ್ಲರೂ ನೀಡುವವರೇ. ಇದ್ದು ಬೇಡುವವರು ಇಲ್ಲದ ಸಾಮಾಜಿಕ ಸ್ಥಿತಿಯನ್ನು ಕಂಡಾಗ ಅದನ್ನು ಊಹಿಸಲೂ ಸಾಧ್ಯವಿಲ್ಲದ ನಾವು ಮೂಗಿನ ಮೇಲೆ ಬೆರಳಿಡುವುದು ಅಚ್ಚರಿಯ ವಿಷಯವೇನಲ್ಲ. ಆದರಿಷ್ಟೇ, ಬಸವಣ್ಣನವರ ಅನೇಕ ಕ್ರಾಂತಿಕಾರಕ ಸುಧಾರಣೆಗಳು ಪೌರಾಣಿಕ ಭಾಷೆಯ ಬೆಡಗಿನಲ್ಲಿ ಮುಚ್ಚಿ ಮಂಕಾಗಿವೆ. ಉದಾಹರಣೆಗೆ ಕ್ರಾಂತಿಕಾರಕ ತತ್ತ್ವಗಳಾದ "ಜಂಗಮ". "ಜಂಗಮ ದಾಸೋಹ" ಇಂದು ಇಷ್ಟು ಶಿಥಿಲಾರ್ಥದಲ್ಲಿ ಬಳಸಲ್ಪಡುತ್ತಿವೆ.

"ಜಂಗಮವೆಂದರೆ ವಿಶಿಷ್ಟಜಾತಿಯವರು, ಜನ್ಮದಿಂದಲೇ ಅವರು ಶ್ರೇಷ್ಠರು. ಅವರಲ್ಲಿ ಜ್ಞಾನ-ಭಕ್ತಿ-ತಪಸ್ಸುಗಳು ಇರಲಿ ಬಿಡಲಿ ಜನ್ಮತಃ ಶ್ರೇಷ್ಠರಾದ ಅವರಿಗೆ ಕರೆದು ಉಣ್ಣಿಸಬೇಕು, ಗೌರವಿಸಿ ಕಾಣಿಕೆ ನೀಡಬೇಕು." ಇಂದು ಇದು ಮಾತ್ರ ಆಚರಣೆಯಲ್ಲಿರುವುದರಿಂದ ಈ ಆಚಾರ ಕಂಡಾಗ ಲಿಂಗವಂತರಲ್ಲದವರಿಗೆ ಮಾತ್ರವೇಕೆ ಸ್ವತಃ ಲಿಂಗಾಯತ ಸಮಾಜದ ವಿಚಾರವಂತ ಜನಾಂಗಕ್ಕೆ ಜಿಗುಪ್ಸೆ ಬರುವುದು ಸಹಜ. ಇದೇ ಧರ್ಮದ ಒಬ್ಬ ಸನ್ಯಾಸಿಗಳು ನಮ್ಮೊಡನೆ ಚರ್ಚೆಮಾಡುತ್ತ, "ಬಸವಣ್ಣನವರು ಮಾಡಿದ ಹುಚ್ಚುತನವೆಂದರೆ ಜಂಗಮರಿಗೆ ಕೊಟ್ಟ ಅತಿ ಗೌರವ, ಇದರಿಂದಾಗಿ ಅವರ ತತ್ತ್ವಗಳಲ್ಲಿ ನಮಗೆ ವಿಶ್ವಾಸವಿಲ್ಲ. ಅವರು ಯೋಗ್ಯರಿರಲಿ, ಬಿಡಲಿ, ಕರೆದು ಗೌರವಿಸಿ ಪಾದ ಪೂಜಿಸುವುದು ಅಸಹ್ಯ ವಿಚಾರ" ಎಂದರು. ಆಗ ನಾನವರಿಗೆ ತಿಳಿಸಿ ಹೇಳಿದೆ, "ಜಂಗಮ, ಈ ಶಬ್ದ ಧಾರ್ಮಿಕ ತತ್ತ್ವ; ಅದಕ್ಕಿಂತ ಮಿಗಿಲಾಗಿ ಅದು ಅರ್ಥ ಶಾಸ್ತ್ರದ ಒಂದು ಸಿದ್ಧಾಂತ. ಈ ತತ್ತ್ವದಿಂದಲೇ ಬಸವಣ್ಣನವರು ದೊಡ್ಡ ಸುಧಾರಕರಾಗುವರು. ಅವರ ತತ್ತ್ವಗಳಿಗೆ ನಾವು ವಿಪರೀತ ಅರ್ಥ ಕಲ್ಪಿಸಿ ವಿಕೃತ ಮಾಡಿದರೆ ಅವರ ತಪ್ಪೇನೂ ಅಲ್ಲ."

ವಚನ ಶಾಸ್ತ್ರದ ಮತ್ತು ಪ್ರಸ್ತುತ ಕೋಶದ ಆಧಾರದಿಂದ ಜಂಗಮ ಶಬ್ದಕ್ಕೆ ಸುಮಾರು ಒಂಬತ್ತು ಬಗೆಯಲ್ಲಿ ಅರ್ಥೈಸಬಹುದು. ಮೂಲತಃ ಜಂಗಮ ಇದು ಧಾರ್ಮಿಕ ತತ್ತ್ವ. ಮೊದಲು ಈ ಮುಖವನ್ನು ಪರಿಶೀಲಿಸಿ ಅನಂತರ ಅರ್ಥಶಾಸ್ತ್ರದ ವಿಚಾರಕ್ಕೆ ಬರುವೆ. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ." ಎಂಬ ವಾಕ್ಯದಲ್ಲಿ ಜಂಗಮವೆಂಬುದು ನಪುಂಸಕಲಿಂಗದಲ್ಲಿ ಬಳಕೆಯಾಗಿದೆ. ಇಲ್ಲಿ ಸ್ಥೂಲವಾಗಿ ಜಂಗಮವೆಂದರೆ ಚಾಲನೆಯುಳ್ಳದ್ದು, ಚಟುವಟಿಕೆಯುಳ್ಳದ್ದು ಎಂದು ಅರ್ಥವಾಗುವುದು. ಸ್ಥಾವರ ಎಂಬುದು ಸ್ಥಿರತೆಯನ್ನು ಬಿಂಬಿಸಿದರೆ, ಜಂಗಮವು ಚಲನೆಯನ್ನು ಚಿತ್ರಿಸುತ್ತದೆ. ಹೀಗೆ ಜಂಗಮವೆಂದರೆ ಚೈತನ್ಯ ಎಂದರ್ಥವಾಗುವುದು. ಹೆಚ್ಚಿನ ಪ್ರಯೋಗಗಳಲ್ಲಿ ಸ್ಥಾವರಕ್ಕೆ ಸಂಬಂಧಿಸಿಯೇ ಜಂಗಮ ಶಬ್ದವು ಪ್ರಯೋಗಿಸಲ್ಪಟ್ಟಿದೆ. ಈ ಪದವು ಮತ್ತೆ ವಿವಿಧಾರ್ಥಗಳಲ್ಲಿ ಹೇಗೆ ಬಳಸಲ್ಪಟ್ಟಿದೆ ಎಂಬುದನ್ನು ಉದಾಹರಣೆಗಳೊಡನೆ ಇಲ್ಲಿ ನೋಡುವಾ.

೧. ಜಂಗಮನೆಂದರೆ ಮಹಾತ್ಮ. ಜನನ-ಮರಣ-ಗಮನಗಳನ್ನು ಶೂನ್ಯ ಮಾಡಿಕೊಂಡವನು. ಜಂಗಮ ಪುನರ್ಜನ್ಮವನ್ನು ಗೆದ್ದವನು, ಮರಣ ಸಂಕಟದಿಂದ ಮುಕ್ತನು, ಈ ಜನ್ಮದಿಂದ ಮತ್ತೊಂದು ಜನ್ಮಕ್ಕೆ ಸಾಗುವ ಪರಿಭ್ರಮಣವನ್ನು ಇಲ್ಲವಾಗಿ(೦) ಮಾಡಿಕೊಂಡವನು.

ಜನನ ಮರಣ ದೇಹ ಧರ್ಮವಲ್ಲದೆ ಜಂಗಮಕ್ಕೆಲ್ಲಿಹದೋ !
ಕ್ಷುಧಾ-ತೃಷೆ ಪ್ರಾಣಧರ್ಮವಲ್ಲದೆ ಜಂಗಮಕ್ಕೆಲ್ಲಿಹದೋ !
ಸುಖ-ದುಃಖ ಮನೋಧರ್ಮವಲ್ಲದೆ ಜಂಗಮಕ್ಕೆಲ್ಲಿಹದೋ !
ಜ್ಞಾನಾಜ್ಞಾನಂಗಳು ಮುಮುಕ್ಷುವಿಗಲ್ಲದೆ ನಿಮ್ಮಲ್ಲಿ ಸಮರಸವಾದ
ಸಚ್ಚಿದಾನಂದ ಶಿವಯೋಗಿ ಜಂಗಮಕ್ಕೆಲ್ಲಿಹದೋ ಕಪಿಲಸಿದ್ಧ ಮಲ್ಲಿಕಾರ್ಜುನಾ.

—ಶ್ರೀ ಸಿದ್ಧರಾಮೇಶ್ವರ ವ. ೧೨೧೭, ಕ. ವಿ. ವಿ. ಪ್ರ.

ಈ ವಚನದ ಪ್ರಕಾರ ಜಂಗಮನೆಂದರೆ ಮಹಾಶಿವಯೋಗಿ, ಚೈತನ್ಯ, ಜ್ಞಾನಿ. ಶ್ರೀ ಅರವಿಂದರ ಕಲ್ಪನೆಯ ಅತಿಮಾನವ, ಶರೀರ-ಪ್ರಾಣ-ಮನದ ಗುಣಗಳಾದ ಷಡೂರ್ಮಿಗಳನ್ನು ಅಳಿದುಕೊಂಡವನು.

ಅ) ಕಾಮವ ತೊರೆದಾತ, ಹೇಮವ ಜರಿದಾತ
ಭಾನುವಿನ ಉದಯಕ್ಕೆ ಒಳಗಾಗದ ಶರಣನು !

ಬ. ಷ. ವ. ೩೫೮

ಆ) ಕಾಮಸಂಗವಳಿದು ಅನುಭಾವ ಸಂಗದಲ್ಲುಳಿದವರ ಆಗಲಲಾರೆನು.

ಬ. ಷ. ವ. ೫೧೩

ಕಾಮಸಂಗವಳಿದು ಶುದ್ಧ, ದಿವ್ಯದೈವಾನುಭವದ ಸಂಗದಲ್ಲುಳಿದವನೇ ಜಂಗಮನು.

೨. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಎಸ್. ಎಸ್. ಎಲ್. ಸಿ., ಬಿ. ಎ., ಎಂ. ಎ, ಇತ್ಯಾದಿ ಅರ್ಹತೆಗಳು ಇದ್ದಂತೆ ಲಿಂಗಾಂಗ-ಯೋಗ ಮಾರ್ಗದಲ್ಲಿ ಕೆಲವು ಅರ್ಹತೆಗಳಿವೆ. ಈ ಪಥದಲ್ಲಿ ಕ್ರಮಿಸುವ ಸಾಧಕನು ಒಂದೊಂದು ಆಧ್ಯಾತ್ಮಿಕ ಅರ್ಹತೆಗಳಿಸಿದಾಗ ಒಂದು ಯೌಗಿಕ ಹೆಸರು ಬರುವುದು. ಅವೇ ಭಕ್ತತ್ವ, ಗುರುತ್ವ, ಜಂಗಮತ್ವಗಳು. ಷಟಸ್ಥಲವೆಂಬ ಆರು ಹಂತಗಳ ಯೋಗಮಾರ್ಗದಲ್ಲಿ ಮೊದಲಿನ ಎರಡು ಸ್ಥಲಗಳು : ಅಂದರೆ ಭಕ್ತ-ಮಹೇಶ್ವರ ಸ್ಥಲಗಳು ಕ್ರಿಯಾಪ್ರಧಾನ ಸ್ಥಲಗಳು. ಪ್ರಸಾದಿ ಪ್ರಾಣಲಿಂಗಿ ಸ್ಥಲಗಳು ಜ್ಞಾನ ಪ್ರಧಾನ ಹಂತಗಳು. ಶರಣ, ಐಕ್ಯ-ಇವು ಅನುಭಾವ ಪ್ರಧಾನ ಮನೋಸ್ಥಿತಿಗಳು. ಕೆಲವು ವಿಶಿಷ್ಟ ತತ್ತ್ವಗಳು, ಆ ಆ ಮನೋಗುಣಗಳು ಅಳವಟ್ಟವನಿಗೆ ವಿಶಿಷ್ಟ ಹೆಸರುಗಳು ಅನ್ವಯಿಸುತ್ತವೆ. ಅಂಗದಲ್ಲಿ ಆಚಾರ

ವನ್ನು ಅಳವಡಿಸಿಕೊಂಡು, ಇಂದ್ರಿಯಗಳನ್ನು ಹರಿಯಬಿಡದೆ ಇಷ್ಟಲಿಂಗದ ಪೂಜೆಯನ್ನು ಮಾಡಲು ಶಕ್ತಿಹೊಂದಿದವನು ಭಕ್ತನು. ಅಂತರಂಗದಲ್ಲಿ ಅರಿವನ್ನು ಅಳವಡಿಸಿಕೊಂಡು ಮನಸ್ಸನ್ನು ನಿಗ್ರಹಿಸಿ ಪ್ರಾಣಲಿಂಗದ (ಆತ್ಮದ) ಅನುಸಂಧಾನವನ್ನು ಮಾಡಲು ಶಕ್ತನಾದವನು ಗುರುವು. ಆತ್ಮ ಸಂಗದಲ್ಲಿ ಅನುಭಾವ ಅಳವಟ್ಟು, ಭಾವನೆಗಳನ್ನು ಸಹ ನಿಗ್ರಹಿಸಿ ಭಾವಲಿಂಗದೊಡನೆ (ಪರಮಾತ್ಮನ–ಸರ್ವವ್ಯಾಪಿ ಚೈತನ್ಯ) ಭಾವಸಮರಸವನ್ನು ಹೊಂದಬಲ್ಲವನು ಜಂಗಮನು. ಜಂಗಮತ್ವವು ಅತ್ಯುನ್ನತ ಮಾನಸಿಕ–ಯೌಗಿಕ ಸ್ಥಿತಿ. ಆ ಸ್ಥಿತಿಯನ್ನು ಗಳಿಸಿದವರು ಲಕ್ಷಕ್ಕೊಬ್ಬರು ಸಿಗುವುದು ಕಠಿಣ. ಸ್ಥೂಲ ಪೂಜೆಯನ್ನು ಮಾಡಲಿಕ್ಕೆ ಬಂದರೆ ಭಕ್ತ, ಸೂಕ್ಷ್ಮವಾದ ಆತ್ಮಾನುಸಂಧಾನ ಮಾಡಲಿಕ್ಕೆ ಬಂದರೆ ಅವನು ಗುರುವು. ಸೂಕ್ಷ್ಮಾತಿಸೂಕ್ಷ್ಮವಾದ ಮಹಾ ಚೈತನ್ಯದ ಅನುಸಂಧಾನ ಮಾಡಬಲ್ಲವನು ಜಂಗಮ. ಭಕ್ತನು ಸದಾಚಾರಿ, ಗುರುವು ಸದ್ವಿಚಾರಿ, ಜಂಗಮನು ಶಿವಾನುಭಾವಿ.

ಅ) ಅರ್ಥ ಪ್ರಾಣ ಅಭಿಮಾನದಲ್ಲಿ ವಂಚನೆಯಿಲ್ಲದ ವ್ಯಕ್ತಿ ಭಕ್ತ.
ಬ.ಷ.ವ. ೨೧೭

ಆ) ವಿದ್ಯೆಗುಣ ಜ್ಞಾನ ಧರ್ಮ ಆಚಾರ ಶೀಲಂಗಳ ಸಾಧಿಸಿದವನು.
ಬ.ಷ.ವ. ೬೧೧

ಇ) ಸದಾಚಾರ ಸದ್ಭಕ್ತಿಯುಕ್ತನು, ಬ.ಷ.ವ. ೬೫೦

ಈ) ನಡೆ–ನುಡಿಯೊಂದಾದವನು. ಬ.ಷ.ವ. ೬೫೭

ಉ) ಆಸೆ ರೋಷ ಹರುಷಗಳಿಂದ ಕರಣೇಂದ್ರಿಯಗಳು
ಕಲಂಕಿತವಾಗದವನು, ತಾನಿದ್ದೆಡೆಗೆ ಬಂದುದನ್ನು ಲಿಂಗಾರ್ಪಿತವ
ಮಾಡಿ ಸ್ವೀಕರಿಸುವ ದೇವಶರಣಗತನು ಸದ್ಭಕ್ತನು. ಬ.ಷ.ವ. ೭೬೪

ಊ) ಬಯಲ ರೂಪ ಮಾಡಬಲ್ಲಾತನೆ ಶರಣನು ;
ಆರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭಾವಿ !
ಬ.ಷ.ವ. ೯೨೨

ಈ ವಚನವನ್ನು (ಊ) ಎರಡು ಉಪಮೆಗಳ ಮೂಲಕ ಸಾದರ ಪಡಿಸಲೆತ್ನಿಸುವೆ. ಶರಾವತಿಯಲ್ಲಿ ಉತ್ಪತ್ತಿಯಾದ ವಿದ್ಯುತ್ತು ದೊಡ್ಡ ಲೈನುಗಳಲ್ಲಿ ಹರಿಯುತ್ತಿರುತ್ತದೆ. ಅದನ್ನು ಸಣ್ಣ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಬೇಕಾದರೆ ವಿದ್ಯುತ್ ಕಂಬಕ್ಕೆ *Transformer* ಎಂಬ ಪರಿವರ್ತನೆ ಮಾಡಬಲ್ಲ ಒಂದು ಯಂತ್ರವನ್ನು ಅಳವಡಿಸಿ ಸಣ್ಣ ಪ್ರಮಾಣದಲ್ಲಿ ವಿದ್ಯುತ್ತನ್ನು ಮನೆಗೆ ತೆಗೆದುಕೊಳ್ಳಲಾಗುವುದು. ಆ ನೀರು ಹರಿದು ಸಾಗುವಾಗ ಅದರಲ್ಲಿನ ವಿದ್ಯುತ್ತನ್ನು ಹೊರತೆಗೆಯಲು *Genera-*

tors ಎಂಬ ತಿರುಗುವ ಚಕ್ರಗಳನ್ನು ಉಪಯೋಗಿಸಿ ತಿರುಗುವ ಚಕ್ರಕ್ಕೆ ನೀರು ಘರ್ಷಿಸುವಂತೆ ಮಾಡಿ ವಿದ್ಯುತ್ತನ್ನು ಉತ್ಪಾದಿಸಲಾಗುವುದು. ಈ ಎರಡು ಯಂತ್ರಗಳಂತೆ ಗುರು-ಜಂಗಮರು. ಅಣುರೇಣು ತೃಣ ಕಾಷ್ಟದಲ್ಲಿ ಬ್ರಹ್ಮಾಂಡದಲ್ಲೆಲ್ಲ ತುಂಬಿರುವ ಭಾವಲಿಂಗ ಚೈತನ್ಯವನ್ನು ಮಾನವನ ಬುದ್ಧಿ–ಮನಗಳು ಗ್ರಹಿಸಲಾರವೆಂದು ಆ ಮಹಾ ಚೈತನ್ಯವನ್ನು ಚುಳುಕಾಗಿ, ಇಷ್ಟಲಿಂಗದ ರೂಪದಲ್ಲಿ ಅಡಗಿಸಿ, ಅಂದರೆ ಬಯಲನ್ನು ರೂಪವಾಗಿ ಪರಿವರ್ತಿಸಿ ಅನುಗ್ರಹಿಸಬಲ್ಲ ಮಹಾಮಹಿಮನು ಗುರುವು (ಶರಣನು) ; ಅವನನ್ನು *Transformer* ಗೆ ಹೋಲಿಸಬಹುದು. ಶ್ರೀ ಗುರುವಿನಿಂದ ದೊರಕಿದ ರೂಪವನ್ನು, ಅರ್ಥಾತ್ ಕುರುಹನ್ನು ಹಿಡಿದೇ ಅರುಹನ್ನು, ನಿರಾಕಾರವನ್ನು ಬಯಲನ್ನು ಸಾಕ್ಷಾತ್ಕರಿಸಿಕೊಳ್ಳಬಲ್ಲವನು ಅನುಭಾವಿ, ಜಂಗಮ. ಇವನ ಆಧ್ಯಾತ್ಮ ಶಕ್ತಿಯನ್ನು ವಿದ್ಯುತ್ತನ್ನು ಉತ್ಪಾದಿಸಬಲ್ಲ ತಿರುಗು ಚಕ್ರಕ್ಕೆ ಹೋಲಿಸಬಹುದು.

ಈ ವಿವರಣೆ ಓದಿದಾಗ ಗುರುತ್ವ–ಜಂಗಮತ್ವಗಳು ಯೌಗಿಕ ಹಂತಗಳೇ ಎಂಬುದು ನಿಶ್ಚಯವಾಗುತ್ತದೆ. ಆದರೆ ಕೆಲವರು ಲಿಂಗಾಯತ ಧರ್ಮದ ಮೂಲ ಸಿದ್ಧಾಂತಕ್ಕೆ ತದ್ವಿರುದ್ಧವಾಗಿ "ಜಂಗಮತ್ವ ಜನ್ಮದಿಂದಲೇ ಬರುವಂತಹದು. ಜಂಗಮ ಜಾತಿಯಲ್ಲಿ(?) ಹುಟ್ಟಿದವರು ಮಾತ್ರವೇ ಸ್ವಾಮಿಗಳು, ಮಠಾಧಿಕಾರಿಗಳು ಆಗಬಲ್ಲರು. ಭಕ್ತರಾಗಿ ಹುಟ್ಟಿದವರು ಸ್ವಾಮಿಗಳಾಗಲು ಬರುವುದಿಲ್ಲ" ಎಂದು ತಿಳಿದಿದ್ದಾರೆ, ಪ್ರಚಾರ ಮಾಡುತ್ತಾರೆ. ಎಂತಹ ಹಾಸ್ಯಾಸ್ಪದ, ಅರ್ಥರಹಿತ ವಿಚಾರವಿದು! ?

ಜನ್ಮದಿಂದ ಯಾರೂ ಲಿಂಗಾಯತರಲ್ಲ; ಜಂಗಮರಲ್ಲ. ಯಾವ ಜಾತಿಯವನಿರಲಿ ಲಿಂಗವನ್ನು ಧರಿಸಿದವನು ಲಿಂಗಾಯತ, ಭಾವಲಿಂಗ ಪೂಜೆ ಮಾಡಬಲ್ಲ ಅನುಭಾವಿ ಜಂಗಮ.

ಅ) ಇಂತೀ ವೀರಾಚಾರ ನೆಲೆಗೊಳ್ಳದೆ
ವೀರ ವಂಶದಲ್ಲಿ ಹುಟ್ಟಿದ ಮಾತ್ರಕ್ಕೆ ವೀರಶೈವನೆಂತಪ್ಪನಯ್ಯಾ
ಕೂಡಲ ಚೆನ್ನಸಂಗಮದೇವಾ ?

ಚೆನ್ನಬಸವಣ್ಣನವರ ವಚನ ೧೧೫

ಪಿ. ಯು. ಸಿ. ಪಾಸಾದವನು ಬಿ. ಎ. ಅಭ್ಯಸಿಸಲು ಅರ್ಹನಾದಂತೆ, ಬಿ. ಎ. ಪಾಸಾದವನು ಎಂ. ಎ. ಓದಲು ಅರ್ಹನಾದಂತೆ ಭಕ್ತನಾದವನಿಗೆ ಗುರುತ್ವ–ಜಂಗಮತ್ವಗಳನ್ನು ಗಳಿಸಲು ಅವಕಾಶವಿದೆ. ಭಕ್ತನೇ ಗುರುವಾಗುವನು. ಜಂಗಮನಾಗುವನು ಎಂಬುದಕ್ಕೆ ಕೆಳಗಿನ ವಚನವೇ ಆಧಾರ.

ಅ) ಶ್ರೀಗುರು ಶಿಷ್ಯನ ಭವಿಪೂರ್ವಾಶ್ರಯವ ಕಳೆದು
ಭಕ್ತನ ಮಾಡಿದ ಬಳಿಕ
ಆ ಭಕ್ತ ಹೋಗಿ ಜಂಗಮವಾಗಿ ಗುರುವಿನ ಮಠಕ್ಕೆ ಬಂದಡೆ
ಆ ಜಂಗಮವೆನ್ನ ಶಿಷ್ಯನೆಂದು ಗುರುವಿನ ಮನದಲ್ಲಿ ಹೊಳೆದಡೆ
ಪಂಚಮಹಾಪಾತಕ.

ಚೆನ್ನಬಸವಣ್ಣನವರ ವಚನ ೪೫೩

ಈ ವಚನಗಳನ್ನು ಪರಿಶೀಲಿಸಿದಾಗ ಜಂಗಮತ್ವವು ಅಸಾಮಾನ್ಯ ಯೋಗಸ್ಥಿತಿಯೆಂದೂ, ಅದು ಜಾತಿವಾಚಕ ಅಲ್ಲವೆಂದೂ ಮನಗಾಣುತ್ತೇವೆ. ಜನ್ಮದ ಶ್ರೇಷ್ಠತ್ವವನ್ನೇ ಆಧಾರವಾಗಿರಿಸಿಕೊಂಡು ಬೇಡಿಕೊಂಡು, ಬಿನ್ನಹ ತೀರಿಸಿಕೊಂಡು ಕಾಲ ಕಳೆಯುವುದನ್ನು ಶರಣರು ಎಂದೂ ಒಪ್ಪರು. ಮಾತ್ರವಲ್ಲ, ಅಂತಹ ಬಗೆಯ ಬದುಕನ್ನು ಪರೋಪಜೀವನ ಎನ್ನುವರು.

ಇ) ನೇಮವ ಮಾಡಿಕೊಂಡು, ಭಕ್ತರ ಭವನಂಗಳ ಹೊಕ್ಕು
ಕಾಯಕ ಸತ್ತು, ಹಣ ಹೊನ್ನ ಬೇಡಿಹೆನೆಂದು ಕಷ್ಟವಲ್ಲವೆ ?
ಆ ಗುಣ ಅಮರೇಶ್ವರ ಲಿಂಗಕ್ಕೆ ದೂರ.

ಆಯ್ದಕ್ಕಿ ಮಾರಯ್ಯ,– ಶೂನ್ಯಸಂಪಾದನೆ. ೨

ಕಾಯಕ ಮಾಡದೆ ಭೋಗಿಸಲು ಅಧಿಕಾರವಿಲ್ಲ. ಬೇಡುವವ ಭವಿ–ನೀಡುವವ ಭಕ್ತ, ಬೇಡುವಾತ ಜಂಗಮನಲ್ಲ–ಬೇಡಿಸಿಕೊಂಬಾತ ಭಕ್ತನಲ್ಲ, ಎಂದು ಹೇಳುವಲ್ಲಿ ಗುರುವಾಗಲೀ, ಲಿಂಗವಾಗಲಿ ಕಾಯಕದಿಂದಲೇ ಮುಕ್ತಿ ಎನ್ನುವ ಅಭಿಪ್ರಾಯ ವ್ಯಕ್ತವಾಗುವುದು.

೩. ಜಂಗಮವೆಂದರೆ 'ಧರ್ಮ ಪ್ರಸಾರಕ' ಎಂಬ ಭಾವವೂ ಲಿಂಗಾಯತ ಧರ್ಮ ಶಾಸ್ತ್ರದಲ್ಲಿ ಪ್ರಮುಖವಾಗಿದೆ. ಹಗಲಿರುಳು ಊರೂರು ತಿರುಗುತ್ತ ಧರ್ಮವನ್ನು ಜನರಿಗೆ ಮುಟ್ಟಿಸುತ್ತ ಜನತೆಯನ್ನು ತಿದ್ದುವವನು ಜಂಗಮನು. ಅವನು ಜ್ಞಾನ ಚೈತನ್ಯ ಸ್ವರೂಪವಾಗಿ, ನಡೆಲಿಂಗವಾಗಿ ಸಂಚರಿಸುತ್ತಾ ಜನತೆಯನ್ನು ಸತ್ಯ ಮಾರ್ಗಕ್ಕೆ ಹಚ್ಚುವ ಉಪದೇಶಕನು.

ಅ) ನಿಜವಿಡಗಿದ ರೂಪು ನಿರ್ವಯಲ ಸ್ಥಾನ
ನಡೆಲಿಂಗ ಜಂಗಮ ಕೂಡಲ ಸಂಗಮದೇವಾ. ಬ. ಷ. ವ. ೪೧೪

ಜಂಗಮನೆಂದರೆ ಧರ್ಮದ ಕಡೆಗೆ ಜನರು ಬರದಾಗ ಧರ್ಮವನ್ನೇ ಅವರೆಡೆಗೆ ಒಯ್ದು ಅವರ ಹೃದಯದ ಬಟ್ಟೆಗಳನ್ನು ತೊಳೆಯುವ ಆಧ್ಯಾತ್ಮಿಕ ಮಡಿವಾಳ.

ಆ) ಜಂಗಮವಾಗಿ ಬಂದು ಜರಿದು ಶೂಲವನಿಳುಹಿ
ಪ್ರಸಾದದ ಮದ್ದನಿಕ್ಕಿ ಸಲಹು ಕೂಡಲಸಂಗಮದೇವಾ.
ಬ. ಷ. ವ. ೩೮೭

ಇ) ಗುರೂಪದೇಶ ಮಂತ್ರವೈದ್ಯ, ಜಂಗಮೋಪದೇಶ ಶಸ್ತ್ರವೈದ್ಯ...
ಕೂಡಲ ಸಂಗನ ಶರಣರ ಅನುಭಾವ ಮಡಿವಾಳನ ಕಾಯಕದಂತೆ.
ಬ. ಷ. ವ. ೬೫೩

ಈ ಜಂಗಮರು ಸತ್ಯಾಗ್ರಹಿಗಳೂ ಆಗಿದ್ದರು. ಯಾರಾದರೂ ತಪ್ಪುಗಳನ್ನು ಮಾಡುತ್ತ ದುರ್ನಡತೆಯಲ್ಲಿದ್ದರೆ, ಅವರನ್ನು ತಿದ್ದಲು ಅವರ ಮನೆಯ ಕಂಭಕ್ಕೆ ತೆಕ್ಕೆ ಹಾಕಿ ನಿಂತುಕೊಳ್ಳುವ 'ತೆಕ್ಕೆ ಕಾಯಕ', ಭಾರವಾದ ಕಲ್ಲುಹೊತ್ತು ನಿಲ್ಲುವ 'ಕಲ್ಭಾರ ಕಾಯಕ', ಚೂಪಾದ ಕಬ್ಬಿಣದ ಮುಳ್ಳಾವಿಗೆಯ ಮೇಲೆ ನಿಲ್ಲುವ 'ಮುಳ್ಳಾವಿಗೆ ಕಾಯಕ' ಮುಂತಾದವುಗಳನ್ನು ಕೈಗೊಂಡು ಮುಷ್ಕರ ಹೂಡುತ್ತಿದರು. ಇವರಿಗೆ ಕಾಯಕ ಅಯ್ಯಗಳೆಂದೂ ಗಣಾಚಾರಿಗಳೆಂದೂ ಕರೆಯುತ್ತಾರೆ.

೪. ಸೈದ್ಧಾಂತಿಕ (*Metaphysics*) ದೃಷ್ಟಿಯಿಂದ ಲಿಂಗ-ಜಂಗಮಕ್ಕೆ ಒಂದು **ಅರ್ಥವನ್ನು** ಕೊಡಬಹುದು. ಲಿಂಗವೆಂದರೆ ಪರಶಿವ, ಜಂಗಮವೆಂದರೆ ಪರಾಶಕ್ತಿ. ಈ ಜಗತ್ತು–ಜೀವ ವಿಕಾಸದಲ್ಲಿ ಎರಡು ತತ್ತ್ವಗಳನ್ನು ಕಾಣುತ್ತೇವೆ. ಒಂದು ಸ್ಥಿರ ಅಂಶ, ಇನ್ನೊಂದು ಪರಿವರ್ತನೀಯ ಅಂಶ. ಗಿಡದಲ್ಲಿ ಶತಮಾನಗಳಿಂದಲೂ ಅವ್ಯಾಹತವಾಗಿ ಹರಿದು ಬಂದ ಒಂದು ಸ್ಥಿರಾಂಶವನ್ನು. ಈಗಿನ ಮಟ್ಟಿಗೆ ಪಂಚ ಭೂತಗಳ ಪ್ರತಿಫಲವಾಗಿ ಬಂದ ಚರಾಂಶ–ಅಥವಾ ಪರಿವರ್ತನಾಂಶವನ್ನು ಗುರುತಿಸಬಹುದು. ಅಂತೆಯೇ ಮಗನು ತಾಯಿ ತಂದೆಯರನ್ನು ಹೋಲುತ್ತಾನೆ: ಮತ್ತೂ ಭಿನ್ನವಾಗಿರುತ್ತಾನೆ. ಒಂದು ಜೀವಕೋಶದತ್ತ ನ್ಯೂಕ್ಲಿಯಸ್ ಮತ್ತು ಪ್ಲೇಟೋಪ್ಲಾಸಮ್‌ಗಳು ಇದ್ದು ಅವು ಅವ್ಯಾಹತವಾಗಿ ಹರಿದು ಹೋಗುತ್ತಿರುತ್ತವೆ. ಆದರೆ ಸುತ್ತಲಿನ ಸೈಟೋ ಪ್ಲಾಸಮ್ ರೂಪಾಂತರ ಹೊಂದುತ್ತಿರುತ್ತದೆ. ಪುನರ್ಜನ್ಮ ಸಿದ್ಧಾಂತ ಹೇಳುವಂತೆ ಆತ್ಮವೊಂದು ಅವ್ಯಾಹತವಾಗಿ ಹರಿಯುತ್ತದೆ; ದೇಹ, ಮನಸ್ಸುಗಳ ನಿರ್ಮಾಣ ಮಾತ್ರ ಒಂದೊಂದು ಜನ್ಮಕ್ಕೂ ಹೊಸದಾಗಿ ಸೇರುತ್ತದೆ. ಅದೇ ರೀತಿ ವಿಶ್ವದಲ್ಲಿಯೂ ಒಂದು ಮಹಾವಸ್ತು ಸ್ಥಿರವಾಗಿ ಇರುತ್ತದೆ. ಮತ್ತಾವುದೋ ಪರಿವರ್ತನೀಯವಾಗಿ ರೂಪಾಂತರಗೊಳ್ಳುತ್ತದೆ. ನೀರಿನಲ್ಲಿರುವ ಆಮ್ಲಜನಕ, ಜಲಜನಕದ ಅಂಶ ಮಾತ್ರ ಇದ್ದೇ ಇರುತ್ತದೆ. ಆದರೆ ಅದು ವಿವಿಧ ಕಾರಣಗಳಿಗಾಗಿ ಮಂಜುಗಡ್ಡೆ, ನೀರು, ಆವಿಯಾಗಿ ರೂಪಾಂತರಗೊಳ್ಳುತ್ತದೆ.

ಹೀಗೆ ಸ್ಥಿರ-ಚರ ಎರಡು ಅಂಶಗಳಿವೆ. ಸ್ಥಿರವಾದುದು ನಿರ್ವಿಕಾರ, ಅಪರಿವರ್ತನೀಯವಾಗಿರುತ್ತದೆ. ಅದೇ ಲಿಂಗ–ಅಥವಾ ಶಿವತತ್ವ. ಇನ್ನೊಂದು ರೂಪಾಂತರ

ಗೊಳ್ಳುತ್ತ, ಲೀಲೆಮಾಡುತ್ತದೆ. ಅದೇ ಜಂಗಮ ಅಥವಾ ಶಕ್ತಿತತ್ವ. ಇವೆರಡು ಬೇರೆಯಲ್ಲ-ಭಿನ್ನವಾಗಿಲ್ಲ. ಒಂದು ಬಯಲಾದರೆ (*Cosmic space*) ಇನ್ನೊಂದು ಬಯಲನ್ನು ತುಂಬಿರುವ ಶಕ್ತಿ. (*Cosmic Energy*)

ಅ) ಒಂದು ಬಿಂದೂ ಇಲ್ಲದಂದು, ನಂದಿವಾಹನರಿಲ್ಲದಂದು...
ನಿರಂಥ ತಮಂಥ ವಿಲ್ಲದಂದು, ಅಂದು
ಕೂಡಲ ಚನ್ನಸಂಗಯ್ಯನಲ್ಲಿ ಬಸವಣ್ಣನೊಬ್ಬನೇ ಉದಯವಾದನು.
ಚ. ಬ .ವ. ೧೨

ಆ) ಬಯಲು ಮೂರ್ತಿಯಾಗಿ ನಿಂದನೊಬ್ಬ ಶರಣ
ಆತನ ವಿದ್ಯಾಬುದ್ಧಿಯಿಂದ ಹುಟ್ಟಿದಾತ ಬ್ರಹ್ಮ
ಆತನ ಶಾಂತಿಸ್ಥೈರಣೆಯಿಂದ ಹುಟ್ಟಿದಾತ ವಿಷ್ಣು
ಆತನ ಕೋಪದಿಂದ ಹುಟ್ಟಿದಾತ ರುದ್ರ
ಈ ಮೂರು ಪೀಠವಂತಿರಲಿ !
ಈ ತತ್ತ್ವತ್ರಯಂಗಳಿಗೆ ತಾನೆ ಕಾರಣವಾಗಿಪ್ಪ
ಶರಣನ ನಿಲವರಿದು ಶರಣೆನುತಿರ್ದೆನು
ಕೂಡಲ ಚನ್ನಸಂಗಮದೇವಾ. ಚ. ಬ. ವ. ೧೩

ಬಯಲು-ಪರಶಿವ ಲಿಂಗವಾದರೆ ಇಚ್ಛೆ-ಜ್ಞಾನ-ಕ್ರಿಯಾಶಕ್ತಿಯುಕ್ತ ಆದಿಶಕ್ತಿಯೇ ಜಂಗಮ ಅಥವಾ ಶರಣ.

ಈ ಜಗತ್ತಿನಲ್ಲಿರುವ ಪರಿವರ್ತನೀಯ ಅಂಶವೆಲ್ಲ ಜಂಗಮ, ಸ್ಥಿರವಾದ ನಿರ್ವಿಕಾರ ಅಂಶವೇ ಲಿಂಗ.

೫. ಜಂಗಮ ಶಬ್ದಕ್ಕೆ ಸಮಾಜ **ಶಾಸ್ತ್ರ**ದ ಹಿನ್ನೆಲೆಯಲ್ಲಿಯೂ ಅರ್ಥಮಾಡಬಹುದು. ಈ ಅರ್ಥದಲ್ಲಿ ಜಂಗಮವೆಂದರೆ "ಲಿಂಗವಂತ". ಪ್ರತಿ ಲಿಂಗಧಾರಿಯೂ ಜಂಗಮನೇ.

ಅ) ಶಿವಭಕ್ತರಾದ ಕಾರಣ, ಜಂಗಮವೆ ಲಿಂಗ. ಬ. ಷ. ವ. ೪೦೨

ಆ) ಉಟ್ಟು ತೊಟ್ಟು ಪೂಜ್ಯವಾಗಿ ಬಂದ ಜಂಗಮವ ವಿಶೇಷವೆಂದು
ಕಂಥೆ ಬೊಂತೆಯ ಜಂಗಮ ಬಂದಡೆ ಹೀನವೆಂದು ಕಂಡೆನಾದಡೆ
ಪಂಚಮಹಾಪಾತಕ.
ಬ.ಷ.ವ. ೪೧೧

ಶ್ರೀಮಂತ ಭಕ್ತರನ್ನು (*Converts*) ಪೂಜ್ಯ ಭಾವ, ಆದರದಿಂದ ಕಾಣುವುದು, ಸಾಮಾನ್ಯ ವೇಷದ ಬಡಭಕ್ತರನ್ನು ಕೀಳಾಗಿ ಕಾಣುವುದು ಪಾಪ ಕಾರ್ಯ

ಗಳಲ್ಲಿ ಒಂದೆಂದು ಬಸವಣ್ಣನವರ ಅಭಿಪ್ರಾಯ. ಅಂದರೆ ದೀಕ್ಷೆಯಿಂದ ವರ್ಣಭೇಧ ಅಳಿಯಬೇಕು. ದೀಕ್ಷೆಯಿಂದ ವರ್ಣಭೇಧ ಅಳಿಯಬೇಕೆಂಬುದಂತೂ ನಿರ್ವಿವಾದವಾಗಿ ಸತ್ಯ.

ಇ) ಕುಲವುಂಟೇ ಜಂಗಮವಿದ್ದೆಡೆಯಲ್ಲಿ ? ಬ. ಷ. ವ. ೭೬೯

ಈ) ಜಾತಿಸೂತಕದ **ಪೂರ್ವಾಶ್ರಮವ** ಕಳೆದು ಜಂಗಮವೆಂದ
ಚ. ಬ. ವ. ೩೨೦

ಉ) ಮಂತ್ರ ಸಂಸ್ಕಾರದಿಂದ ಜಡಶಿಲೆ ಲಿಂಗವಾಗುತ್ತಿರ್ಪುದೆಂಬರಿ. ಆ ಮಂತ್ರ ಸಂಸ್ಕಾರದಿಂದ ಶಿವಾಂಶಿಕನಾದ ಮನುಷ್ಯನು ಶಿವಜ್ಞಾನ ಸಂಪನ್ನನಾಗಿ ಗುರುವಾಗನೇ? ಮತ್ತೆ ಜಂಗಮವಾಗನೆ? ಚ.ಬ.ವ. ೧೬೯

೬. ಈಗ ಅರ್ಥಶಾಸ್ತ್ರ ದೃಷ್ಟಿಯಿಂದ ವಿವೇಚನೆ ಮಾಡಬಹುದು.

ಅ) ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಸ್ಥಾವರವೆಂದರೆ ದುಡ್ಡು, ಆಸ್ತಿ (*Capital*) ; ಜಂಗಮವೆಂದರೆ ದುಡಿತ. ಕಾಯಕ(***Labour***), ಆಸ್ತಿಯ ಮೇಲೆ ಬದುಕುವ ಅರ್ಥನೀತಿಗಿಂತಲೂ, ದುಡಿತದ ಮೇಲೆ ಬದುಕುವ ಅರ್ಥನೀತಿಯನ್ನು ಶರಣರು ಮೆಚ್ಚುತ್ತಾರೆ. ಆಸ್ತಿಯನ್ನು ಜಡವಾಗಿ ಇರಿಸಿ, ಕಡೆಗೆ "ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ," (ಬ. ಷ. ವ. ೨೦೧) ಅದನ್ನು ಸಾಧ್ಯವಾದಷ್ಟು ಬೇಗನೆ ವಿನಿಯೋಗಿಸು ಎನ್ನುತ್ತಾರೆ.

ಹಾಗಾದರೆ ಮನಸ್ಸಿಗೆ ಬಂದಂತೆ ಹಣವನ್ನು ಉಪಯೋಗಿಸಬಹುದೇ? ಇಲ್ಲ ; ಶರೀರವನ್ನು ದುಡಿಸಿ ಬದುಕುವುದು, ಬುದ್ಧಿಯನ್ನು ದುಡಿಸಿ ಬದುಕುವುದು ಶ್ರೇಷ್ಠ. ದುಡ್ಡನ್ನು ದುಡಿಸಿ, ಅದು ಇಲ್ಲದವರನ್ನು ಶೋಷಿಸಿ ಬದುಕುವುದು ಹೀನ.

ಆ) ಭಕ್ತರು ಕಾಯಕವೆಂದು, ದಾಯಗಾರಿಕೆಯಲ್ಲಿ ತಂದು ದಾಸೋಹವ ಮಾಡಬಹುದೆ? (ಅಯ್ದಕ್ಕಿ ಲಕ್ಕಮ್ಮ, ಶೂನ್ಯಸಂಪಾದನೆ ವ. ೧೬)

ಆದ್ದರಿಂದ ಸ್ಥಾವರದ ಸಂಗ್ರಹಕ್ಕೆ ಯತ್ನಿಸದೆ, ದುಡಿತದ ಮೇಲೆ ಕಡ್ಡಾಯ ಕಾಯಕ ಮಾಡುತ್ತ, ಬದುಕಿದರೆ ಆಗ ಆರ್ಥಿಕ ಅಸಮಾನತೆಗೆ, ಅತಿ ಸಂಗ್ರಹಕ್ಕೆ ಅವಕಾಶವೆಲ್ಲಿರುವುದು? ಉಳ್ಳವರು–ಇಲ್ಲದವರು ಎಂಬ ಭೇದವೇ ಅಳಿಯುವುದು.

೭. ಜಂಗಮವೆಂದರೆ ಜಗತ್ತಿನ ಸಕಲ ಮಾನವಕೋಟಿ ಎಂಬರ್ಥವೂ ಉಂಟು.

ಅ) ನಾನೊಬ್ಬನೆ ಭಕ್ತನು, ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ
ಜಂಗಮಲಿಂಗ ನೀನೇ ಅಯ್ಯಾ ; ಕೂಡಲ ಸಂಗಮದೇವಾ.
ಬ. ಷ. ವ. ೮೯೩

೮. ಜಂಗಮ ಶಬ್ದವನ್ನು ಸಾಮಾನ್ಯವಾದ ಜೀವಂತ ವ್ಯಕ್ತಿಗೆ ಸಹ ಬಳಸಿದ್ದಾರೆ. ಈ ಅರ್ಥದಲ್ಲಿ ಜಗತ್ತಿನಲ್ಲಿನ ಪ್ರತಿ ಮಾನವ ಜೀವಿಯೂ ಜಂಗಮವೆ ?

ಅ) "ಉಂಬ ಜಂಗಮ ಬಂದಡೆ ನಡೆಯೆಂಬರು
ಉಣ್ಣದ ಲಿಂಗಕ್ಕೆ ಬೋನವಹಿಡಿಯೆಂಬರಯ್ಯಾ"! ಬ.ಷ.ವ. ೧೯

ಇಲ್ಲಿ ಉಂಬ ಜಂಗಮ ಎಂದರೆ ಹಸಿದ ಒಡಲು, ಚೈತನ್ಯಪೂರ್ಣ ವ್ಯಕ್ತಿ, ಎಂಬ ಅರ್ಥವಾಗುವುದು. ಹಸಿದು ಬಳಲಿದ ವ್ಯಕ್ತಿಯೊಬ್ಬ ಬಂದಾಗ ಅವನನ್ನು ಮರು ದಿಂದ ಕಂಡು ಉಣ್ಣಿಸದವನು ದೇವರ ಪೂಜೆಯನ್ನೆಷ್ಟು ಮಾಡಿದರೂ ವ್ಯರ್ಥ ಎಂಬ ಭಾವವಿದೆ. ಏಸುಕ್ರಿಸ್ತನು ಹೇಳುವ (ಮಾಥ್ಯು ೨೨:೩೮) "ದೇವರನ್ನು ಪ್ರೀತಿಸ ಬೇಕೆನ್ನುವವನು ನೆರೆಯವರನ್ನು ಪ್ರೀತಿಸಬೇಕು." ಎಂಬುದರ ಅಭಿಪ್ರಾಯ ಮೇಲಿನ ಮಾತಿನಲ್ಲಿ ವ್ಯಕ್ತವಾಗಿದೆ. ಉಂಬ ಜಂಗಮನನ್ನು ಆದರಿಸಲಾರದವನು ಲಿಂಗ ಒಲುಮೆಯನ್ನು ಪಡೆಯುವುದಿಲ್ಲ ; ಮಾತ್ರವಲ್ಲ " ಕಲ್ಲುತಾಗಿದ ಮಿಟ್ಟೆಯಂತೆ" ಪುಡಿಯಾಗುವನು.

ಆ) ಕಾಡುವ ಬೇಡುವ ಜಂಗಮಬಂದರೆ ನೀಡಲುಬಾರದು. ಬ.ಷ.ವ. ೧೯

ಇಲ್ಲಿ ಜಂಗಮವೆಂದರೆ ಮಹಾತ್ಮನೆಂದಾಗಲಿ, ವಿಶಿಷ್ಟ ಜಾತಿಯವನೆಂದಾಗಲಿ ಅರ್ಥವಾಗದು. ಯಾವನಾದರೊಬ್ಬ ಹಸಿದ ವ್ಯಕ್ತಿ ಬಂದು ಕಾಡಿದರೆ ಶಪಿಸುವವರೆ ಬಹಳ ಎಂಬ ಭಾವವಿದೆ.

ಆಧ್ಯಾತ್ಮಿಕ ದೃಷ್ಟಿಯಿಂದ ಕಾಡುವವನು ಜಂಗಮನೇ ಆಗಲಾರನು. ಪರಮಾ ತ್ಮನು ಭಕ್ತರ ಪರೀಕ್ಷೆಗಾಗಿ ಕಾಡುವವನಾಗಿ ಬೇಡುವವನಾಗಿ ಬರುವುದುಂಟು.

ಇ) ಕೂಡಲಸಂಗಮದೇವ ಜಂಗಮಮುಖ ಲಿಂಗವಾಗಿ
ಕಾಡಿನೋಡುವ, ಬೇಡಿನೋಡುವ. ಬ.ಷ.ವ. ೪೩

ಈ) ಒಡಲಿಲ್ಲದ ನಿರಾಳಕರ್ತೃ......ಕೂಡಲ ಸಂಗಮದೇವ
ಜಂಗಮಮುಖ ಲಿಂಗವಾದನಾಗಿ ಮತ್ತೊಂದನರಿಯೆನಯ್ಯ.
ಬ. ಷ. ವ. ೩೯

೯. ಈ ಎಲ್ಲ ಕಲ್ಪನೆಗಳಿಗಿಂತಲೂ ಅತಿಶ್ರೇಷ್ಠವಾದ ಅರ್ಥಗರ್ಭಿತವಾದ ಕಲ್ಪನೆಯೊಂದಿದೆ. ಅದೇಂದರೆ ಜಂಗಮ ಎಂಬ ಶಬ್ದವನ್ನು "ಸಮಾಜ" ಎಂಬರ್ಥದಲ್ಲಿ ಬಳಸುವುದು. ಸಮಾಜವೆಂದರೆ ಚೈತನ್ಯ ಪೂರ್ಣ ವ್ಯಕ್ತಿಗಳ ಸಮೂಹ. ಇಂತಹ ಸಮಾಜದ ಸೇವೆಯನ್ನು ಲಿಂಗಾಯತ ಪ್ರಕ್ರಿಯೆಯಲ್ಲಿ 'ಜಂಗಮ ದಾಸೋಹ' ಎಂಬುದಾಗಿ ಬಳಸಿರುವಂತೆ ಕಾಣುತ್ತದೆ.

ಆಧ್ಯಾತ್ಮ ಜೀವನವೆಂದರೆ ಸಮಾಜದಿಂದ ದೂರಹೋಗುವಿಕೆ, ಸಮಾಜ-ನಾಡಿನ ಸಮಸ್ಯೆಗಳಿಗೆ ಬೆನ್ನು ತೋರಿಸುವಿಕೆ ಎಂಬುದನ್ನು ಬಸವಣ್ಣನವರು ಒಪ್ಪರು. ಅವರ ಪ್ರಕಾರ, "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ".

ಈ ಮರ್ತ್ಯಲೋಕ-ಸಮಾಜಗಳೇ ನಮ್ಮನ್ನು ದೈವತ್ವಕ್ಕೆ ಅಣಿಗೊಳಿಸುವ ಕಾರ್ಯಾಗಾರಗಳು. ಇಲ್ಲಿಯೇ ಮನುಷ್ಯನು ಪರಿಪೂರ್ಣತ್ವವನ್ನು ಗಳಿಸಿಕೊಳ್ಳಬೇಕು. ಈ ಪರಿಪೂರ್ಣತ್ವದ ಸಿದ್ಧಿಗೆ ಎರಡು ಸಾಧನೆಗಳನ್ನು ಬಸವಣ್ಣನವರು ಹೇಳುತ್ತಾರೆ.

೧) ಲಿಂಗಪೂಜೆ ೨) ಜಂಗಮಸೇವೆ.

ಲಿಂಗಪೂಜೆಯಿಂದ ಆತ್ಮಸಂತೋಷ, ಅಂತರಂಗದ ಪರಿಪೂರ್ಣತ್ವಗಳು ಸಾಧಿಸಲ್ಪಟ್ಟರೆ, ಜಂಗಮ ಸೇವೆಯಿಂದ ಸಮಾಜಾಭಿವೃದ್ಧಿ, ಸಮಷ್ಟಿಯ ಸಂತೋಷಗಳು ಸಾಧಿಸಲ್ಪಡುವುವು. ಆಧ್ಯಾತ್ಮ ಜೀವಿಯು ವ್ಯಕ್ತಿಗತ ಶಾಂತಿಗೆ ಪ್ರಯತ್ನಿಸುವುದರ ಜೊತೆಗೆ ಸಮಷ್ಟಿಯ ಶಾಂತಿಗೂ ಪ್ರಯತ್ನಿಸಬೇಕು. ವ್ಯಕ್ತಿಯಿಲ್ಲದೆ ಸಮಾಜವಾಗದು. ಸಮಾಜವಿಲ್ಲದೆ ವ್ಯಕ್ತಿ ಬದುಕಲಾರ. ಅದಕ್ಕಾಗಿ ಶರಣನು ಎಡದ ಕೈಯಲ್ಲಿ ಲಿಂಗ ಪೂಜೆ, ಬಲದ ಕೈಯಲ್ಲಿ ಸಮಾಜಸೇವೆಗಳನ್ನು ಹಿಡಿಯಬೇಕು.

ಅ) ಲಿಂಗವ ಪೂಜಿಸುತ್ತಾ ಜಂಗಮದ ಮುಖವ ನೋಡುತ್ತಿಪ್ಪ
ಸುಖವ ಕೊಡು, ಕಂಡಾ, ಲಿಂಗವೇ, ಬ. ಷ .ವ ೩೭೨

ಇಷ್ಟೇ ಅಲ್ಲ, ಲಿಂಗನಿಷ್ಠೆ ಸಾಧಿಸಬೇಕೆನ್ನುವವನು ಜಂಗಮಸೇವೆ ಮಾಡಲೇ ಬೇಕು. ಕಲ್ಲನಾಗರಕ್ಕೆ ಹಾಲೆರೆದು ದಿಟದ ನಾಗರವನ್ನು ಕೊಲ್ಲುವವನು, ಜಗದ ಸೇವೆ ಮಾಡಲಿಚ್ಛಿಸದೆ ಕೇವಲ ದೇವರ ಪೂಜೆಯಲ್ಲೇ ಮೈಮರೆಯಬೇಕೆನ್ನುವವನು– ಇಬ್ಬರೂ ನಿಜವಾದ ಆಧ್ಯಾತ್ಮವನ್ನು ಅರಿಯದವರೇ ಸರಿ !

ಆ) ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕೆ ಅಂಜಲೇ ಬೇಕು.
ಬ. ಷ. ವ. ೧೮೯

ಇ) ಕನ್ನಡಿಯ (ಲಿಂಗವ) ನೋಡುವ ಅಣ್ಣಗಳಿರಾ
ಜಂಗಮವ (ಸಮಾಜವ) ನೋಡಿರೇ. ಬ. ಷ. ವ. ೧೮೭

ಲಿಂಗದ ಪೂಜೆ ಬಹು ಸುಲಭ, ಜಂಗಮಸೇವೆ ಬಹು ಕಠಿಣ. ದೇವನಿಗೆ ತುಸು ಕೊರತೆಯಾದರೂ ಕೊಟ್ಟಿದ್ದರಲ್ಲಿ ತೃಪ್ತಿಪಟ್ಟು, ಕೊಡದ್ದರಬಗ್ಗೆ ಚಿಂತಿಸನು. ಆದರೆ ಸಮಾಜಸೇವೆಯ ಪರಿ ಹಾಗಲ್ಲ. ತನ್ನ ತನು, ಮನ, ಧನ ಎಲ್ಲವನ್ನೂ ಅರ್ಪಿಸಿ ದುಡಿಯುವುದರ ಜೊತೆಗೆ ಮತ್ತೆ ಜನರಿಂದ ಅಪವಾದ ಹೊರಬೇಕು. ತಗ್ಗಿನಲ್ಲಿದ್ದ ಗಿಡಗಳು ಯಾರಕಣ್ಣಿಗೂ ಬೀಳವು ಮತ್ತು ಅವಕ್ಕೆ ಗಾಳಿಯ ಏಟು ಕಡಿಮೆ. ಗುಡ್ಡದ ಮೇಲಿನ ಗಿಡಗಳು ಎಲ್ಲರ ಕಣ್ಣಿಗೆ ಬೀಳುವುವಲ್ಲದೆ, ಗಾಳಿಯ ಹೊಡೆತವನ್ನು ಹೆಚ್ಚು ತಿನ್ನಬೇಕಾಗುವುದು. ಹಾಗೆ ಸಮಾಜಸೇವಕರು ನಿಷ್ಪೃಹ ಸೇವೆಯೊಡನೆ, ನಿಂದೆಗಳನ್ನೂ ಸ್ವೀಕರಿಸಲು ಸಿದ್ಧರಿರಬೇಕು.

ಅದಕ್ಕೆಂದೇ ಬಸವಣ್ಣನವರು ಹೇಳುತ್ತಾರೆ :

ಈ) ಉದಯದ ವಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು ;
ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕರಕಠಿಣವಾಯಿತ್ತು,
ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು :
ಕಡೆಯಲ್ಲಿ ಜಂಗಮಭಕ್ತಿ ಕಠಿಣವಾಯಿತ್ತು. ಬ.ಷ.ವ. ೨೧೯

ಚಳಿಗಾಲದಲ್ಲಿ ಬೆಳಗಿನ ಬಿಸಿಲು ಹಿತವೆನ್ನಿಸುತ್ತದೆ, ಆದರೆ ಮಧ್ಯಾಹ್ನವಾದಂತೆ ಬೆಳಗಿನ ಹಿತ ಕಡಿಮೆಯಾಗಿ ತೀಕ್ಷ್ಣತೆ ಬಹಳವಾಗುತ್ತದೆ. ಅದೇ ರೀತಿ ಲಿಂಗಪೂಜೆಯು ಬೆಳಗಿನ ಬಿಸಿಲಿನಂತೆ ಸುಲಭ, ಹಿತಕರ. ಸಮಾಜ ಸೇವೆ ಬಹಳ ಕಠಿಣ. ಅದು ಮಧ್ಯಾಹ್ನದ ಬಿಸಿಲಿನಂತೆ ತುಸು ಅಸಹನೀಯ.

ಸಮಾಜ ಸೇವೆ ಮಾಡಬೇಕೆನ್ನುವವನು ಅದಕ್ಕೆ ಬಹು ಕಿಂಕರನಾಗಿ ಇರಬೇಕಾಗುತ್ತದೆ. ವ್ಯಕ್ತಿಗಿಂತಲೂ ಸಮಾಜ ದೊಡ್ಡದು. "ಸಮಾಜಕ್ಕಿಂತ ನಾನು ದೊಡ್ಡವನು ; ನನ್ನ ಶ್ರೇಯಸ್ಸಿನಲ್ಲಿ ಸಮಾಜದ ಶ್ರೇಯಸ್ಸು ಅಡಗಿದೆ" ಎಂದು ತಿಳಿದರಂತೂ ಆಯಿತು ; ಈ ಹಮ್ಮಿನಿಂದ ಆಗುವ ಅನಾಹುತ ಅಷ್ಟಿಷ್ಟಲ್ಲ. "ಸಮಾಜಕ್ಕಿಂತಲೂ ನಾನು ಕಿರಿಯ. ಅದರ ಸೇವಕ ನಾನು" ಎಂಬ ಭೃತ್ಯಭಾವ ಅಳವಟ್ಟರೆ ಮಾತ್ರ ಅವನಿಂದ ಉನ್ನತಮಟ್ಟದ ಸೇವೆ ಸಲ್ಲುವುದು.

ಉ) ಸಿಂಹಕ್ಕೊಲಿದ ಮದಕರಿಯಂತೆ ಆನು ಜಂಗಮಕ್ಕೊಲಿದೆನಯ್ಯಾ
ಬ.ಷ.ವ. ೩೮೦

ಕಾಡಿನ ಪ್ರಾಣಿಗಳಲ್ಲಿ ಹೆಚ್ಚು ಬಲಯುತವಾದುದು ಆನೆ. ಆದರೇನು, ಅದು ಸಿಂಹದ ದಾಸ. ಹಾಗೆಯೇ ಸಮಾಜದಲ್ಲಿ ಎಂತಹ ಉನ್ನತ ಅಧಿಕಾರದಲ್ಲಿರಲಿ, ಹಣವಂತನಿರಲಿ, ಸಮಷ್ಟಿ ಚೇತನಕ್ಕೆ ಅವನು ದಾಸನಾಗಲೇಬೇಕು.

ಊ) ನಾನೊಬ್ಬನೇ ಭಕ್ತನು, ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ
ಜಂಗಮಲಿಂಗ ನೀನೇ ಅಯ್ಯಾ. ಬ.ಷ.ವ. ೮೯೩

ಸಮಾಜ ಸೇವೆ ಮಾಡುವಾಗ "ನಾನು ಕಿರಿಯ, ನನ್ನನ್ನು ಬಿಟ್ಟು ಉಳಿದುದೆಲ್ಲ ಪೂಜ್ಯ", ಎಂಬ ಭಾವವನ್ನು ಇರಿಸಿಕೊಂಡು. 'ಸೇವೆ ಮಾಡುವುದು ತನ್ನ ಆದ್ಯ ಕರ್ತವ್ಯ' ಎಂದರಿಯಬೇಕೇ ವಿನಃ ಉಳಿದವರು ತನ್ನ ಸೇವೆ ಮಾಡಬೇಕೆಂದು ಬಯಸಬಾರದು.

ಎ) ಎನಗಿಂತ (ವ್ಯಕ್ತಿಗಿಂತ) ಕಿರಿಯರಿಲ್ಲ, ಶಿವಭಕ್ತರಿಗಿಂತ (ಸಮಾಜ) ಹಿರಿಯರಿಲ್ಲ. 'ಶಿವಭಕ್ತರು' ಇದು ಸಮಾಜ ವಾಚಕ ಪದ. ವ್ಯಕ್ತಿಗಿಂತ ಸಮಾಜ ಹಿರಿದೆಂಬ ತತ್ತ್ವ ಇಲ್ಲಿ ಅಡಕವಾಗಿದೆ.

ಸಮಾಜ ಸೇವಕರು ಮತ್ತು ಜವಾಬ್ದಾರಿಯುತ ದೊಡ್ಡ ಅಧಿಕಾರಿಗಳು ಬಹಳ ವಿಶಾಲ ಸ್ವಭಾವದವರಿರಬೇಕಾಗುತ್ತದೆ. ಜಾತಿ, ಮತ, ಕುಲ ಭೇದವಿಲ್ಲದೆ ಮಾನವ

ಜನಾಂಗದ ಸೇವೆ ಮಾಡಬೇಕಾಗುತ್ತದೆ. ಅವರಿಗೆ ಸ್ವಧರ್ಮ-ಸ್ವಜಾತಿಯ ಅಭಿಮಾನಕ್ಕಿಂತಲೂ ಮನುಕುಲದ ಸೇವೆಯೇ ಮುಖ್ಯವಾದುದಷ್ಟೇ. ಆದಕ್ಕೆ ಅಣ್ಣನವರು ಹೇಳುತ್ತಾರೆ.

ಏ) ಶಿವಭಕ್ತರೇ ಅಧಿಕರು ನೋಡಾ,
ಇದಕ್ಕೆ ಅಧಿಕವಾಗಿ ಜಂಗಮವ ಕಂಡೆ. ಬ.ಷ.ವ. ೫೯೪

ಶಿವಭಕ್ತರು ಎಂದರೆ, ಶಿವದೀಕ್ಷೆ ಪಡೆದ ಸ್ವಧರ್ಮೀಯರು. ಜಂಗಮವೆಂದರೆ ಸಮಾಜ ಎಂದು ಅರ್ಥವಿಸಿದರೆ ಸ್ವಜನಾಂಗದ ಅಭಿವೃದ್ಧಿಗಿಂತಲೂ ಸಮಾಜಾಭಿವೃದ್ಧಿಯ ದೃಷ್ಟಿಕೋನ ಮುಖ್ಯವೆಂದು ಅರ್ಥವಾಗದೆ ಇರದು.

ದಾಸೋಹತತ್ತ್ವವು ಬಸವಣ್ಣನವರ ವಚನಗಳಲ್ಲಿ ಪ್ರಮುಖವಾಗಿ ಕಾಣಬರುತ್ತದೆ. ಭಕ್ತನಾದವನು ತನುವ ಕೊಟ್ಟು ಗುರುವನೊಲಿಸಬೇಕು, ಮನವ ಕೊಟ್ಟು ಲಿಂಗವನೊಲಿಸಬೇಕು, ಧನವ ಕೊಟ್ಟು ಜಂಗವನೊಲಿಸಬೇಕು. ಅರಿವನ್ನು, ಜ್ಞಾನವನ್ನು ಗಳಿಸಿಕೊಳ್ಳಲಿಕ್ಕಾಗಿ ತನುವು ಬಳಲಬೇಕಾಗುವದು. ತನು ಮುಟ್ಟಿ ಗುರುವಿನ ಸೇವೆ ಮಾಡದಿದ್ದರೆ, ಸದ್ಗುರುವಿನ ಅಂತಃಕರಣ ಅರಳದು. ತನ್ನ ಅನುಗ್ರಹವನ್ನವನು ನೀಡನು. ಮನಸ್ಸು ದೇವಾರ್ಪಿತವಾಗದಿದ್ದರೆ ಲಿಂಗ ದೇವನೊಲಿಮೆಯಾಗದು ; ಧನವು ಜಂಗಮಕ್ಕೆ ಮೀಸಲಾಗಬೇಕು. ಜಂಗಮನೆಂದರೆ ನಿರಾಭಾರಿ, ಸನ್ಯಾಸಿ ಎಂದಿಲ್ಲಿ ಅರ್ಥ ಮಾಡಬಾರದು. ಧನವ ಕೊಟ್ಟು ಜಂಗಮನೊಲಿಸಬೇಕು ಎಂದರೆ ಧನದಿಂದ ಒಲಿವವನು ಜಂಗಮನೇ ? ಎಂಬ ಸಂಶಯ ಬರದೆ ಇರದು. ಧನಾಪೇಕ್ಷೆ ಇಲ್ಲದವನನ್ನು ಧನವಿತ್ತು ಒಲಿಸು ಎಂದಂತಾಗುತ್ತದೆ. ಆದ್ದರಿಂದ ಜಂಗಮ ಎಂದರೆ ಸಮಾಜ ಎಂದು ಅರ್ಥವಿಸಿದರೆ ಹಣವು ಸಮಾಜಾವೃದ್ಧಿಗೆ ಅವಶ್ಯ ಬೇಕು ಎಂದು ಮನವರಿಕೆಯಾಗುತ್ತದೆ.

ತನಗೆ ಅವಶ್ಯವಾದಷ್ಟು ಹಣವನ್ನು ಮಾತ್ರ ಇರಿಸಿಕೊಂಡು ಉಳಿದುದನ್ನು ಸ್ವಯಂಪ್ರೇರಿತನಾಗಿ ಸಮಾಜಕ್ಕೆ ಧಾರೆ ಎರೆಯಬೇಕು. ಸಮಾಜದ ಅಭಿವೃದ್ಧಿ ಕಾರ್ಯಗಳಿಗೆ, ಅದನ್ನು ಮಾಡುತ್ತಲಿರುವ ನಿಸ್ವಾರ್ಥ ಸಮಾಜ ಸೇವಕರಿಗೆ, ತ್ಯಾಗಿಗಳಿಗೆ ಆ ಧನವನ್ನು ನೀಡಬೇಕು. ಆ ಸಮಾಜ ಸೇವಕರು ಗೃಹಸ್ಥರು, ಸನ್ಯಾಸಿಗಳು ಯಾರೇ ಇರಬಹುದು, ಯಾವ ಸನ್ಯಾಸಿ ಸ್ವಾರ್ಥದ ಸಂಕೋಲೆಯನ್ನು ತುಂಡರಿಸಿ ಹಗಲಿರುಳು ಸಮಾಜಕ್ಕಾಗಿ ದುಡಿಯುವನೋ, ಧರ್ಮ ಪ್ರಸಾರಕ್ಕಾಗಿ ಶ್ರಮಿಸುವನೋ, ಕೇವಲ ತನ್ನವರ ಪ್ರೀತಿಸುವುದನ್ನು ಬಿಟ್ಟು ಎಲ್ಲರನ್ನೂ ಆದರಿಸುವ ವಿಶ್ವಬಂಧುವಾಗಿರುವನೋ ಅವನು ಸಮಾಜದ ಪ್ರತಿನಿಧಿ: ಅವನಿಗೆ ಧನವಿತ್ತು ಸತ್ಕಾರ್ಯಕ್ಕೆ ಪ್ರೋತ್ಸಾಹಿಸಬೇಕು. ಆದರೆ ಅವನ ಜವಾಬ್ದಾರಿ ಗುರುತರವಾದುದು. ನೀರಿನ ಟ್ಯಾಂಕಿನ ಕೆಲಸ ಕೇವಲ ರಕ್ಷಣೆ; ಕೆರೆಯಿಂದ ನದಿಯಿಂದ ಸಂಗ್ರಹಿಸಿದ ನೀರನ್ನು ಎಲ್ಲರ ಮನೆಯ ನಲ್ಲಿಗಳಿಗೆ ಕಳಿಸುವುದು ಮಾತ್ರ ಜಲಾಶಯದ ಕೆಲಸ. ಹೆಚ್ಚಾಗಿ ಸಂಪತ್ತಿರುವವರಿಂದ

ಸಂಗ್ರಹಿಸಿ ಇಲ್ಲದೆಡೆಗೆ ಹಂಚುವುದೇ ತ್ಯಾಗಿಯ ಕೆಲಸ. ಇಂತಹವನು ಮಾತ್ರ ತ್ಯಾಗಿ, ಇವನೇ ಜಂಗಮ.

ಐ) ಆತ ಜಾಣನು ಜಂಗಮಕ್ಕೆ ಧನವ ಸವೆಸುವಾತ. ಬ. ಷ. ವ. ೧೫೩

ಒ) ಧನವ ಕೊಟ್ಟು ಜಂಗಮನೊಲಿಸಬೇಕು. ,, ೨೦೬

ಭಕ್ತನಾಗಬೇಕೆನ್ನುವವನು ಸಮಾಜ ಸೇವೆಯನ್ನು ತನುವಿನಿಂದಾಗಲೀ, ಮನದಿಂದಾಗಲೀ, ಧನದಿಂದಲಾಗಲೀ ಮಾಡಿಯೇ ತೀರಬೇಕು.

ಅಣ್ಣನವರ ಪ್ರಕಾರ, ಸಂಪತ್ತನ್ನು ಊರೊಳಗೆ ಒಯ್ಯಬೇಕೆನ್ನುವವನು ಸುಂಕವನ್ನು ಕೊಟ್ಟು ಹೋಗಬೇಕಾದಂತೆ, ಭಕ್ತಿಯೆಂಬ ಸಂಪತ್ತನ್ನು ಹೊತ್ತು ದೇವನಲ್ಲಿಗೆ ಪ್ರವೇಶ ಮಾಡಬೇಕೆಂಬುವವನು ಸಮಾಜಕ್ಕೆ ಸೇವೆಯ ಸುಂಕ ನೀಡಿಯೇ ಹೋಗಬೇಕು (ವ. ೧೯೮). ಇದನ್ನರಿತ ಅವರು ಕಾಶಿ, ಕೇದಾರ, ಶ್ರೀಶೈಲ, ಹಂಪೆಯಲ್ಲಿ ದೇವನ್ನರಸಹೋಗದೆ ಸಮಾಜ ಸೇವೆಯ ಮೂಲಕ ಅರಸಿದರು, ಸಾಕ್ಷಾತ್ಕರಿಸಿಕೊಂಡರು.

ಓ) ನಾನಾ ಸ್ಥಾನಂಗಳ ಮುಟ್ಟದೆ ಜಂಗಮವೆ ಲಿಂಗವೆಂದು ನಂಬಿದೆ.

ಬ. ಷ. ವ. ೩೯೪

ಬಸವಣ್ಣನವರು ಜಂಗಮ ಸೇವೆಗೆ ಇಷ್ಟೇಕೆ ಮಹತ್ವ ನೀಡಿದರು ? ಅವರ ಆಧ್ಯಾತ್ಮದ ಪ್ರಕಾರ ವ್ಯಷ್ಟಿ ಚೇತನ (ಆತ್ಮ)ವು ತೃಪ್ತವಾಗುವುದರೊಡನೆ ಸಮಷ್ಟಿ ಚೇತನವೂ ತೃಪ್ತವಾಗಬೇಕು. ಆರ್ಥಿಕ, ಧಾರ್ಮಿಕ, ಸಾಮಾಜಿಕ ಅಸಂತುಷ್ಟಿ, ಅಸಮತೆ ತುಂಬಿ ತುಳುಕುವಾಗ, ಕಂಡೂ ಕಣ್ಮುಚ್ಚಿ ಕುಳಿತರೆ ಆ ಧರ್ಮವಂತಿಕೆಗೆ ದೇವನು ಒಲಿಯುವನೇ ? ಆದ್ದರಿಂದ ಜಂಗಮದ ಮೂಲಕವೇ ಅದರ ಸೇವೆಯಲ್ಲಿ ತನ್ನನ್ನು ಸವೆಯಿಸಿಕೊಂಡೇ ಲಿಂಗದೇವನನ್ನು ಕಾಣಬೇಕು.

ಔ) ಲಿಂಗದಲ್ಲಿ ದಿಟಪನರಸುವೊಡೆ, ಜಂಗಮವ ನೆರೆನಂಬುವುದು...

ಉಂಬ ಉಡುವ ಕೂಡಲ ಸಂಗಮದೇವ ಜಂಗಮ ಮುಖದಲ್ಲಿ.

ಬ. ಷ. ವ. ೪೨೭

ಆಕಾಶದಲ್ಲಿ ಗಾಳಿಯ ಪಟ ತೇಲತೊಡಗಿದೆ, ಕಣ್ಣಿಗೆ ಕಾಣದಷ್ಟು ದೂರವಿದೆ. ಆದರೂ ಭಯವಿಲ್ಲ. ಏಕೆ ? ಅದರ ಸೂತ್ರ ಕೈಯಲ್ಲಿದೆ. ಸೂತ್ರವನ್ನು ಜಗ್ಗಿದರೆ ಎಲ್ಲಿ ಇದ್ದರೂ ಗಾಳಿಯ ಪಟ ತಾನಾಗಿಯೇ ಬರುವುದಷ್ಟೇ? ಹಾಗೆ ನಿರಾಕಾರ ದೇವನು ಇಂದ್ರಿಯಾತೀತನಾಗಿ ಇದ್ದಾನೆ. ಅವನ ಸೂತ್ರ ಈ ಸಮಾಜ. ನಿರಾಕಾರದೇವರ ವ್ಯಕ್ತ ಮುಖ ಸಮಾಜ. ಇದನ್ನು ಹಿಡಿದು ಸೇವೆ ಮಾಡಿದರೆ ಅವನೊಲಿಮೆ ಬಹು ಸುಲಭ.

ಗಿಡಕ್ಕೆ ಬಾಯಿಯೆಂದರೆ ಬೇರು. ಅದರ ಮೂಲಕವೇ ಗಿಡವು ಆಹಾರವನ್ನು ಸ್ವೀಕರಿಸುವಂತೆ, 'ಲಿಂಗದ ಮುಖ ಜಂಗಮ' ಅಂದರೆ ಸಮಾಜ. ಈ ಸಮಾಜದ

ಮೂಲಕ ಲಿಂಗದೇವನು ನೈವೇದ್ಯವನ್ನು, ಸೇವೆಯನ್ನು ಸ್ವೀಕರಿಸುವನು. ಬೇರಿಗೆ ನೀರೆರೆದರೆ ವೃಕ್ಷವು ತೃಪ್ತಿ ಪಡುವಂತೆ, ಸಮಾಜದ ನೊಂದಜೀವಿಗೆ ಸಾಂತ್ವನ ನೀಡಿದರೆ ದೇವನಿಗೆ ಆರೋಗಣೆ ಮಾಡಿಸಿದಂತೆ. ಪೂಜೆಯ ಕೋಣೆಯಲ್ಲಿ ಕುಳಿತು ಮಾಡುವ ಪೂಜೆಗಿಂತ ಈ ಬಗೆಯ ಪೂಜೆ ಬಹುಕಷ್ಟಕರ. ಜಂಗಮ ವಿಕಾರಿಗೆ ಧನವಿಕಾರ ಇರಲಾಗದು. ಅವನು ಬಹುದೊಡ್ಡ ತ್ಯಾಗ ಮಾಡಬೇಕಾಗುವುದು.

ಹೀಗೆ ಜಂಗಮ, ಜಂಗಮದಾಸೋಹ ಬಹು ಅರ್ಥವ್ಯಾಪ್ತಿಯುಳ್ಳ ತತ್ತ್ವಗಳು. ಆದರೆ ಕೆಲವರಿಗೆ ಸಂಶಯ ಬರಬಹುದು; "ಜಂಗಮನೆಂದರೆ ತ್ಯಾಗಿ, ಎಲ್ಲರೂ ದುಡಿದು ತಿನ್ನತಕ್ಕದ್ದು, ಕಾಯಕವಿಲ್ಲದೆ ಮುಕ್ತಿಯಿಲ್ಲ, ಎಂದೆಲ್ಲ ಘೋಷಿಸಿದ ಸಮಾಜ ಸುಧಾರಕ ಬಸವಣ್ಣನವರು ಲಾಂಛನಧಾರಿಗಳಾಗಿ ಬಂದವರನ್ನೆಲ್ಲಾ ಹಿಂದು ಮುಂದು ಆಲೋಚಿಸದೆ ಊಟಮಾಡಿಸುತ್ತಿದ್ದರು. ಇಂಥವರು ಒಂದು ಲಕ್ಷದ ತೊಂಭತ್ತು ಸಾವಿರವಿದ್ದರಂತೆ. ಇದು ಪರೋಪಜೀವನದ ಬಗೆಗೆ ಪ್ರೋತ್ಸಾಹಿಸದೆ?" ಎಂದು ಸ್ವತಂತ್ರ ವೃತ್ತಿ ಜೀವನದ ಬಗೆಗೆ ಒತ್ತಿ ಒತ್ತಿ ಹೇಳಿದ ಬಸವಣ್ಣನವರು ಹೀಗೆ ಪ್ರೋತ್ಸಾಹಿಸಿದ್ದರೆ ಅದು ಗುರುತರ ಅಪರಾಧವೇ ಆಗುವುದು.

ಹೀಗೆ ನಿರ್ಧರಿಸುವ ಮುನ್ನ ಈ ವಿವರಣೆಗಳ ಬಗ್ಗೆ ಆಲೋಚನೆ ಮಾಡಬೇಕಾದುದು ಅವಶ್ಯಕ. ಬಸವಣ್ಣನವರು ಜಾತ್ಯತೀತ ಸಮಾಜ ನಿರ್ಮಾಣಕ್ಕೆ ಕೈ ಹಾಕಿದ್ದರು. ಚತುರ್ವರ್ಣಗಳ ಕಟ್ಟನ್ನು, ಜಾತಿಗಳನ್ನು ಒಡೆದು ಸಂಕರಮಾಡಲಿಕ್ಕೆ ಕೇವಲ ಎರಡೇ ಸಾಧನಗಳು, ೧) ಅಂತರ್ಭೋಜನ ೨) ಅಂತರ್ಜಾತೀಯ ವಿವಾಹ.

೧) ವಿವಿಧ ಜಾತಿಯಿಂದ ಬಂದ ಜನರಲ್ಲಿ ಕೆಲವರಲ್ಲಿ ಮೇಲರಿಮೆ, ಕೀಳರಿಮೆ ಇರುವುದು ಸಹಜ. ಅವುಗಳು ಹೋಗಬೇಕಾದರೆ ಅವರೆಲ್ಲ ಸಮಾನವಾಗಿ ಕುಳಿತು ಉಣ್ಣಬೇಕು. ಆಗ ಮಾತ್ರ ಹಿಂದಿನ ಮೇಲಿನ, ಕೀಳಿನ ಭಾವ ಅಳಿಯುವುದು. ಅಂಗದ ಮೇಲೆ ಲಿಂಗಧರಿಸಿದವನು ಯಾರೇ ಇರಲಿ, ಅವನ ಕುಲಗೋತ್ರ ಕೇಳದೆ ಊಟ ನೀಡುತ್ತಿದ್ದರು. ಅಂಗದ ಮೇಲೆ ಲಿಂಗವಿದ್ದವರನ್ನೆಲ್ಲ ಗೌರವಿಸಲು ಕಲಿಸಬೇಕೆಂದು ಬಂದವರನ್ನೆಲ್ಲ ಕುಳ್ಳಿರಿಸಿ ಎಡೆ ಮಾಡುತ್ತಿದ್ದರು.

"ಆಪ್ಯಾಯನಕ್ಕೆ ನೀಡುವೆ, ಲಾಂಛನಕ್ಕೆ ಶರಣೆಂಬೆ". ಬ.ಷ.ವ. ೭೫೭

ಒಂದು ವೇಳೆ ಆ ಲಾಂಛನಧಾರಿ ಡಾಂಭಿಕನಿದ್ದು, ವೇಷಧಾರಿಯಿದ್ದರೆ ಅವನಿಗೆ ಛೀ ಎನ್ನಲು ಹಿಂಜರಿಯುತ್ತಿರಲಿಲ್ಲ. ಹೀಗೆ ನೂತನ ಸಮಾಜದಲ್ಲಿ ಬಾಂಧವ್ಯವನ್ನು ನಿರ್ಮಿಸಲು ಈ ಸಾಮೂಹಿಕ ಭೋಜನವನ್ನು ಬಳಕೆಯಲ್ಲಿ ತಂದಿರುವರು. (ಇದನ್ನು ಕ್ರಿಶ್ಚಿಯನ್ನರಲ್ಲಿ ನಡೆಯುವ *Community Dinner* ಕಾರ್ಯಕ್ರಮಕ್ಕೆ ಹೋಲಿಸಬಹುದು) ಕಲ್ಯಾಣ ಪಟ್ಟಣದಲ್ಲಿ ಲಿಂಗಾಯತ ಧರ್ಮಾನುಯಾಯಿಗಳು ಒಂದು ಲಕ್ಷ ತೊಂಬತ್ತುಸಾವಿರವಿದ್ದಿರಬೇಕು. ಅವರನ್ನು ಆಗಾಗ ಮಹಾಮನೆಯಲ್ಲಿ ಕೂಡಿಸಿ

ಬಸವಣ್ಣನವರು ದಾಸೋಹ ಮಾಡುತ್ತಿರಬೇಕು. ಜಾತಿಯ ಬೇಧವನ್ನು ತಡೆಯಲಿಕ್ಕೆಂದು ಉಳಿದ ಶರಣರು ಕೂಡ ತಮ್ಮ ತಮ್ಮ ಮನೆಗಳಿಗೆ ಜಂಗಮರನ್ನು (*New converts*) ಕರೆದೊಯ್ದು ದಾಸೋಹ ಮಾಡುವುದನ್ನು ಆಯ್ದಕ್ಕಿ ಮಾರಯ್ಯ, ಮೋಳಿಗೆ ಮಾರಯ್ಯನವರ ಪ್ರಸಂಗಗಳಲ್ಲಿ ಕಾಣುತ್ತೇವೆ.

೨) ದಿನನಿತ್ಯ ಸಹಸ್ರಾರು ಜನರಿಗೆ ಊಟ ಮಾಡಿಸುವ ಬಸವಣ್ಣನವರು ರಾಜ್ಯ ಭಂಡಾರದ ದುರುಪಯೋಗ ಮಾಡಿಕೊಂಡಿರಬೇಕು ಎಂದು ಚಾಡಿಕೋರರು ಬೊಬ್ಬೆ ಹಾಕಿದಾಗ ಬಸವಣ್ಣನವರು, "ಸೂರ್ಯನಿಗೆ ಕನ್ನಡಿಯ ಬೆಳಕು ಬೇಕೇ? ತಮ್ಮೊಡವೆಯ ತಾವು ಕೊಂಡರು" ಎಂದು ಬಿಜ್ಜಳನಿಗೆ ಉತ್ತರಿಸುವರು. ಬೈಬಲಿನಲ್ಲಿ ಅಪೋಸ್ತಲರ ಕೃತಿಗಳು ಎಂಬ ಅಧ್ಯಾಯದಲ್ಲಿ ೫:೩೨ನೆಯ ಶ್ಲೋಕದಿಂದ ೩೫ರ ತನಕ ಒಂದು ವಿಷಯ ತಿಳಿಸಲ್ಪಟ್ಟಿದೆ. "ಕ್ರಿಸ್ತನನ್ನು ನಂಬಿದವರ ಹೃದಯ, ಪ್ರಾಣ ಒಂದೇ ಇತ್ತು. ಅವರಾರೂ ತಮ್ಮ ಆಸ್ತಿಗಳನ್ನು ಸ್ವಂತವೆಂದು ತಿಳಿಯುತ್ತಿರಲಿಲ್ಲ. ತಮ್ಮ ಹೊಲಮನೆಗಳನ್ನು ಮಾರಿ ಆ ಹಣವನ್ನು ಅಪೋಸ್ತಲರಿಗೆ ಕೊಟ್ಟು ಬೇಕಾದಾಗ ಅವಶ್ಯಕತೆಯಂತೆ ಪಡೆಯುತ್ತಿದ್ದರು." ಇದು ಸಾಮೂಹಿಕ ಬದುಕಿನ ಒಂದು ಬಗೆ.

ಹಾಗೆಯೇ ಬಸವಣ್ಣನವರ ಅನುಯಾಯಿಗಳು ಎಲ್ಲರೂ ಸತ್ಯಶುದ್ಧ ಕಾಯಕದಿಂದ ದುಡಿದು ತಮ್ಮ ದುಡಿಮೆಯನ್ನೆಲ್ಲ ತಂದು ಅನುಭವ ಮಂಟಪದಲ್ಲಿ ಹಾಕಿ, ತಮ್ಮ ಜೀವನಾವಶ್ಯಕತೆಗಳನ್ನು ಅಲ್ಲಿಂದ ಪಡೆಯುತ್ತಿದ್ದರು ಎನ್ನಬಹುದು. ಹೀಗೆ ವಿವಿಧ ಕಾಯಕ ಮಾಡಿ ತಮ್ಮ ಗಳಿಕೆಯನ್ನು ತಂದು ಶೇಖರಿಸಿ ಅಲ್ಲಿ ಊಟ ಮಾಡುತ್ತಿದ್ದ ಲಿಂಗವಂತರು ಒಂದು ಲಕ್ಷ ತೊಂಬತ್ತಾರು ಸಾವಿರ ಇದ್ದಿರಬಹುದು. ಹೆಚ್ಚಾಗಿ ಉಳಿದುದನ್ನು ಮತ್ತೆ ಧರ್ಮ ಪ್ರಸಾರಕ್ಕೆ ಶರಣರು ಬಳಸುತ್ತಿರಬೇಕು.

೩) ಪ್ರತಿಯೊಬ್ಬ ಶರಣನೂ ದಿನನಿತ್ಯ ಜಂಗಮ ದಾಸೋಹ ಮಾಡುವ ಪರಿಪಾಠವಿರಿಸಿಕೊಂಡಿದ್ದ. ಇದನ್ನು ಪುರಾಣಗಳಲ್ಲಿ ಓದಿದಾಗ ಮನೆಗೆ ಬಂದ ಈ "ಜಂಗಮ"ರಿಗೆ ಊಟ ಮಾಡುವುದು ಬಿಟ್ಟು ಬೇರೆ ಉದ್ಯೋಗವೇ ಇರಲಿಲ್ಲವೇನೋ ಎನ್ನಿಸುತ್ತದೆ. ಇಂತಹ ಪರೋಪಜೀವನದ ತತ್ತ್ವವನ್ನು ಬಸವಣ್ಣನವರು ಬೋಧಿಸಲಾರರು. ಅದರ ಸತ್ಯಾರ್ಥ ಹೀಗಿರಬಹುದು. ಮನುಷ್ಯನ ಉದ್ವೇಗಕ್ಕೆ ಮೂಲ ಕಾರಣಗಳೆಂದರೆ ಹೊಟ್ಟೆ–ಬಟ್ಟೆಯ ಚಿಂತೆ, ನಾಳಿಗೇನು, ನಾಡಿದ್ದಿಗೇನು ಎಂಬುದೇ ಎಲ್ಲ ವೈಪರೀತ್ಯಗಳಿಗೆ ಕಾರಣ. ಈ ಉದ್ವೇಗ ಅಳಿದು ದುಡಿಯಲಿಕ್ಕೆ ಕೆಲಸ. ದುಡಿದುದಕ್ಕೆ ಪ್ರತಿಫಲ ಸಿಕ್ಕರೆ ಚಿಂತೆ ಏನಿದ್ದೀತು ! ಈ ತತ್ತ್ವವನ್ನು ಅನುಷ್ಠಾನಿಸಲಿಕ್ಕೆ ಜಂಗಮ ದಾಸೋಹದ ಪದ್ಧತಿಯನ್ನು ಬಸವಣ್ಣನವರು ಬಳಕೆಗೆ ತಂದಿರಬಹುದು. ಬಹುರೂಪಿ ಚೌಡಯ್ಯನೋ, ನಗೆಯ ಮಾರಿ ತಂದೆಯೋ, ಕಿನ್ನರಿಯ ಬ್ರಹ್ಮಯ್ಯನೋ ತಮ್ಮ ಕಾಯಕ ಮಾಡುತ್ತಾ ಊರಿನಲ್ಲಿ ತಿರುಗಾಡುವಾಗ ಪ್ರಸಾದದ ವೇಳೆ

ಬಂದಾಗ ಯಾರಾದರೂ ಲಿಂಗಾಯತ ಅನುಯಾಯಿ ಕರೆದು ಉಣ್ಣಿಸುತ್ತಿದ್ದ. ಆ ಹೊತ್ತಿನ ಚಿಂತೆ ಮುಗಿದ ತಕ್ಷಣ ಮತ್ತೆ ನಿಶ್ಚಿಂತರಾಗಿ ಅವರು ಕಾಯಕಕ್ಕೆ ಸಾಗುತ್ತಿದ್ದರು. ಈ ರೀತಿ ವಿವಿಧ ಕಾಯಕಗಳನ್ನು ಮಾಡುತ್ತ ಧರ್ಮಬೋಧೆಯನ್ನು ನೈತಿಕ ಶಿಕ್ಷಣವನ್ನು ಕೊಡುತ್ತಾ ಸಂಚರಿಸುವ ಕಾಯಕ ಜೀವಿಗಳು ಒಂದು ಲಕ್ಷ ತೊಂಬತ್ತಾರು ಸಾವಿರ ಇರಬೇಕು.

ಹೀಗೆ ಯಾವುದೋ ಒಂದು ಘನ ಅರ್ಥಶಾಸ್ತ್ರದ ಪ್ರಯೋಗವೇ ಅಲ್ಲಿ ನಡೆಯುತ್ತಿರಬೇಕೆನ್ನಿಸುತ್ತದೆ. ಖಚಿತವಾಗಿ ಹೇಳಲು ಇನ್ನೂ ಹೆಚ್ಚಿನ ಅಧ್ಯಯನ ಆಧಾರ ಒದಗಬೇಕಾಗಿದೆ. ಇಂದಿನ ಸಂಶೋಧಕರು, "ಎಂಟುನೂರ ವರುಷಗಳ ಹಿಂದೆ ನಮ್ಮ ಇಂದಿನ ಸಮಾಜದ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲ ಕ್ರಾಂತಿಯೊಂದು ನಡೆಯಿತು" ಎಂದು ಮನದಲ್ಲಿ ಇರಿಸಿಕೊಂಡು ವೀರಶೈವ ಪುರಾಣ, ಕಾವ್ಯಗಳನ್ನೋದಿದರೆ ಹೊಸ ಸಿದ್ಧಾಂತದ ಸುಳಿವು ಸಿಕ್ಕೀತು.

ಇಂದಿನ ಅರ್ಥ ಶಾಸ್ತ್ರದ ತತ್ವ ಸರಣಿಯನ್ನು ಅಳವಡಿಸಿ ನೋಡಿದರೆ ಬಸವಣ್ಣನವರು ಕೊಟ್ಟ 'ಕಾಯಕ', 'ದಾಸೋಹ', 'ಜಂಗಮ', 'ಜಂಗಮ ಸೇವೆ' ಇವುಗಳು ಹೊಸ ತತ್ತ್ವಗಳಾಗುವುದರಲ್ಲಿ ಸಂಶಯವಿಲ್ಲ.

ಬಸವಣ್ಣನವರ ವಚನಗಳ ಅಭ್ಯಾಸ ಎರಡು ದೃಷ್ಟಿಯಿಂದ ಮಹತ್ವ ಪೂರ್ಣವಿದೆ. ಉಪಮೆಗಳ ಸೌಂದರ್ಯ, ಕಲ್ಪನೆಯ ಸಂಪತ್ತು, ಬಾಳಿನ ನಗ್ನ ಸತ್ಯ. ಆದರ್ಶ ಮಾನವನ ರೂಪು ರೇಷೆಗಳು ಸಿಗುವ ಕಾರಣ ಸಾಹಿತ್ಯಿಕ ದೃಷ್ಟಿಯಿಂದ ಮಹತ್ವ ಪೂರ್ಣ ಎನಿಸಿದರೆ; ಒಂದು ಹೊಸ ಧರ್ಮವನ್ನು ಜಗಕ್ಕೆ ಕೊಟ್ಟ ಅವರ ವಚನಗಳು ಅವರು ಕೊಟ್ಟ ಲಿಂಗಾಯತ ಧರ್ಮದ ಸೈದ್ಧಾಂತಿಕ ಸೂತ್ರಗಳಾಗಿ ಪರಿಣಮಿಸುತ್ತವೆ. ಅವರ ವಚನಗಳು ಬಹಳ ಸರಳ. ಅರ್ಥಗರ್ಭಿತ. ಸಮಾಜ ಪರಿಸ್ಥಿತಿಯ ಬಗ್ಗೆ ವ್ಯಂಗ್ಯವಾದ ವಿಡಂಬನೆ ಅಲ್ಲಿ ತುಂಬಿದ್ದರೂ, ಅವು ಕೇವಲ ಮನನೋಯಿಸುವ ಕಟುತ್ವವನ್ನು ಹೊಂದಿಲ್ಲ. ಉದ್ದೀಪನೆಯ ಸತ್ವದಿಂದ ಕೂಡಿವೆ. ಸಕ್ಕರೆಯ ಆವರಣವನ್ನು ಹೊದ್ದ ಕಹಿಗುಳಿಗೆ ನಾಲಿಗೆಯನ್ನು ಸ್ಪರ್ಶಿಸಿದಾಗ ಸಿಹಿತನದ ಮಾಧುರ್ಯ ನೀಡಿದರೂ ಒಳಗಿಳಿದಾಗ ರೋಗನಿರ್ಮೂಲನೆಗೆ ಬೇಕಾದ ಕಹಿ ಔಷದಿಯನ್ನು ಕೊಡುವಂತೆ, ಬಸವಣ್ಣನವರ ಮೃದು ಭಾಷೆಯ ಮಾತುಗಳನ್ನು ಓದಿ ಮೆಲುಕು ಹಾಕಿ ನಗುತ್ತಲಿರುವಾಗಲೇ ಅದರೊಳಗಣ ಕಟು ಸತ್ಯ ಮನವನ್ನು ಮುಟ್ಟಿ, ಅಂತಪ್ರ್ರಜ್ಞೆಯನ್ನು ಉದ್ದೀಪಿಸಿ ನಮ್ಮನ್ನು ನಾವೇ ಎದೆ ಮುಟ್ಟಿ ನೋಡಿಕೊಳ್ಳುವಂತಹ ಸ್ಥಿತಿಯನ್ನು ತಂದೀಯುತ್ತದೆ. ಬಸವಣ್ಣನವರ ವಚನಗಳು ಸಮಾಜದ ನಗ್ನಭೀಕರ ಸ್ವರೂಪದ ದರ್ಶನ ಮಾಡಿಸುವುದು ಮಾತ್ರವಲ್ಲ, ಆದರ್ಶ ಸಮಾಜದ ರೂಪುರೇಷೆಯನ್ನು ಮನದಲ್ಲಿ ಮೂಡಿಸುವುವು. ●

॥ಓಂ ಶ್ರೀ ಗುರುಬಸವಲಿಂಗಾಯ ನಮಃ॥

ಬಸವ ಧರ್ಮ ಪೀಠ

ಅದರ ಕಾರ್ಯ ವಿಸ್ತಾರ

ಕೂಡಲ ಸಂಗಮವು ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ. ಇಲ್ಲಿ ಭೌತಿಕ ಜಲವನ್ನು ಹೊತ್ತು ಹರಿಯುವ ಎರಡು ನದಿಗಳಾದ ಕೃಷ್ಣೆ-ಮಲಪ್ರಭೆಯರು ಸಂಗಮವಾಗುತ್ತಿದ್ದರೆ, ಭಾಕ್ತಿಕ ಮತ್ತು ಸಾಂಸ್ಕೃತಿಕವಾಗಿ ಮೂರು ನದಿಗಳ ಸಂಗಮವಾಗುತ್ತಿವೆ. ಶ್ರೀ ಸಂಗಮೇಶ್ವರ ದೇವಾಲಯ ಪುರಾತನ ಶಿವದೇವಾಲಯವಾಗಿ ನಾಡಿನಾದ್ಯಂತದಿಂದ ಅಸಂಖ್ಯಾತ ಭಕ್ತವೃಂದವನ್ನು ಆಕರ್ಷಿಸುತ್ತಿದೆ. ವಿಶ್ವಗುರು ಬಸವಣ್ಣನವರ ಸಾಕ್ಷಾತ್ಕಾರದ ತಾಣವಾಗಿ, ಮತ್ತು ಐಕ್ಯಸ್ಥಾನವಾಗಿ ಬಸವ ಭಕ್ತರ ಪವಿತ್ರ ಕ್ಷೇತ್ರವಾಗಿದೆ. ಕೂಡಲ ಸಂಗಮದ ಐತಿಹಾಸಿಕ ಮಹತಿಯನ್ನರಿತು ಕೆಲವರು, ಸುಂದರ ಸಂಗಮದ ಪ್ರಾಕೃತಿಕ ಸೊಬಗನ್ನು ಸವಿಯಲು ಕವಿಹೃದಯದೊಡನೆ ಸಂದರ್ಶಕರಾಗಿ ಬರುವರು. ಇಷ್ಟೆಲ್ಲ ಮಹತ್ವದ ಸ್ಥಾನವಾಗಿದ್ದೂ, ಅದು ಅತ್ಯಂತ ನಿರ್ಲಕ್ಷಿತ ಕ್ಷೇತ್ರವಾಗಿ ಅಭಿವೃದ್ಧಿಯನ್ನೇ ಕಾಣದಾಗಿತ್ತು. 'ಕೂಡಲ ಸಂಗಮದೇವಾ' ಎಂಬ ವಚನ ಮುದ್ರಿಕೆಯನ್ನು ಹೃನ್ಮನ ಭಾವಗಳಲ್ಲಿ ತುಂಬಿಕೊಂಡು, ಕಥೆ-ಕಾದಂಬರಿಗಳಲ್ಲಿ ಓದುವ ಪ್ರಾಕೃತಿಕ ಸೊಬಗಿನ ಜೀವಂತಿಕೆ ಬಗ್ಗೆ ಕನಸನ್ನು ಹೊತ್ತು ಬಂದ ಅನೇಕರಿಗೆ ವಾಸ್ತವ್ಯ ಮಾಡಲು ಸೂಕ್ತ ಜಾಗವಿಲ್ಲದೆ, ಇನ್ನಾವ ಸೌಲಭ್ಯಗಳೂ ಇಲ್ಲದೆ, ಬೇಸಿಗೆಯಲ್ಲಿ ಕುಡಿಯುವ ನೀರೂ ಸಿಗದೆ ಇರುವ ಅನುಭವ ಎದುರಾದಾಗ ಅವರ ಕನಸು ನಿರಸನವಾಗುತ್ತಿತ್ತು. ಅತ್ಯಂತ ಸುಂದರವಾದ, ಕನ್ಯಾಕುಮಾರಿಯ ಸೂರ್ಯೋದಯವನ್ನು ನೆನಪಿಗೆ ತರುವ ಸೂರ್ಯೋದಯ ನೋಡಲು ವಾಸ್ತವ್ಯಮಾಡಲು ಅನುಕೂಲವಿರಲಿಲ್ಲ. ಇನ್ನು ಬಸ್ಸುಗಳಲ್ಲಿ ಪ್ರವಾಸಿಕರು ಬಂದರಂತೂ ಅವರಿಗೆ ಏಕೈಕ ಆಶ್ರಯ ನದಿಯ ದಂಡೆಯ ಒಂದು ಬಯಲ ಮಂಟಪ. ಮಳೆಗಾಲ, ಛಳಿಗಾಲಗಳಲ್ಲಿ ಸಂದರ್ಶಕರ ಕಷ್ಟ ಹೇಳತೀರದ್ದು.

ಇದನ್ನೆಲ್ಲ ಗಮನಿಸಿ, ಬಸವ ಧರ್ಮ ಪೀಠ ಟ್ರಸ್ಟ್ ಪ್ರಾರಂಭವಾಯಿತು. ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳನ್ನು ಗೌರವಾಧ್ಯಕ್ಷರನ್ನಾಗಿಯೂ, ಪೂಜ್ಯ ಶ್ರೀ ಜಗದ್ಗುರು ಮಾತೆಮಹಾದೇವಿಯವರನ್ನು ಕಾರ್ಯಾಧ್ಯಕ್ಷೆಯನ್ನಾಗಿಯೂ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನು ಕೋಶಾಧ್ಯಕ್ಷೆಯನ್ನಾಗಿಯೂ

ಹೊಂದಿರುವ ಬಸವ ಧರ್ಮ ಪೀಠ ಟ್ರಸ್ಟ್, ಮುಂಬಯಿಯ ಸಾರ್ವಜನಿಕ ಟ್ರಸ್ಟ್ ಆಕ್ಟ್‌ಪ್ರಕಾರ ನೋಂದಾಯಿಸಲ್ಪಟ್ಟು 1987 ರಲ್ಲಿ ಕಾರ್ಯಾರಂಭ ಮಾಡಿತು. ಸುಮಾರು ಒಂಭತ್ತೂವರೆ ಎಕರೆ ಜಮೀನನ್ನು ಹೊಂದಿ, ಮೂರು ವರ್ಷಗಳ ಅವಧಿಯಲ್ಲಿ ಸಾಕಷ್ಟು ಕಾರ್ಯಮಾಡಿದೆ. ಮಹಾಮನೆ ಮಹಾಮಠ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಈ ಧರ್ಮಸಂಸ್ಥೆಯ ಕಾರ್ಯಾಲಯ, ಶ್ರೀ ಬಸವ ಧ್ಯಾನಮಂಟಪ ಶರಣ ಮಂಟಪಗಳನ್ನು ಹೊಂದಿದೆಯಲ್ಲದೆ, ಅಕ್ಕ ನಾಗಲಾಂಬಿಕಾ ಅತಿಥಿ ಗೃಹವನ್ನು ನಿರ್ಮಾಣ ಮಾಡುತ್ತಿದೆ. ಈಗಾಗಲೇ ನೆಲ ಅಂತಸ್ತು ಪೂರ್ಣಗೊಂಡಿದ್ದು ಬಂದ ಪ್ರವಾಸಿಕರಿಗೆ ಸೂಕ್ತವಾದ ತಂಗುದಾಣವನ್ನು ಒದಗಿಸುತ್ತಿದೆ. ಪ್ರವಾಸಿಕರು, ಸದ್ಭಕ್ತರು ಈ ವಸತಿ ಗೃಹದ ಸೌಲಭ್ಯವನ್ನು ಪಡೆಯಬಹುದು. ಅತ್ಯಂತ ಯೋಗ್ಯ ದರದಲ್ಲಿ ವಸತಿ ಸೌಲಭ್ಯವು ದೊರೆಯುತ್ತದೆ.

ನಿತ್ಯ ದಾಸೋಹ ಯೋಜನೆ : ಭಕ್ತರಾಗಿ ಬರುವ ಯಾತ್ರಾರ್ಥಿಗಳಿಗೆ ಉಚಿತ ದಾಸೋಹವಿರುತ್ತದೆ. ಅವರು ತಮಗೆ ತೋಚಿದಷ್ಟು ಕಾಣಿಕೆಯನ್ನು ಸಮರ್ಪಿಸಬಹುದು. ಈ ದಾಸೋಹಕ್ಕೆ ನಿಧಿಯೊಂದನ್ನು ರಚಿಸಲಾಗಿದ್ದು, 1111.00 (ಒಂದು ಸಾವಿರದ ನೂರಾ ಹನ್ನೊಂದು) ರೂಗಳನ್ನು ಒಬ್ಬರಿಂದ ತೆಗೆದುಕೊಂಡು, ಅವರ ಹೆಸರಿನಲ್ಲಿ ಒಂದು ದಿನದ ದಾಸೋಹವನ್ನು ಮಾಡಲಾಗುವುದು.

ಪ್ರವಾಸಿಕರು, ಸಂದರ್ಶಕರು ನಿಗದಿ ಪಡಿಸಿದ ಶುಲ್ಕವನ್ನು ಮೊದಲೇ ಕಟ್ಟಿ ತಮ್ಮ ಜನರಿಗೆ ಪ್ರಸಾದ ವ್ಯವಸ್ಥೆಯ ಅನುಕೂಲತೆಯನ್ನು ಒದಗಿಸಿಕೊಳ್ಳಬಹುದು. ದಿ. 18-1-1991 ರಿಂದ ಈ ಯೋಜನೆ, ಶಾಲೆ-ಕಾಲೇಜುಗಳ ವಿದ್ಯಾರ್ಥಿ-ಶಿಕ್ಷಕರ ಬೇಡಿಕೆಯಂತೆ ಜಾರಿಗೆ ಬಂದಿದೆ. ತಂಡಗಳಲ್ಲಿ ಬರುವ ಇಂತಹವರಿಗೆ ಊಟ-ತಿಂಡಿಗಳನ್ನು ಸಿದ್ಧಪಡಿಸಿಕೊಳ್ಳಲು ಅನಾನುಕೂಲವಾಗುವುದರಿಂದ, ಈ ಸೌಲಭ್ಯ ಒದಗಿಸಲಾಗಿದೆ. ಅಡಿಗೆ ಮನೆ, ಊಟದ ಕೋಣೆ(ದಾಸೋಹ ಶಾಲೆ)ಗಳು ನಿರ್ಮಾಣವಾಗುತ್ತಲೇ ಈ ಸೌಲಭ್ಯವನ್ನು ಇನ್ನಷ್ಟು ವಿಸ್ತರಿಸಿ, ಕ್ಷೇತ್ರದಲ್ಲಿ ವಿವಾಹ, ನಾಮಕರಣ, ಮುಂತಾದ ಧಾರ್ಮಿಕ ಕಾರ್ಯಗಳನ್ನು ಪೂರೈಸಲು ಬಂದವರಿಗೂ ಒದಗಿಸಿಕೊಡುವ ಆಲೋಚನೆ ಇದೆ.

ನಿತ್ಯ ಪೂಜೆಯ ಯೋಜನೆ : ಶ್ರೀ ಬಸವ ಧ್ಯಾನಮಂಟಪದಲ್ಲಿ ನಿತ್ಯ ಪೂಜೆ ನಡೆಯುತ್ತಿದ್ದು ಎಲ್ಲರಿಗೂ ಪ್ರವೇಶಾವಕಾಶವಿದೆ. ದರ್ಶನ ಪಡೆದು, ತೀರ್ಥ-ಪ್ರಸಾದಗಳನ್ನು ಪಡೆಯಬಹುದು. ನಿತ್ಯ ಪೂಜೆಯ ಯೋಜನೆಗೆ 501 ರೂಗಳನ್ನು ನಿಗದಿಪಡಿಸಿದ್ದು, ಯಾರು ಹಣವನ್ನು ನಿಧಿಯನ್ನಾಗಿ ಇಡುವರೋ ಅವರ ಹೆಸರಿನಲ್ಲಿ ಪೂಜೆ ಇಡಲಾಗುವುದು.

ದಾಸೋಹ-ಪೂಜೆಗಳು ಇರುವ ದಿನಾಂಕವನ್ನು ಮೊದಲೇ ದಾನಿಗಳಿಗೆ ತಿಳಿಸಿರಲಾಗುವುದು. ಅವರಿಗೆ ಬರಲು ಆಗದೇ ಇದ್ದರೆ ಅಂಚೆಯಲ್ಲಿ ಪ್ರಸಾದವನ್ನು ಕಳಿಸಲಾಗುವುದು.

ಕಟ್ಟಡ ನಿಧಿಗೆ ನೆರವು

ಬಸವ ಧರ್ಮ ಪೀಠ ಟ್ರಸ್ಟ್ ಬಸವ ಮಂಟಪ, ಅತಿಥಿ ಗೃಹ, ವಚನ ಮಂಟಪ, ಸುಜ್ಞಾನ ಮಂಟಪ ಮುಂತಾದ ಹಲವಾರು ಕಟ್ಟಡಗಳನ್ನು ಕಟ್ಟಿಸುತ್ತಿದೆಯಲ್ಲದೆ, ಸರ್ವಜ್ಞ ಅನಾಥಾಲಯ ತೆರೆದು ಅನೇಕ ಅನಾಥ ಮಕ್ಕಳಿಗೆ ಆಶ್ರಯ ನೀಡಿದೆ. ಸಾಧಕರಿಗೆ ಆಶ್ರಯನೀಡಿ ಧಾರ್ಮಿಕ ತರಬೇತಿ ನೀಡುತ್ತಿದೆ. ಇನ್ನೂ ವಿಶಾಲವಾದ ಪಾಕಗೃಹ, ದಾಸೋಹ ಶಾಲೆ ನಿರ್ಮಿಸಬೇಕಾಗಿದೆ. ಇದಕ್ಕೆಲ್ಲ ಸಾರ್ವಜನಿಕರ ನೆರವು ಅತ್ಯಗತ್ಯವೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ. ದೊಡ್ಡ ಪ್ರಮಾಣದಲ್ಲಿ ಕಟ್ಟಡ ಕಟ್ಟಿಸುವವರಿಗೆ ಅವಕಾಶವಿದೆಯಲ್ಲದೆ 5000 ರೂ. ಅದಕ್ಕಿಂತಲೂ ಹೆಚ್ಚಿನ ಮೊತ್ತದ ದೇಣಿಗೆ ಕೊಡುವವರ ಹೆಸರನ್ನು ಕಲ್ಲಿನಲ್ಲಿ ಕೆತ್ತಿಸಿ ಹಾಕಲಾಗುವುದು. ಆದ್ದರಿಂದ ಶರಣ ಬಂಧುಗಳು ಉದಾರವಾಗಿ ದೇಣಿಗೆ ನೀಡಬೇಕೆಂದು ನಮ್ಮ ಹೃತ್ಪೂರ್ವಕ ಕೋರಿಕೆ. ಸ್ಥಳದಲ್ಲಿಯೇ ದೇಣಿಗೆ ನೀಡಿ ರಸೀತಿ ಪಡೆಯಬಹುದು. ಅಥವಾ ಅಲ್ಲಲ್ಲೇ ಇಟ್ಟ ಹುಂಡಿಪೆಟ್ಟಿಗೆಯಲ್ಲಿ ಹಾಕಬಹುದು. ತಂತಮ್ಮ ಊರುಗಳಿಂದಲೂ ಬ್ಯಾಂಕ್ ಡ್ರಾಫ್ಟ್, ಎಂ. ಓ./ಎಂ. ಟಿ. ಮೂಲಕ ಕಳಿಸಬಹುದು. ಖಾತೆ ನಂ.3/500, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲ ಸಂಗಮ ಇಲ್ಲಿಗೆ ಎಂ.ಟಿ. ಮಾಡಬಹುದು.

—**ಸೋದರಿ ಜಯಮ್ಮ**, ಮ್ಯಾನೇಜರ್.

ಬಸವ ಧರ್ಮ ಪೀಠ, ಮಹಾಮನೆ ಮಹಾಮಠ
ಕೂಡಲ ಸಂಗಮ-587115, ತಾ॥ ಹುನಗುಂದ, ಜಿ॥ ಬಿಜಾಪುರ

ಆಯಿತ್ತು ಬಸವಾ ನಿನ್ನಿಂದ ಗುರುಸ್ವಾಯತವೆನಗೆ
ಆಯಿತ್ತು ಬಸವಾ ನಿನ್ನಿಂದ ಲಿಂಗಸ್ವಾಯತವೆನಗೆ
ಆಯಿತ್ತು ಬಸವಾ ನಿನ್ನಿಂದ ಜಂಗಮ ಸ್ವಾಯತವೆನಗೆ
ಆಯಿತ್ತು ಬಸವಾ ನಿನ್ನಿಂದ ಪ್ರಸಾದ ಸ್ವಾಯತವೆನಗೆ
ಇಂತೀ ಚತುರ್ವಿಧ ಸ್ವಾಯತವ ನೀನೇ
ಮಾಡಿದೆಯಾಗಿ ಗುಹೇಶ್ವರ ಲಿಂಗಕ್ಕೆ
ವಿಳಾಸವಾದೆಯಲ್ಲೇ ಸಂಗನ ಬಸವಣ್ಣ.

ಆಮಂತ್ರಣ ಪತ್ರಿಕೆಗಳಲ್ಲಿ ವಚನೋಕ್ತಿ

ಶರಣ ಬಂಧುಗಳೇ,

ಇತ್ತೀಚೆಗೆ ತಾವು ಬಹಳ ಜನರು ಶರಣ ಸಂಸ್ಕೃತಿಗನುಸಾರವಾಗಿ ವಿವಾಹ, ಲಿಂಗೈಕ್ಯ ಸಂಸ್ಮರಣೆ, ಗೃಹಪ್ರವೇಶಗಳ ಆಮಂತ್ರಣ ಪತ್ರಿಕೆ ಮುದ್ರಿಸುತ್ತಿದ್ದೀರಿ, ಸಂತೋಷ. ಇದರಲ್ಲಿ ಇನ್ನೊಂದೆರಡು ಅಂಶಗಳನ್ನೂ ಗಮನಿಸಿರಿ.

1. ಇಂದು ಕಾಗದದ ಬೆಲೆ ವಿಪರೀತ ಏರಿದೆ. ಅದನ್ನು ಸದುಪಯೋಗ ಮಾಡಿಕೊಳ್ಳಬೇಕು. ಬರೀ ಕಾಗದವನ್ನಷ್ಟೇ ಅಲ್ಲ, ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು. ಆಹ್ವಾನ ಪತ್ರಿಕೆಯ ಹಿಂಬದಿಯನ್ನು ಖಾಲಿ ಬಿಡದೆ ಅಲ್ಲಿ ಷಟ್ ಸೂತ್ರಗಳನ್ನು ಮುದ್ರಿಸಿರಿ. ಅಥವಾ ವಚನೋಕ್ತಿಗಳನ್ನು ಮುದ್ರಿಸಿರಿ. ಪತ್ರಿಕೆಯನ್ನು ಕೊಂಡಾಗಿರುತ್ತದೆ ; ಕೇವಲ ಮುದ್ರಣ ವೆಚ್ಚ ಮಾತ್ರ ಅಧಿಕವಾಗುತ್ತದೆ. ಅಷ್ಟು ಹಣದಲ್ಲಿ ನೀವು ನಿಮ್ಮ ಬಂಧು-ಮಿತ್ರರಿಗೆ ಒಂದು ಸಂದೇಶವನ್ನು ಕೊಟ್ಟಂತಾಗುತ್ತದೆ.

2. ನೀವು ಸಿದ್ಧವಾದ ಪತ್ರಿಕೆ ತಂದು, ನಿಮಗೆ ಸಂಬಂಧಿಸಿದ ವಿಷಯ ಮುದ್ರಿಸಿಕೊಳ್ಳುತ್ತೀರಿ. ಹಾಗೆ ಸಿದ್ಧವಾದ ಪತ್ರಿಕೆ ಕೊಳ್ಳುವಾಗ ಶರಣ ಸಂಸ್ಕೃತಿಗೆ ಹೊರತಾದ ಚಿತ್ರಗಳಿರುವುದನ್ನು ಆಯ್ಕೆ ಮಾಡಬೇಡಿ. ನಿಮಗೆ ಸೂಕ್ತ ಧಾರ್ಮಿಕ ಲಾಂಛನ ಸಿಗದಿದ್ದರೆ ಆಗ ಕೇವಲ ಸುಂದರ, ಕಲಾತ್ಮಕ ಚಿತ್ರಗಳಿರುವುದನ್ನು ಆಯ್ಕೆ ಮಾಡಿಕೊಳ್ಳಿರಿ.

—ಪೂಜ್ಯ ಶ್ರೀ **ಜಗದ್ಗುರು ಮಾತೆ ಮಹಾದೇವಿ**
ಬಸವ ಧರ್ಮ ಪೀಠ, ಕೂಡಲ ಸಂಗಮ.

ಓಂ ಶ್ರೀ ಗುರುಬಸವಲಿಂಗಾಯ ನಮಃ

ಬಸವ ತತ್ತ್ವ ಪರೀಕ್ಷೆಗಳು

ಬಸವ ತತ್ತ್ವ ಪರಿಷತ್ ಆಶ್ರಯದಲ್ಲಿ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಅವರ ನಿರ್ದೇಶನದಲ್ಲಿ ಬೆಂಗಳೂರಿನ ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯದ ಬಸವ ತತ್ತ್ವ ಪ್ರವೇಶ, ಬಸವ ತತ್ತ್ವ ಪರಿಚಯ, ಬಸವ ತತ್ತ್ವ ಪ್ರವೀಣ ಪರೀಕ್ಷೆಗಳು, 1991 ನೇ ಇಸ್ವಿ ಆಗಸ್ಟ್ ತಿಂಗಳಲ್ಲಿ ನಡೆಯಲಿದ್ದು ಪರೀಕ್ಷೆಗೆ ಕಟ್ಟಬಯಸುವವರು ಹಾಗೂ ತಮ್ಮ ಊರುಗಳಲ್ಲಿ ಪರೀಕ್ಷಾ ಕೇಂದ್ರಗಳನ್ನು ತೆರೆಯ ಬಯಸುವವರು ಒಂದು ರೂಪಾಯಿ ಅಂಚೆ ಚೀಟಿಯಿಟ್ಟು ಕೂಡಲೇ ವ್ಯವಹರಿಸಿರಿ.

ಶ್ರೀ ಬಸವ ಭಾರತಿ ದಿವ್ಯಜ್ಞಾನ ವಿದ್ಯಾಲಯ
ಹುಬ್ಬಳ್ಳಿ

'ಬಸವ ಚೈತನ್ಯ', ನಂ. 16, ಶ್ರೀ ಬಸವನಗರ.
ಮುರ್ಡೇಶ್ವರ ಸಿರಾಮಿಕ್ಸ್ ಹಿಂಭಾಗ,
ಹೆಗ್ಗೇರಿ ಹತ್ತಿರ, ಹುಬ್ಬಳ್ಳಿ–580024.

—ಶರಣೆ ಶೋಭಾದೇವಿ ಪರವಾದಿ
ನಿರ್ದೇಶಕರು

ಅಪ್ಪುವನಪ್ಪಿದ ವಾರಿಕಲ್ಲಿನಂತೆ, ವಾಯುವನಪ್ಪಿದ ಪರಿಮಳದಂತೆ
ಲಿಂಗವನಪ್ಪಿದ ಶರಣನ ದೇಹಿ ಎನ್ನಬಹುದೆ?
ಅನಲವನಪ್ಪಿದ ಕರ್ಪುರದಂತೆ ಕೂಡಲ ಚನ್ನಸಂಗಯ್ಯ
ನಿಮ್ಮ ಶರಣ ಬಸವಣ್ಣನ ನಿಲುವು

—ಚನ್ನ ಬಸವಣ್ಣ

ಓಂ ಶ್ರೀ ಗುರು ಬಸವಲಿಂಗಾಯ ನಮಃ

ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ

- ★ ಶರಣ ಪದ್ಧತಿಗನುಸಾರವಾಗಿ ವಿವಾಹ ನೆರವೇರಿಸಲು.
- ★ ಗೃಹ ಪ್ರವೇಶ, ಅಂಗಡಿಗಳ ವಾರ್ಷಿಕೋತ್ಸವ ಮುಂತಾದವುಗಳಂದು ಶ್ರೀ ಬಸವೇಶ್ವರ ಪೂಜಾವ್ರತ ಮಾಡಲು.
- ★ ಲಿಂಗಧಾರಣೆ, ಲಿಂಗದೀಕ್ಷೆ, ಮಂತ್ರದೀಕ್ಷೆ ಪಡೆದುಕೊಳ್ಳಲು.
- ★ ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಇಷ್ಟಲಿಂಗ ಪೂಜೆ ಮಾಡಲು.
- ★ ವಿಶ್ವಕಲ್ಯಾಣ ಮಿಷನ್‌ದವರ ಧಾರ್ಮಿಕ ಪುಸ್ತಕ, ಕೆಸೆಟ್ಟು, ವಿಭೂತಿ– ಮುಂತಾಗಿ ಕೊಳ್ಳಲು ನಾವು ನಿಮಗೆ ಸೂಕ್ತ ವ್ಯವಸ್ಥೆ ಮಾಡುತ್ತೇವೆ.

ಸಂಪರ್ಕಿಸಿರಿ : **ಶರಣ ಕಲ್ಯಾಣಪ್ಪ ಪರವಾದಿ, ಕಾರ್ಯಾಧ್ಯಕ್ಷ**
ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ ಘಟಕ

ವಿಳಾಸ : 'ಬಸವ ಚೈತನ್ಯ' ನಂ. 16, ಶ್ರೀ ಬಸವನಗರ,
ಮುರ್ಡೇಶ್ವರ ಸಿರಾಮಿಕ್ಸ್ ಹಿಂಭಾಗ, ಹೆಗ್ಗೇರಿ ಹತ್ತಿರ,
ಹುಬ್ಬಳ್ಳಿ–580024

ಮಾಡುವಂತಿರಬೇಕು ಮಾಡದಂತಿರಬೇಕು
ಮಾಡುವ ಮಾಟದೊಳಗೆ ತಾನಿಲ್ಲದಿರಬೇಕು ;
ನೋಡುವಂತಿರಬೇಕು ನೋಡದಂತಿರಬೇಕು
ನೋಡುವ ನೋಟದೊಳಗೆ ತಾನಿಲ್ಲದಂತಿರಬೇಕು !
ನಮ್ಮ ಕೂಡಲ ಸಂಗಮ ದೇವರ
ನೆನೆವುತ್ತ ನೆನೆವುತ್ತ ನೆನೆಯದಂತಿರಬೇಕು

ಕರ್ನಾಟಕದ ಸಮುಗ್ರ ಕ್ರಾಂತಿ ಪುರುಷ ಶ್ರೀ ಬಸವೇಶ್ವರ

—ಮ. ಜಯದೇವ, ವಿಜಯಪುರ

ಕರ್ತನೆಂಬ ಕಲಾವಿದ ಮನುಕುಲ ಇತಿಹಾಸವೆಂಬ ಭಿತ್ತಿಯ ಮೇಲೆ ತನ್ನ ಕಾರುಣ್ಯ ಕುಂಚದಿಂದ ಬಿಡಿಸಿದ ಅಪ್ರತಿಮ ಪರಿಪೂರ್ಣ ಚಿತ್ರ ವಿಶ್ವಗುರು ಬಸವಣ್ಣನವರು.

ಪರಮಾತ್ಮನೆಂಬ ಮಹಾಶಿಲ್ಪಿಯು ಜಗತ್ತಿನ ಮೇಲೆ ಅಪಾರ ದಯೆ ಇರಿಸಿ ತನ್ನ ಮಂಗಲ ಗುಣ ಸಂಚಯವೆಂಬ ಮೂಲ ಶಿಲೆಯನ್ನು ಆರಿಸಿಕೊಂಡು ಅಪ್ರತಿಮ ಚಾತುರ್ಯವನ್ನು ಬಳಸಿ ಲೋಕೋದ್ಧಾರವನ್ನು ಗೈಯಲೆಂದು ಕಟೆದ ದಿವ್ಯಮೂರ್ತಿ ವಿಶ್ವ ವಿಭೂತಿ ಬಸವಣ್ಣ.

ವಿಶ್ವವಿಭೂತಿ, ಮಹಾಮಾನವತಾವಾದಿ, ದಾರ್ಶನಿಕ, ಮನುಕುಲೋದ್ಧಾರಿ, ದಲಿತ ಬಂಧು, ನವಧರ್ಮದ್ರಷ್ಟಾರ, ಕನ್ನಡದಲ್ಲಿ ಮೊದಲಿಗೆ ಧರ್ಮ ಮತ್ತು ಧಾರ್ಮಿಕ ಸಾಹಿತ್ಯವನ್ನು ನೀಡಿದ ಧೀಮಂತ ನೇತಾರರಾದ ಗುರುಬಸವೇಶ್ವರರನ್ನು ನಾಡಿನ ಶರಣರು, ಸಂತರು, ವಿದ್ವಾಂಸರು, ಲೇಖಕರು, ಜನಸಾಮಾನ್ಯರು ಹಲವು ಬಗೆಗಳಿಂದ ಕಂಡು ಹಾಡಿ ಹೊಗಳಿದ್ದಾರೆ.

ಅರಮನೆಯ ಪಂಡಿತರ ಪಾಂಡಿತ್ಯದಲ್ಲಿ ದಾಸ್ಯಪಡೆದಿದ್ದ, ಗುರುಮನೆಗಳಲ್ಲಿ ಸಂಸ್ಕೃತ ಭೂಯಿಷ್ಠವಾಗಿ ಬಂಧಿತವಾಗಿ ಮಲೆತು ನಿಂತು ಹೊಲಸುಗೆಟ್ಟು ನಾರುತ್ತಿದ್ದ ಧರ್ಮ ಭಾಗೀರಥಿಯನ್ನು ಆಧುನಿಕ ಭಗೀರಥನಂತೆ ಶ್ರೀ ಬಸವೇಶ್ವರರು ಕನ್ನಡದ ವಚನ ಸಾಹಿತ್ಯದ ಮುಖಾಂತರ ಧರ್ಮ ತತ್ತ್ವಗಳನ್ನು ಶ್ರೀ ಸಾಮಾನ್ಯನ ಮಡಿಲಿಗೆ ಕೊಟ್ಟದ್ದನ್ನು ನಾವು ಕಾಣಬಹುದಾಗಿದೆ. ಕನ್ನಡ ಭಾಷೆಯನ್ನು ದೇವ ಭಾಷೆಯನ್ನಾಗಿಸಿದ ಮಹಾನ್ ಕೀರ್ತಿ ಮುಮ್ಮೊದಲಿಗೆ ಶ್ರೀ ಬಸವಣ್ಣನವರಿಗೆ ಹಾಗೂ ಶಿವಶರಣರಿಗೆ ಸಲ್ಲಬೇಕು.

ಶ್ರೀ ಬಸವೇಶ್ವರರು ಕನ್ನಡದಲ್ಲಿ ವಚನಗಳ ಮುಖಾಂತರ ವೈಚಾರಿಕ, ಸಾಹಿತ್ಯಿಕ, ಜಾಗತಿಕ ಹಾಗೂ ಧಾರ್ಮಿಕ ಕ್ರಾಂತಿಯನ್ನು ಗೈದು ಅಜ್ಞಾನಾಂಧಕಾರದಲ್ಲಿದ್ದ ಪಾಮರ ಜನತೆಗೆ "ವಚನ ಜ್ಯೋತಿ" ಎಂಬ ದೀವಿಗೆಯನ್ನು ನೀಡಿ ದಾರಿ ದೀಪವಾಗಿ ಮಾಡಿದ್ದಾರೆ, ಬಾಳ ಬಟ್ಟೆಯನ್ನು ನೀಡಿದ್ದಾರೆ.

ಸಮಾಜದ ಒಂದಂಗವಾದ ಜನಸಾಮಾನ್ಯರಿಗೆ, ಅಸ್ಪೃಶ್ಯರಿಗೆ, ಸ್ತ್ರೀಯರಿಗೆ ದೇವಾಲಯಗಳ ಪ್ರವೇಶ ನೀಡದೆ, ದೇವರಪೂಜೆ ಅವರಿಗಿಲ್ಲದೆ ಬಹಿಷ್ಕರಿಸಿದ್ದ ಕಾಲದಲ್ಲಿ "ಪ್ರಗತಿ ಪರ ಧರ್ಮ"ವೊಂದನ್ನು ಬಸವೇಶ್ವರರು ನೀಡಿ ಉದ್ಧರಿಸಿರುವುದನ್ನು ನಾವು ಕಾಣಬಹುದು.

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡಲಿ ಬಡವನಯ್ಯಾ ।
ಎನ್ನ ಕಾಲೇ ಕಂಭ, ದೇಹವೆ ದೇಗುಲ
ಶಿರ ಹೊನ್ನ ಕಳಸವಯ್ಯಾ । ಕೂಡಲ ಸಂಗಮದೇವಾ ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ ॥

ದೇವಾಲಯಗಳಿಂದ ಧರ್ಮ ಬಹಿಷ್ಕೃತಗೊಂಡಿದ್ದ ಸಮಾಜಕ್ಕೆ ನವ ಸಂದೇಶವನ್ನು ನೀಡಿ ದೇಹವನ್ನೇ ದೇವಾಲಯವನ್ನಾಗಿ ಮಾಡಿಕೊಂಡು ಆತ್ಮಸ್ಥೈರ್ಯದಿಂದ ನಿಲ್ಲುವ ಚೇತನವನ್ನು ಆತ್ಮೋನ್ನತಿಯನ್ನು ಸಾಧಿಸುವ ಮಾರ್ಗವನ್ನು ತಿಳಿಸಿಕೊಟ್ಟಿದ್ದಾರೆ.

ಬಸವಣ್ಣನವರ ಧರ್ಮವು ದಯೆಯ ಬುನಾದಿಯ ಮೇಲೆ ನಿಂತಿದೆ.

ದಯವಿಲ್ಲದ ಧರ್ಮವದೇವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ
ಕೂಡಲ ಸಂಗಮದೇವ ನಂತೊಲ್ಲದೊಲ್ಲನಯ್ಯಾ ॥

ಎಂದು ಧರ್ಮದ ಜೀವಾಳವೇ ದಯೆ ಎಂದು ತಿಳಿಸಿ ಸಕಲ ಜೀವಾವಳಿಗೆ ದಯಾ ಗುಣವನ್ನು ಬೋಧಿಸಿ, ದಯೆ-ಮಾನವೀಯತೆಗಳಿಲ್ಲದ ಧರ್ಮವು ಯಾವುದೂ ಜಗತ್ತಿನಲ್ಲಿ ಧರ್ಮವೆನಿಸುವುದಿಲ್ಲಾ ಎಂದು ಸಾರಿದ್ದಾರೆ.

ನಾವಾಡುವ ಮಾತು ಸುಸಂಬದ್ಧವಾಗಿ, ಸುಸಂಸ್ಕೃತವಾಗಿ ಮುತ್ತು ಪೋಣಿಸಿದಂತೆ ಇರಬೇಕು. ಆ ಮಾತಿನಲ್ಲಿ ಅಜ್ಞಾನದ ಕೊಳೆಯನ್ನು ಕಳೆಯುವ ಜ್ಞಾನದ ಕಿರಣವಿರಬೇಕು. ಆ ಮಾತು ಅಂತರಂಗ–ಬಹಿರಂಗಗಳೆರಡನ್ನು ಶುದ್ಧ ಗೈಯುವಂತಿರಬೇಕು. ಸರ್ವರ ಲೇಸನ್ನು ಕೋರುವ ಮಾತಿಗೆ ಪರಮಾತ್ಮನೇ ತಲೆದೂಗಬೇಕು.

ನುಡಿದರೆ ಮುತ್ತಿನ ಹಾರದಂತಿರಬೇಕು ।
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು ।
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು ।
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು ।
ನುಡಿಯೊಳಗಾಗಿ ನಡೆಯದಿದ್ದರೆ ಕೂಡಲ ಸಂಗಮದೇವನೆಂತೊಲಿವನಯ್ಯಾ ॥

ಎಂದು ನಾವಾಡುವ ನುಡಿಯೊಳಗೆ ನಡೆಯೂ ಸಮ್ಮಿಳಿತವಾಗಿ ಲೋಕ ಕಲ್ಯಾಣಕಾರಕವಾಗಿರಬೇಕೆಂದು ತಿಳಿಸಿದ್ದಾರೆ.

ಮೃದು ವಚನವೆ ಸಕಲ ಜಪಂಗಳಯ್ಯಾ
ಮೃದು ವಚನವೆ ಸಕಲ ತಪಂಗಳಯ್ಯಾ
ಸದುವಿನಯವೇ ಸದಾಶಿವನ ಒಲುಮೆಯಯ್ಯಾ
ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು
ಇಲ್ಲಿ ಸಲ್ಲದವರು ಎಲ್ಲಿಯೂ ಸಲ್ಲರು

ಇವೇ ಮುಂತಾದ ವಚನಗಳ ಮುಖಾಂತರ ನಮ್ಮ ನಡೆ ನುಡಿಗಳ ಆಚರಣೆ ಹೇಗಿರ ಬೇಕು ಎಂಬುದನ್ನು ತಿಳಿಸಿದ್ದಾರೆ.

ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು
ದಿಟದ ನಾಗರ ಕಂಡರೆ ಕೊಲ್ಲುಕೊಲ್ಲೆಂಬರಯ್ಯಾ
ಉಂಬ ಜಂಗಮ ಬಂದರೆ ನಡೆ ನಡೆ ಎಂಬರು
ಉಣ್ಣದ ಲಿಂಗಕ್ಕೆ ಬೋನವ ನೀಡೆಂಬ

ಅಜ್ಞಾನವನ್ನು ಖಂಡಿಸಿ ಹಸಿದ ಚೇತನಕ್ಕೆ ಮೊದಲು ಆಪ್ಯಾಯನ ಪ್ರಸಾದವನ್ನು ನೀಡಬೇಕೆಂದು ಕಲಿಸಿ, ಕಲ್ಲದೇವರಿಗೆ ಎಡೆ ನೀಡುವುದನ್ನು ವಿಡಂಬಿಸಿದ್ದಾರೆ.

ನೀರನು ಕಂಡಲ್ಲಿ ಮುಳುಗುವರಯ್ಯಾ
ಮರವನು ಕಂಡಲ್ಲಿ ಸುತ್ತುವರಯ್ಯಾ
ಬತ್ತುವ ಜಲವ ಒಣಗುವ ಮರವ
ನೆಚ್ಚಿದವರು ನಿಮ್ಮನೆತ್ತ ಬಲ್ಲರಯ್ಯಾ ಕೂಡಲ ಸಂಗಮದೇವಾ ॥

ಎಂಬ ಈ ವಚನದಲ್ಲಿ ನಮ್ಮ ಭಾರತೀಯರ ಮೂಢಾಚರಣೆಗಳಾದ ಜಲವೇ ದೇವರು, ಮರ ದೇವರು ಎಂದು ಪೂಜಿಸುವುದನ್ನು ವಿಡಂಬಿಸಿ ದೇವನು ಅವ್ಯಯನೆಂಬುದನ್ನು ಸಾರಿ ಬತ್ತುವ ನೀರು, ಒಣಗುವ ಮರ ಎಂತು ದೇವರೆಂದು ಪ್ರಶ್ನಿಸಿ ಆ ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ದೇವನನ್ನು ಸದಾಚಾರ ಸದ್ಭಕ್ತಿಯಿಂದ ಮಾತ್ರ ಒಲಿಸಲು ಸಾಧ್ಯ ಎಂದು ಭಕ್ತಿ ಮಾರ್ಗವನ್ನು ತಿಳಿಸಿದ್ದಾರೆ.

ನೆಚ್ಚಿದೆನೆಂದರೆ ಮೆಚ್ಚಿದೆನೆಂದರೆ ಸಲೆಮಾರುವೋದೆನೆಂದರೆ
ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ ನೋಡುವೆ ನೀನು
ಧನವನಲ್ಲಾಡಿಸಿ ನೋಡುವೆ ನೀನು, ಇಂತಿವೆಲ್ಲಕ್ಕಂಜದಿದ್ದೊಡೆ
ಭಕ್ತಿ ಕಂಪಿತ ನಮ್ಮ ಕೂಡಲ ಸಂಗಮ ದೇವಾ ॥

ಪರಮಾತ್ಮ ಸುಲಭ ಸಾಧ್ಯನಲ್ಲ. ತನು, ಮನ, ಹಾಗೂ ಧನವನ್ನಲ್ಲಾಡಿಸಿ ಪರೀಕ್ಷಿಸುವನು. ಆಗಲೂ ಭಕ್ತನು ವಿಚಂಚನೆಗೊಳಗಾಗದೆ ಪರಮಾತ್ಮನನ್ನೇ ನೆರೆ

ನಂಬಿದ್ದನಾದೊಡೆ ಆ ದೇವನು "ಭಕ್ತಿ ಕಂಪಿತ"ನಾಗಿ ಭಕ್ತನಿಗೆ ಒಲಿವನು. "ನಂಬಿ ಕರೆದಡೆ ಓ ಎನ್ನನೆ ಶಿವನು" ಎಂದು ಒಂದೇ ಪರವಸ್ತುವನ್ನು ಒಮ್ಮನದಿಂದ ನಂಬಿದಾಗ ಪರಮಾತ್ಮನ ಒಲುಮೆ ಸಾಧ್ಯವೆಂದು ಸುಲಭ ಸಾಧ್ಯವಾದ ಭಕ್ತಿ ಮಾರ್ಗವನ್ನು ಅರುಹಿದ್ದಾರೆ.

ಆಪ್ಯಾಯನ ಪ್ರಸಾದವನ್ನು ಕಲ್ಲ ದೇವರಿಗೆ ಎಡೆ ಮಾಡಿ ಧನ್ಯರಾದೆವೆಂಬ ಮೂಢ ಭಕ್ತರಿಗೆ ಧರ್ಮ ಸೂಕ್ಷ್ಮವನ್ನು ತಿಳಿಸಿಕೊಟ್ಟಿದ್ದಾರೆ.

ಮರದ ಬಾಯಿ ಬೇರೆಂದು ಬುಡಕ್ಕೆ ನೀರೆರೆದರೆ
ಮೇಲೆ ಪಲ್ಲವಿಸಿತ್ತು ನೋಡಾ ।
ಲಿಂಗದ ಬಾಯಿ ಜಂಗಮವೆಂದರಿದು ಪಡಿಪದಾರ್ಥವ
ನೀಡಿದರೆ ಲಿಂಗ ದೇವನಿಗೆ ತೃಪ್ತಿಯಾಯಿತ್ತು

ಎಂದು ದೇವನ ಬಾಯಿ ದೇವನ ಮಕ್ಕಳಾದ ದೀನದಲಿತರು ಎಂದು ಸಾರಿ ಅವರ ಹೊಟ್ಟೆಗೆ ಏನಾದರೂ ಕೊಟ್ಟು ಅವರು ತೃಪ್ತರಾದರೆ ನಿರವಯವನಾದ ದೇವನಿಗೆ ತೃಪ್ತಿಯಾಯಿತೆಂಬ ಧರ್ಮದಲ್ಲಿಯ ಮಾನವೀಯತೆಯ ನಿಜದರಿವು ಮಾಡಿ ಕೊಟ್ಟಿದ್ದಾರೆ.

ಮಾನವ ಮಾನವರಲ್ಲಿರುವ ಜಾತಿ ಭೇಧಗಳನ್ನು ಖಂಡಿಸಿ ಜಾತಿಯಿಂದ ಗುರ್ತಿಸ ಬೇಡಿ ಅವರ ನಡವಳಿಕೆಯಿಂದ ಗುರ್ತಿಸಿರಿ ಎಂದು

ಕೊಲ್ಲುವವನೆ ಮಾದಿಗ ; ಹೊಲಸು ತಿಂಬುವವನೆ ಹೊಲೆಯ
ಕುಲವೇನೋ ಆವಂದಿರ ಕುಲವೇನೋ
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲ ಸಂಗನ ಶರಣರೆ ಕುಲಜರು ॥

ಎಂದು ಗುಣಗ್ರಾಹಿಗಳಾಗಿ ಕುಲವನ್ನು ತೋರಿಸಿ ಕೊಟ್ಟಿದ್ದಾರೆ. ಜಾತಿಯಿಂದ ಹೊಲೆ-ಮಾದಿಗನಾದರೂ ಉತ್ತಮ ನಡೆ ಸದ್ಭಕ್ತಿ ಉಳ್ಳವರಾದರೆ ಅವರೇ ಉತ್ತಮ ಕುಲಸ್ಥರು, ಉತ್ತಮರಲ್ಲಿ ಹುಟ್ಟಿ ಕೀಳು ಗುಣವಿದ್ದರೆ ಅವರೆ ಹೊಲೆ ಮಾದಿಗರೆಂದು "ಕುಲ ತಿಲಕ ನಮ್ಮ ಮಾದಾರ ಚನ್ನಯ್ಯ ಕೂಡಲ ಸಂಗಮ ದೇವಾ ನಿಮ್ಮಿಂದಧಿಕ" ಎಂದು ಮಹಾಭಕ್ತನಾದ ಮಾದಿಗರ ಚನ್ನಯ್ಯರನ್ನು ಪರಮಾತ್ಮನಿಗೂ ಹೆಚ್ಚು ಎಂದು ಗೌರವಿಸಿ "ಕುಲತಿಲಕ" ನೆಂದು ಕೊಂಡಾಡಿದ್ದಾರೆ.

ದುರಾಚಾರ, ದುರ್ಗುಣಗಳಿಂದೊಡಗೂಡಿ ಎಷ್ಟು ದಿನ ಬದುಕಿದರೂ ಅದು ನಿರರ್ಥಕ ಬಾಳುವೆ, ಸದಾಚಾರ ಸುಗುಣಗಳಿಂದ ಕೂಡಿ ನಿರವಯವ ಪರಮಾತ್ಮನ ಸಾಕಾರವಾದ ಈ ಲೋಕ ಸೇವೆ ; ದೀನ ದಲಿತರ ಸೇವೆ ಮಾಡಿ ಒಂದೇ ಒಂದು ದಿನ

ಬದುಕಿದರೂ ಅದು ಸಾರ್ಥಕ ಬದುಕೇದರು. ಇಡೀ ಮನುಕುಲವನ್ನೇ ತಮ್ಮ ತೆಕ್ಕೆಯಲ್ಲಿ ಆಲಂಗಿಸಿಕೊಳ್ಳುವ ಈ ವಚನ ನೋಡಿ.

ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ ।
ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ ।
ಕೂಡಲ ಸಂಗಮ ದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ ॥

ಸರ್ವರೂ ಬಸವಣ್ಣನವರನ್ನು ತಮ್ಮವರು ಎಂದು ಹೇಳಿಕೊಳ್ಳಬಹುದಾದ ಬಾಳುವೆ ಅವರದು. ಅವರ ವ್ಯಕ್ತಿತ್ವ ಪರುಷ ಚುಂಬಕ ವಿದ್ದಿತ್ತೆಂದೇ ಅಂದೇ ೧೨ನೇ ಶತಮಾನದಲ್ಲಿಯೆ ಇಡೀ ಭರತಖಂಡದ ನಾನಾ ಭಾಗಗಳಿಂದ ಮುಮುಕ್ಷುಗಳು, ಸಾಧಕರು, ಸಿದ್ಧರು, ಯೋಗಿಗಳು ಹಾಗೂ ಭಕ್ತರೆಲ್ಲಾ ಜಾತಿ, ಮತ ವರ್ಣ–ವರ್ಗ ಭೇಧವಿಲ್ಲದೆ ಕಲ್ಯಾಣದಲ್ಲಿ ಬಸವಣ್ಣನವರ ಅನುಭವ ಮಂಟಪದಲ್ಲಿ ಸಮಾವೇಶ ಗೊಂಡು ಸ್ತ್ರೀ ಪುರುಷರೆಲ್ಲಾ ಸಮಾನವಾಗಿ ಧಾರ್ಮಿಕ ತತ್ತ್ವಗಳನ್ನು ಚರ್ಚಿಸುತ್ತಿದ್ದರು. ತಮ್ಮ ಬಾಳುವೆಯಲ್ಲದನ್ನು ಅನುಷ್ಠಾನಗೊಳಿಸುತ್ತಿದ್ದರು. ಒಬ್ಬ ವಿಚಾರ ವಾದಿ ತಿಳಿಸಿದಂತೆ "ಈ ಅನುಭವ ಮಂಟಪ ಭಾರತದ ಪ್ರಪ್ರಥಮ ಧಾರ್ಮಿಕ ಲೋಕ ಸಭೆ" ಎಂಬುದು ಸತ್ಯವೆಂದರಿವಾಗುತ್ತದೆ.

ಈ ಅನುಭವ ಮಂಟಪದಿಂದ ಚಿಂತನ–ಮಂಥನದಿಂದ ಹೊರಹೊಮ್ಮಿದ ವಚನ ಸಾಹಿತ್ಯವು ಕನ್ನಡ ನಾಡಿಗೆ, ಕನ್ನಡಿಗರಿಗೆ, ಕನ್ನಡ ಸಾಹಿತ್ಯಕ್ಕೆ ಬಸವಾದಿ ಶರಣರು ಕೊಟ್ಟ ಅಮೂಲ್ಯ ಕೊಡುಗೆ ಎಂಬುದರಲ್ಲಿ ಸಂದೇಹವಿಲ್ಲ.

"ಎನಗಿಂತ ಕಿರಿಯರಿಲ್ಲ ಶಿವಶರಣರಿಗಿಂತ ಹಿರಿಯರಿಲ್ಲ" ಎಂದು ಕಿಂಕರತೆಯಲ್ಲಿ ಕಿಂಕರತ್ವವನ್ನು ಮೆರೆದ "ಯುಗ ಪುರುಷ" ಬಸವಣ್ಣನವರು. ನಡೆಕಲಿಸಿದ, ನುಡಿ ಕಲಿಸಿದ, ಆಚಾರ-ವಿಚಾರ ಕಲಿಸಿದ, ಉಂಬುದ ಕಲಿಸಿದ–ಉಡುವುದ ಕಲಿಸಿದ, ಈ ಲೋಕದಲ್ಲಿ ಸಾರ್ಥಕವಾಗಿ ಬಾಳಿ ಬದುಕುವುದ ಕಲಿಸಿದ ಮಹಾಪುರುಷ. ಅಂತೆಯೆ ಜನಪದದಲ್ಲಿ ಹೀಗೆಂದರು-

ಎಲ್ಲಾ ಬಲ್ಲಿದನಯ್ಯ ಕಲ್ಯಾಣ ಬಸವಯ್ಯಾ
ಚಲ್ಲಿದನು ತಂದು ಶಿವಬೆಳಕ । ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು ॥

"ಕಾಯಕವೆ ಕೈಲಾಸ" ಎಂಬ ಬಹು ದೊಡ್ಡ ತತ್ತ್ವವನ್ನು ಬಸವಣ್ಣನವರು ಜಗತ್ತಿಗೆ ನೀಡಿದ್ದಾರೆ. ದುಡಿಮೆಗೆ ದೈವತ್ತ್ವವನ್ನು ದೊರಕಿಸಿಕೊಟ್ಟಿದ್ದಾರೆ. ಬರೀ ದುಡಿದುಗಳಿಸುವುದಷ್ಟೇ ಅಲ್ಲ "ದಾಸೋಹ" ತತ್ತ್ವದ ಮುಖಾಂತರ ಅದು ಲೋಕಕ್ಕೆ ಸದ್ವಿನಿಯೋಗವಾಗಬೇಕೆಂದು ಈ ಎರಡು ತತ್ತ್ವಗಳನ್ನು ಕೊಟ್ಟಿರುತ್ತಾರೆ. ಮಹಾತ್ಮ ವಿನೋಬಾ ಭಾವೆಯವರು 29-4-58ರ ತಮ್ಮ "ಭೂದಾನ ಯಜ್ಞ"

ಎಂಬ ಲೇಖನದಲ್ಲಿ ಬಸವಣ್ಣನವರ ಈ ಕಾಯಕ ತತ್ತ್ವವನ್ನು ಬಹಳ ಚೆನ್ನಾಗಿ ಮೆಚ್ಚಿ ಈ ರೀತಿ ತಿಳಿಸಿದ್ದಾರೆ.

In Karnataka, as for back as eight centuries, Basavesawara the great lord enuisioned the utmost reforms, trust to have been thinking of in the twentieth century. He wined a new word for bodily labour 'KAYAKA'. Bodily ladour was the worship of God, to him. He declaired "KAYAKAVE KAILASA" (Labour is Heaven). The meaning of productive labour is reaily heaven.

ಈ ರೀತಿ ಸತ್ಯಶುದ್ಧ ಕಾಯಕದಿಂದ ಗಳಿಸಿ ತನ್ನ ಅವಶ್ಯಕತೆಗಳನ್ನು ಪೂರೈಸಿ ಕೊಂಡು ಉಳಿದಿದ್ದನ್ನು ಜಂಗಮಾತ್ಮಕವಾದ ಈ ಜಗತ್ತಿಗೆ ದಾಸೋಹದ ಮುಖಾಂತರ ನೀಡುವುದನ್ನು ಕಲಿಸಿಕೊಟ್ಟ ಗುರು ಬಸವೇಶ್ವರರು. ಜಾನಪದ ಸಾಹಿತಿಗಳು ಈ ರೀತಿ ಕೊಂಡಾಡಿದ್ದಾರೆ.

ಕಾಯಕವ ಕಲಿಸುದಕೆ ನಾಯಕನು ಬಸವಯ್ಯ
ಜೀಯ **ಹೊಸಮತಕೆ** ಶಿವಭಕುತಿ । ಸಾರುವುದಕೆ
ರಾಯ ಜೀವನದ ಹೊಸ ನುಡಿಗೆ.

ಹೊಸಮತ (ನವಧರ್ಮ)ದ ದ್ರಷ್ಟಾರರಾಗಿ ಶ್ರೀ ಬಸವೇಶ್ವರರು ಜನ ಸಾಮಾನ್ಯ ರನ್ನು ವಚನ ಸಾಹಿತ್ಯದ ಹೊಸಹೊಸ ತತ್ತ್ವಗಳ ಮಾತಿನಿಂದ ಹಸನಾಗಿಸಿರುವುದನ್ನು ಅರಿಯಬಹುದಾಗಿದೆ.

ಬಸವಣ್ಣನವರು ಕೊಟ್ಟ ಧಾರ್ಮಿಕ ಲಾಂಛನವಾದ ಹಾಗೂ ಶಿವಯೋಗಕ್ಕೆ ಸಹಕಾರಿಯಾದ 'ಇಷ್ಟಲಿಂಗ' ಇಂದು ಜಾತಿಯ ಸಂಕೇತವಾಗಿ ಕೆಲವರು ತಿಳಿದಿರುವುದು ಅಜ್ಞಾನದ ದ್ಯೋತಕವೆನ್ನದೆ ವಿಧಿ ಇಲ್ಲಾ. ನಮ್ಮವರೆ ನಮ್ಮ ಧರ್ಮವನ್ನು ಸರಿಯಾಗಿ ತಿಳಿದಿಲ್ಲಾ. ಆದರೆ ಪ್ರಬುದ್ಧತೆಯಿಂದ ಅರಿಯುವ ಪ್ರಯತ್ನಮಾಡುವ ಪಾಶ್ಚಿಮಾತ್ಯರು ಸರಿಯಾಗಿ ಅಭ್ಯಸಿಸುತ್ತಾರೆಂಬುದಕ್ಕೆ ಓರ್ವ ಪಾಶ್ಚಿಮಾತ್ಯ ವಿದ್ವಾಂಸರು ಇಷ್ಟಲಿಂಗ ಕುರಿತು ಹೇಳಿರುವ ಈ ಮಾತು ಗಮನಾರ್ಹ.

"Istalinga works like a bulldozer which
equals the ups and downs of the society"

ಸಮಾಜದ ಎಲ್ಲಾ ರಂಗಗಳಲ್ಲಿ ಕಂಡು ಬರುವ ಏರು–ಪೇರುಗಳನ್ನು ಸಮಗೊಳಿಸುವ ತತ್ತ್ವವೇ ಬಸವಣ್ಣನವರ ಕೊಡುಗೆಯಾದ ಇಷ್ಟಲಿಂಗದ ಮಹತ್ವ.

ಬಸವಣ್ಣನವರ ವಚನಗಳು ಸಕಾಲಿಕವೂ, ಸಾರ್ವಕಾಲಿಕ ಸತ್ಯ ಮತ್ತು ನಿತ್ಯವಾಗಿರುತ್ತವೆ. ಅಂದು–ಇಂದು–ಎಂದೆಂದೂ, ಆದೇಶ–ಈದೇಶ–ಎಲ್ಲಾದೇಶಕ್ಕೂ

ಅವರಿಗೆ–ಇವರಿಗೆ–ಎಲ್ಲಾರಿಗೂ, ಹಾಗೂ ಆಭಾಷೆ–ಈಭಾಷೆ–ಎಲ್ಲಾಭಾಷೆಗಳವರಿಗೂ ಸರ್ವಮಾನ್ಯವಿರುತ್ತದೆಂಬುದನ್ನು ಗಮನಿಸಬೇಕು. ಉದಾ : ನೋಡಿ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ।
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ ।
ತನ್ನ ಬಣ್ಣಿಸ ಬೇಡ, ಇದಿರ ಹಳಿಯಲು ಬೇಡ ।
'ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ'
ಇದೇ ನಮ್ಮ ಕೂಡಲ ಸಂಗಮದೇವರ ನೊಲಿಸುವ ಪರಿ ॥

ಎಂಬ ಮೇಲಿನ ವಚನದಲ್ಲಿ ಸಪ್ತಸೂತ್ರದಲ್ಲಿ ಸಾರ್ವಕಾಲಿಕ ಸಂದೇಶವನ್ನು ಮನುಕುಲಕ್ಕೆ ನೀಡಿದ್ದಾರೆ. ಇಂತಹ ಅನೇಕ ವಚನಗಳಿಂದ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಅವರಷ್ಟೇ ವಚನಕಾರರಲ್ಲದೆ ನಿರಕ್ಷರಿಗಳನ್ನು, ಹೀನ ಕುಲದವರೆಂದು ಪರಿಗಣಿತರಾಗಿದ್ದ ಅಸ್ಪೃಶ್ಯರನ್ನೂ, ಸ್ತ್ರೀಯರನ್ನು, ಅನೇಕ ಜಾತಿ ಮತ, ಪಂಥ, ಪಂಗಡದಿಂದ ಬಂದು ಶರಣರಾದವರೆಲ್ಲರನ್ನೂ ಕನ್ನಡದಲ್ಲಿ ವಿದ್ವಾಂಸರನ್ನಾಗಿ ಮಾಡಿದುದೇ ಅಲ್ಲದೆ 'ವಚನಕಾರರನ್ನಾಗಿ ಮಾಡಿದ ಕೀರ್ತಿ ಬಸವಣ್ಣನವರಿಗೇ ಸಲ್ಲುತ್ತದೆ.

ಬಸವಣ್ಣನವರು ಮಾನವ ಸಮಾಜದ ನ್ಯೂನತೆಗಳನ್ನು ಗಮನಿಸಿ ಜನಸಾಮಾನ್ಯರ ಭಾಷೆಯಾದ ಕನ್ನಡದಲ್ಲಿ ವಚನಗಳ ಮುಖಾಂತರ ಪರಿಹಾರ ನೀಡಿರುವುದನ್ನು ಕಾಣಬಹುದು.

ವಿಶ್ವದ ಸಾರಸ್ವತ ಸಾಹಿತ್ಯಕ್ಕೆ ಬಸವಾದಿ ಶಿವಶರಣರ ವಚನಗಳು ಬಹು ಅಮೂಲ್ಯ ಕೊಡುಗೆಗಳೆಂದು ಧಾರಾಳವಾಗಿ ಕನ್ನಡಿಗರು ಎದೆ ಮುಂದೆ ಮಾಡಿ ಹೇಳಬಹುದು. ಅಂತಹ ಸತ್ವ-ತತ್ತ್ವಗಳಿಂದ ಪರಿಪ್ಲುತವಾಗಿವೆ ವಚನ ಸಾಹಿತ್ಯವು.

ರಾಷ್ಟ್ರಕವಿ ಕುವೆಂಪುರವರ ಈ ಕವಿತೆ ಗಮನಿಸಿ,–

ಕಾರ್ತಿಕದ ಕತ್ತಲಲಿ
ಆಕಾಶದೀಪವಾಗಿ ನೀ ಬಂದೆ
ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ
ಎಂಟು ಶತಮಾನಗಳ ಹಿಂದೆ
ಅಗ್ನಿ ಖಡ್ಗವನಾಂತ ಓ ಆಧ್ಯಾತ್ಮ ಕ್ರಾಂತಿವೀರ
ದೇವ ದಯೆಯೊಂದು ಹೇ ಧೀರಾವತಾರ,
ಶ್ರೀ ಬಸವೇಶ್ವರಾ !!

ಬಸವ ಪೂರ್ವದಲ್ಲಿ, ಧರ್ಮದ ಹೆಸರಿನಲ್ಲಿ, ಭಾರತದಲ್ಲಿ ಮೂಢನಂಬಿಕೆಗಳ ಮೌಢ್ಯಾಚರಣೆಗಳಿಂದ ಅಜ್ಞಾನದಲ್ಲಿ ತೊಳಲುವಂತೆ ಮಾಡಿ, ಕೇವಲ ಕೆಲವೇ ಕೆಲವು ಮೇಲ್ವರ್ಗದವರೆನಿಸಿದ ಬುದ್ಧಿವಂತರು ತಮ್ಮ ಕುತಂತ್ರದಿಂದ ಶ್ಲಾಘ ಪಡೆಯುತ್ತಿದ್ದ ರೀತಿ ಮಾನವರನ್ನು ಅಂಧಕಾರದ ಅಜ್ಞಾನ ಕೂಪಕ್ಕೆ ತಳ್ಳಿತ್ತು. ಆಗ ಅಧ್ಯಾತ್ಮಾಗಸದಲ್ಲಿ ಮನುಕುಲದ ಅಜ್ಞಾನದ ಅಂಧಕಾರವನ್ನೊಡೆದೋಡಿಸುವ ರೀತಿಯ 'ಬಸವಭಾನು'ವಿನ ಅವತಾರವಾಯಿತು. ಆತ ನಿಶಿತಮತಿಯಾಗಿ ಮಹಾಜ್ಞಾನದ ಅಗ್ನಿ ಖಡ್ಗದಿಂದ ಮೌಢ್ಯದ ಅಂಧಕಾರವನ್ನು ಹೋಗಲಾಡಿಸಿ, ಮುಂದು ದಾರಿಕಾಣದ ಅಜ್ಞಾನದಿಂದ ಬಳಲುತ್ತಿದ್ದ ಶ್ರೀ ಸಾಮಾನ್ಯರಿಗೆ ಒಂದು ಹೊಸ ಪಥವನ್ನು ನಿರ್ಮಿಸಿ ಕೊಟ್ಟು ಆ ದಾರಿಗೆ ತಾನೆ ದೊಂದಿ (ಬೆಳಕಾಗಿ) ದಿಕ್ಕಾಗಿ ನಿಂದ ದೇವದಯೆಯೇ ಶ್ರೀ ಬಸವೇಶ್ವರರೆಂಬುದನ್ನು ಕುವೆಂಪುರವರು ಸೊಗಸಾಗಿ ತಿಳಿಸಿಕೊಟ್ಟಿರುತ್ತಾರೆ.

ಮಹಾತ್ಮ ಗಾಂಧೀಜಿಯವರು ಬೆಳಗಾಂನ ಕಾಂಗ್ರೆಸ್ ಅಧಿವೇಶನದಲ್ಲಿ ಕನ್ನಡಿಗರಾದ ನಮಗೆ ನೀಡಿರುವ ಈ ಸಂದೇಶ ಪ್ರತಿಯೊಬ್ಬ ಕನ್ನಡಿಗನೂ ಹೆಮ್ಮೆಪಡಬಹುದಾದಂತಿದೆ.

"ಎಂಟುನೂರು (೮೦೦) ವರ್ಷಗಳ ಆಚೆ ಶ್ರೀ ಬಸವೇಶ್ವರರು ಯಾವ ತತ್ತ್ವವನ್ನು ಆಚರಿಸಿ ಉಪದೇಶ ಮಾಡಿದರೊ ಅಷ್ಟೆಲ್ಲಾ ತತ್ತ್ವ ನನಗೆ ಆಚರಿಸಲಿಕ್ಕೆ ಆಗುವುದಿಲ್ಲ. ಅದರಲ್ಲಿ ಕೆಲವು ತತ್ತ್ವಗಳನ್ನು ನಾನು ಆಚರಿಸುತ್ತಲಿದ್ದೇನೆ. ಸಾಧಕ ಸ್ಥಿತಿಯಲ್ಲಿದ್ದೇನೆ, ಸಿದ್ಧನಲ್ಲ. ಆದರೆ ಬಸವಣ್ಣನವರು ಹೇಳಿದ ತತ್ತ್ವಗಳನ್ನೆಲ್ಲಾ ಆಚರಣೆಯಲ್ಲಿ ತಂದಿದ್ದರು. ಅದರಲ್ಲಿ ಅಸ್ಪೃಶ್ಯತಾನಿವಾರಣೆ, ಕಾಯಕ ತತ್ತ್ವ ಮುಖ್ಯವಾದವು. ಯಾವುದೇ ಪ್ರಕಾರದ ಜಾತಿ ಭೇದ– ಅವರಲ್ಲಿ ಕಂಡು ಬರುವುದಿಲ್ಲ. ಈ ಕಾಲದಲ್ಲಿ ಅವರು ಇದ್ದಿದ್ದರೆ "ಜಗತ್ತಿಗೆ ಪೂಜ್ಯ ವ್ಯಕ್ತಿ"ಆಗುತ್ತಿದ್ದರು. ಆ ಧರ್ಮಾನುಯಾಯಿಗಳಾದ ನೀವು ಬಸವಣ್ಣನವರು ಉಪದೇಶಿಸಿರುವ ತತ್ತ್ವಗಳನ್ನು ಆಚರಣೆಯಲ್ಲಿ ತಂದರೆ ಭರತ ಭೂಮಿಯನ್ನಷ್ಟೇ ಏಕೆ ಜಗತ್ತನ್ನೇ ಉದ್ಧಾರ ಮಾಡಬಲ್ಲಿರಿ,"

ಜಗತ್ತಿನ ಪ್ರಪ್ರಥಮ ಮಹಿಳಾ ಜಗದ್ಗುರುಗಳಾದ ಪೂಜ್ಯ ಮಾತೆ ಮಹಾದೇವಿಯವರು ಬಸವೇಶ್ವರರನ್ನು ಕುರಿತು ನುಡಿದಿರುವ ಈ ಮಾತುಗಳು ಮನನೀಯ.

"ನಿರವಯನಾದ ಪರಮಾತ್ಮನ ಸಾವಯವ ಪ್ರತಿನಿಧಿ ಎಂದು ಭಕ್ತರು ಕರೆದರೆ, ಸ್ವತಂತ್ರವಿಚಾರವಾದಿ ಎಂದು ಕ್ರಾಂತಿಶೀಲರು ಉಚ್ಚರಿಸಿದರು. ಸಾಹಿತ್ಯ ಸಾರ್ವಭೌಮನೆಂದು ಸಾಹಿತಿಗಳು ಸಂಭೋಧಿಸಿದರೆ, ಜನತೆಯ ಧೀಮಂತ ನೇತಾರನೆಂದು ಶ್ರೀ ಸಾಮಾನ್ಯರು ಗೌರವಿಸಿದರು. ಮಹಾಯೋಗಿ ಎಂದು ಸಾಧಕ ಜೀವಿಗಳು ಸ್ತುತಿಸಿದರೆ, ಸ್ತ್ರೀ ಕುಲ ಮುಕ್ತಿದಾತನೆಂದು ಮಹಿಳಾ ಕುಲ ಮನ್ನಿಸಿತು."

"ಹೀಗೆ ಮನುಕುಲ ಮಹಾವೃಕ್ಷದಲ್ಲಿ ಅರಳಿ, ವಿನೂತನ ತತ್ವಗಳ ಸೌರಭವನ್ನು ಬೀರಿ ಸಾರ್ವಕಾಲಿಕ ಸಂದೇಶಗಳೆಂಬ ಅಪೂರ್ವ ಫಲಗಳನ್ನು ನೀಡಿದ ಮಹಾಪುರುಷ ಬಸವಣ್ಣನವರು. ಕರ್ನಾಟಕ ದೇವಿಯ ಸಿರಿ ಮುಡಿಗೆ ವಿನೂತನ ಆಧ್ಯಾತ್ಮಿಕ ತತ್ತ್ವಗಳನ್ನೊಳಗೊಂಡ ವಚನ ಸಾಹಿತ್ಯ ಕಿರೀಟವನ್ನೇರಿಸಿದ್ದಾರೆ."

"ವಿಶ್ವವಿಭೂತಿ ಬಸವಣ್ಣನವರ ವ್ಯಕ್ತಿತ್ವ ಸರ್ವಾಂಗ ಪರಿಪೂರ್ಣ, ಅಪೂರ್ವ, ಅನುಕರಣೀಯ, ಅನೇಕ ದ್ವಂದ್ವಗುಣಗಳ-ಸಂಯೋಜನೆಯಾಗಿರುವುದು ಅವರ ವ್ಯಕ್ತಿತ್ವದ ಒಂದು ವೈಶಿಷ್ಟ್ಯ. ಎಡದ ಕೈಯಲ್ಲಿ ಹಾಲು ಬಟ್ಟಲು, ಬಲದ ಕೈಯಲ್ಲಿ ಓಜಗಟ್ಟಿಗೆ ಹಿಡಿದ ಅವರು ದೇವರಲ್ಲಿ ದ್ವಂದ್ವಗುಣಗಳಿರುವಂತೆ ಬಸವಣ್ಣನವರಲ್ಲಿಯೂ ಇವೆ.

ಅವರು, ಕ್ರಾಂತಿ ಪುರುಷ–ಶಾಂತಿ ನಿಧಿ
ಸ್ವಾಭಿಮಾನಿ–ವಿನಯಶೀಲ
ಗಣಾಚಾರಿ–ಭೃತ್ಯಾಚಾರಿ
ರಾಜಕಾರಣ ಮುತ್ಸದ್ಧಿ–ಅನುಭಾವಿ,
ಪ್ರಧಾನಿ ಮತ್ತು ಯೋಗಿ.

ಹೀಗೆ ಸಕಲ ಗುಣ ಸಂಪನ್ನರಾಗಿ, ಸಮಾಜದ ಹಿತಚಿಂತಕರಾಗಿ, ಗೌರಿಶಂಕರದಷ್ಟು ಎತ್ತರದಷ್ಟು ಔನ್ನತ್ಯವನ್ನು ಹೊಂದಿ, ಉಪಮಿಸಲು ಮತ್ತೊಬ್ಬರು ಸಿಗಲಾರದಷ್ಟು, ಹೋಲಿಸಲು ಪಾಸಟಿಯಾಗದಂತಹ ಏಕಮೇವಾದ್ವಿತೀಯ ವ್ಯಕ್ತಿತ್ವವನ್ನು ಹೊಂದಿದ್ದಾರೆ ವಿಶ್ವವಿಭೂತಿ ಬಸವಣ್ಣನವರು."

ಪಾಶ್ಚಿಮಾತ್ಯ ಪಂಡಿತರಾದ ಆರ್ಥರ್ ಮೈಲ್ಸ್ ಬಸವಣ್ಣನವರನ್ನು ಕುರಿತು ಈ ರೀತಿ ನುಡಿದಿದ್ದಾರೆ. ತಮ್ಮ '*The land of Lingam*' ಎಂಬ ಲೇಖನದಲ್ಲಿ.

"Whatever the legend may say about Basava, the fact is pretty clear that he was the 'First Indian Free Thinker'

ಹೀಗೆ ಶ್ರೀ ಬಸವೇಶ್ವರರ ತತ್ತ್ವಗಳು ದೇಶ, ಭಾಷೆ, ಕಾಲಾತೀತವಾಗಿ ಎಲ್ಲಾ ಕಾಲಕ್ಕೂ ಪ್ರಸ್ತುತವೇ ಆಗಿರುತ್ತೆ. ಧರ್ಮದ ಹೆಸರಿನಲ್ಲಿ, ಭಾಷೆಹೆಸರಲ್ಲಿ, ಜಾತಿಗಳ ಹೆಸರಲ್ಲಿ, ಪ್ರಾಂತ್ಯಗಳ ಹೆಸರಲ್ಲಿ ಕಚ್ಚಾಡುತ್ತಿರುವ ಪ್ರಸ್ತುತ ಭಾರತಕ್ಕೆ ಹಾಗೂ ಭಾರತೀಯರಿಗೆ ಇವೆಲ್ಲವುಗಳಿಂದ ಬಿಡುಗಡೆಯಾಗುವ ದಾರಿ ಯಾವುದಾದರೂ ಇದ್ದರೆ ಅದು ಬಸವ ತತ್ತ್ವಗಳು ಎಂದು ಹೇಳಬಹುದು.

ಕನ್ನಡಿಗರಾದ ನಾವುಗಳು ಬಸವ ತತ್ತ್ವಗಳನ್ನು ಅರಿತು, ಅಳವಡಿಸಿಕೊಂಡು ಪಸರಿಸುವ ಕಾಯಕವನ್ನು ತ್ರಿಕರಣ ಶುದ್ಧಿಯಿಂದ ಮಾಡಿದುದೇ ಆದರೆ ಜಗತ್ತಿಗೇ ಉತ್ತಮ ಕೊಡುಗೆ ಕೊಟ್ಟ ಕೀರ್ತಿ ಕನ್ನಡಿಗರದಾಗುತ್ತೆ.

ಬಸವೇಶ್ವರರ ವ್ಯಕ್ತಿತ್ವವನ್ನು ಅರಿಯುತ್ತಾ ಹೋದಂತೆಲ್ಲಾ ಅವರ ವ್ಯಕ್ತಿತ್ವ ನಮ್ಮ ಬುದ್ಧಿ, ಮನ, ಭಾವಗಳನ್ನು ಮೀರಿ ನಿಂತಿರುವುದು ಅನುಭಾವ ವೇದ್ಯವಾಗುತ್ತೆ. ಅವರ ಭೂಮ ವ್ಯಕ್ತಿತ್ವದ ಮುಂದೆ ನಾವು ತೀರಾ ಕುಬ್ಜರಾದಂತೆ ಭಾಸವಾಗುತ್ತದೆ.

ಕೆಲವು ಮಹಾತ್ಮರು ಏಕಮುಖಿ ಸಾಧನೆಯಿಂದ ಮಾನವನನ್ನು ಉದ್ಧರಿಸಿರುವುದನ್ನು ಕಾಣಬಹುದು. ಇನ್ನು ಕೆಲವು ಮಹಾತ್ಮರು ಬಹುಮುಖಿ ಸಾಧನೆಯಿಂದ ಸಮಾಜವನುದ್ಧರಿಸಿರುವುದನ್ನು ಕಾಣಬಹುದು. ಆದರೆ 12ನೇ ಶತಮಾನದಲ್ಲಿಯೇ ಶ್ರೀ ಬಸವೇಶ್ವರರ ಸಾಧನೆ ಸರ್ವತೋಮುಖಿವಾದ ಸಮಗ್ರ ಕ್ರಾಂತಿ ಸಾಧನೆಯಿಂದ ಜಗತ್ತನ್ನೇ ಉದ್ಧರಿಸಿರುವುದು ಸೂರ್ಯಪ್ರಕಾಶದಷ್ಟು ಸತ್ಯವೇ ಇದೆ. ಅವರ ದೀನದಲಿತೋದ್ಧಾರ, ಪತಿತೋದ್ಧಾರ, ಅಸ್ಪೃಶ್ಯತೋದ್ಧಾರ, ಸ್ತ್ರೀಯರ ಧಾರ್ಮಿಕ ಸ್ವಾತಂತ್ರ್ಯ, ಪುರೋಹಿತಶಾಹಿ ಶೋಷಣೆ ನಿವಾರಣೆ, ವಚನ ಸಾಹಿತಿಗಳ ನಿರ್ಮಾಣ, ತತ್ತ್ವನಿಷ್ಠ ಜಂಗಮ ಶರಣರ ನಿರ್ಮಾಣ, ಅನುಭಾವ ಪೀಠ ಸ್ಥಾಪನೆ, ಸಾಮಾಜಿಕ ಸುಧಾರಣೆ, ಸಮತಾತತ್ವ ಪ್ರತಿಪಾದನೆ ಹೀಗೆ ಅವರ ಅನೇಕ ಸುಧಾರಣೆಗಳು ಇತಿಹಾಸದ ಮೈಲಿಗಲ್ಲು.

ಹೀಗೆ **ಕನ್ನಡ ಭಾಷೆಯೇ** ಬಸವಾದಿ ಶರಣರ ವಚನಗಳ ಸೂಳ್ನುಡಿಗಳಿಂದ ದೈವೀಕಳೆಯಿಂದ ಜಾಜ್ವಲ್ಯಮಾನವಾಗಿ ಬೆಳಗುತ್ತಿರುವುದನ್ನು ಕಾಣಬಹುದು.

ಕನ್ನಡದ ಅನುಭಾವೀವಚನಗಳು–

ಕಾಂತಿಯ ಕಿರಣ, ಶಾಂತಿಯ ಚಂದನ,
ಕ್ರಾಂತಿಯ ಸ್ಫುರಣ, ವೈಚಾರಿಕ, ವೈಜ್ಞಾನಿಕ, ಸಾಹಿತ್ಯಕ
ಮಿಲನ, ಮತ್ತು ಆಧ್ಯಾತ್ಮದ ಹೂರಣ॥

ಲೇಖಕ– **ಮ. ಜಯದೇವ,**
ಸದಸ್ಯ, ಬಸವ ಧರ್ಮ ಸಂಸತ್, ವಿಜಯಪುರ-೫೮೬೧೦೩

ಇದು ತ್ರೇತಾಯುಗದಲ್ಲಿ ಮೂರ್ತಿಯಾದ ಕರಸ್ಥಲವಲ್ಲ
ದ್ವಾಪರದಲ್ಲಿ ಮೂರ್ತಿಯಾದ ಕರಸ್ಥಲವಲ್ಲ
ಕಲಿಯುಗದಲ್ಲಿ ಮೂರ್ತಿಯಾದ ಕರಸ್ಥಲವಲ್ಲ
ಕೆಳಗೇಳು ಲೋಕ, ಮೇಲೇಳು ಲೋಕ
ಹುಟ್ಟಿದಲ್ಲಿಂದತ್ತತ್ತ ಮುನ್ನಲಾದ ಕರಸ್ಥಲವಲ್ಲ
ಸಂಗನ ಬಸವಣ್ಣನ ಕರಸ್ಥಲದೊಳಗೆ ಗೋಹೇಶ್ವರನೆಂಬ
ಲಿಂಗ ತೊಳಗಿ ಬೆಳಗುತ್ತಿರ್ದುದ ಕಂಡು
ನಮೋ ನಮೋ ಎನುತಿರ್ದೆನು

—ಪ್ರಭುದೇವ

—ಮಾತಾಜಿ

1. ತಪ್ಪು ಗಂಟೆ ಬಾರಿಸುವ ಗಡಿಯಾರ

"ಮಾತಾಜಿಯವರೇ, ಗಡಿಯಾರ ಈಗ ನಾಲ್ಕು ಹೊಡೆಯಿತು. ಅಲ್ಲಿ ಹೋಗಿ ನೋಡಿದರೆ ಮೂರುವರೆ ಇರುತ್ತದೆ. ನಾಲ್ಕಕ್ಕೆ ಮುಳ್ಳು ಬಂದಾಗ ಒಂದು ಸಲ ಗಂಟೆ ಹೊಡೆಯುತ್ತದೆ," ಎಂದು ನಕ್ಕಳು ನಮ್ಮ ಶಿಷ್ಯೆಯೊಬ್ಬಳು.

"ಹೌದಮ್ಮ ತಪ್ಪು ಗಡಿಯಾರದ್ದಲ್ಲ. ಅದು ನಿಂತಿತ್ತು ಅಂತ ಕಾಣುತ್ತದೆ. ಕೀಲಿ ಕೊಡುವಾಗ, ಕೊಡುವವರು ಎರಡನ್ನು ಹೊಂದಿಸಬೇಕಾಗಿತ್ತು" ಎಂದು ಹೇಳಿದೆ. ಆಗ ಒಂದು ವಿಚಾರ ಸ್ಫುರಿಸಿತು. ಗಡಿಯಾರವನ್ನು ತಯಾರು ಮಾಡಿದಾಗ ಎಲ್ಲವೂ ಸರಿ ಇರುತ್ತವೆ. ಕಾಲಾನಂತರದಲ್ಲಿ ಅದು ನಿಲ್ಲುತ್ತದೆ. ಯಾರು ಸಮಯವನ್ನು ಸರಿಯಾಗಿ ನೆನಪಿಟ್ಟುಕೊಂಡು ಮೊದಲು ಮೊದಲೇ ಕೀಲಿಕೊಡುತ್ತಾರೋ ಆ ಗಡಿಯಾರಗಳು ನಿಲ್ಲವು. ಅದೇ ರೀತಿ ಕ್ರೈಸ್ತ ಪಾದ್ರಿಗಳು, ಮುಸ್ಲಿಮ್ ಮೌಲ್ವಿಗಳು ಮುಂತಾದವರು ತಮ್ಮ ತಮ್ಮ ಸಮಾಜಗಳಿಗೆ ಸರಿಯಾಗಿ ಕೀಲಿಕೊಡುವುದರಿಂದ ಅವು ಚೆನ್ನಾಗಿ ನಡೆದುಕೊಂಡು ಬಂದಿವೆ.

ಲಿಂಗವಂತ ಸಮಾಜದ ಗಡಿಯಾರ ಬಸವಗುರುವು ತಯಾರು ಮಾಡಿ ಕೊಟ್ಟಾಗ ಚೆನ್ನಾಗಿತ್ತು. ಕಲ್ಯಾಣ ಕ್ರಾಂತಿಯ ಬಳಿಕ ಅವ್ಯವಸ್ಥೆಯಾಗಿ ನಿಂತಿತು. ಬಹಳ ನಂತರದಲ್ಲಿ ನಮ್ಮ ಮಠಾಧೀಶರು ಧರ್ಮದ ಗಡಿಯಾರಕ್ಕೆ ಕೀಲಿಕೊಟ್ಟರು. ಆದರೆ ಎಲ್ಲ ದೃಷ್ಟಿಯಿಂದಲೂ ಗಮನಿಸಲಿಲ್ಲ. ಹೀಗಾಗಿ ಇದು ತಪ್ಪು ತಪ್ಪು ಆಚರಣೆಯ ಗಂಟೆಯನ್ನು ಬಾರಿಸುತ್ತಿದೆ.

ವಚನ ಸಾಹಿತ್ಯವೇ ಗಡಿಯಾರ. ಅದೀಗ ಸರಿಯಾಗಿ ನಡೆಯುತ್ತಲಿದೆ. ಆದರೆ ಸಮಾಜವು ತಪ್ಪು ತಪ್ಪು ಆಚರಣೆಯ ಗಂಟೆಯನ್ನು ಬಾರಿಸುತ್ತಲಿವೆ. ಈಗ ಮಾಡಬೇಕಾದುದೆಂದರೆ ಗಡಿಯಾರದ ಮುಳ್ಳಿಗೆ ತಕ್ಕಂತೆ ಗಂಟೆ ಬಾರಿಸುವಂತೆ ಸರಿ ಮಾಡಬೇಕಾಗಿದೆ. ಅಂದರೆ ವಚನ ಸಾಹಿತ್ಯಕ್ಕೆ ಹೊಂದುವಂತೆ ಸಮಾಜದ ಆಚರಣೆಯನ್ನು ಸರಿಪಡಿಸಬೇಕಾಗಿದೆ.

2. ಷೆಲ್ಲಿಲ್ಲದ ಗಡಿಯಾರ

ಇನ್ನೊಂದು ಗಡಿಯಾರವಿದೆ. ಅದು ಷೆಲ್ಲಿನ ಮೇಲೆ ನಡೆಯುವಂಥಾದ್ದು. ಕೀಲಿ ಕೊಡುವುದು ಅಗತ್ಯವಿಲ್ಲ, ಆದರೆ ಅದು ನಿಂತಿತ್ತು. ಕಾರಣವೆಂದರೆ ಯಾರೋ ಷೆಲ್ ತೆಗೆದು ಬಿಟ್ಟಿದ್ದರು. ಅದೇ ರೀತಿ ಲಿಂಗಾಯತ ಸಮಾಜವೂ ಆಗಿದೆ. ವಚನ

ಸಾಹಿತ್ಯದ ಅಧ್ಯಯನ-ಅನುಷ್ಠಾನದ ಷೆಲ್ ತೆಗೆದುದರಿಂದ ಈ ಸಮಾಜ ನಿರ್ಜೀವಗೊಂಡಿದೆ. ಈಗ ಪುನಃ ಅದನ್ನು ಜೋಡಿಸಿದರೆ ಸಮಾಜವು ಪ್ರಗತಿಪರ ವಿಚಾರಗಳಿಂದ ಜೀವಂತಗೊಳ್ಳುತ್ತದೆ.

3. ಗಿಡದಲ್ಲಿನ ಹೂವು-ಕಿತ್ತ ಹೂವು

ಒಂದು ದಿವಸ ರಾತ್ರಿ ಪೂಜೆಯನ್ನು ಮಾಡುತ್ತಿದ್ದೆ. ಅವಶ್ಯಕತೆಗಿಂತಲೂ ಹೆಚ್ಚಾಗಿ ವಿಪರೀತ ಕಣಗಿಲೆ ಹೂವನ್ನು ಕಿತ್ತು ಇಟ್ಟಿದ್ದರು. ಇದೇಕೆ ಇಷ್ಟೊಂದು ಕಿತ್ತಿರಿ ಎಂದೆ ? "ಬೆಳಗಿನ ಪೂಜೆಗೂ ಬರುತ್ತೆ" ಎಂದರು. ಬೆಳಗಿನವರೆಗೂ ಇದು ಇಷ್ಟೇ ಸಶಕ್ತವಾಗಿ ಇರುವುದಾ ? " ಎಂದು ಕೇಳಿ ಸುಮ್ಮನಾದೆ. ಅವನ್ನು ತಣ್ಣೀರು ಬಟ್ಟೆಯಲ್ಲಿ ಸುತ್ತಿ ಇಟ್ಟರು. ಬೆಳಗಿನ ಪೂಜೆಗೆ ಅದೇ ಆಗ ಗಿಡದಿಂದ ಕಿತ್ತು ತಂದ ಹೂವನ್ನು ಇಟ್ಟಿದ್ದರು. ಹಿಂದಿನ ರಾತ್ರಿ ಕಿತ್ತುದನ್ನೂ ಇಟ್ಟಿದ್ದರು. ಮೊದಲಿನದು ಕಳಕಳ ಎಂದು ಕಂಗೊಳಿಸುತ್ತಿತ್ತು. ಹಿಂದಿನ ರಾತ್ರಿ ಕಿತ್ತುದು ಮುಖವನ್ನು ಬಾಡಿಸಿಕೊಂಡಿತ್ತು.

ಎರಡೂ ಹೂವುಗಳು ಅರಳಿದ್ದು ಒಟ್ಟಿಗೆಯೆ. ನಿನ್ನೆ ಕಿತ್ತುದು ಗಿಡದ ಸಂಪರ್ಕ ಕಳೆದುಕೊಂಡುದರಿಂದ ಬಾಡಿತ್ತು. ಇನ್ನೊಂದು ಇನ್ನೂ ಗಿಡದ ಸಂಪರ್ಕದಲ್ಲಿ ಇದ್ದುದರಿಂದ ಕಳಾಯುಕ್ತವಾಗಿತ್ತು. ಇದನ್ನು ಆಲೋಚಿಸುತ್ತ ಒಂದು ಸ್ಫುರಣ ಹೊಳೆಯಿತು. ಮನುಷ್ಯನ ಚಿತ್ತ-ಮನ-ಬುದ್ಧಿ-ಹೃದಯಗಳು ಹೂವುಗಳಂತೆಯೇ. ಮಂತ್ರ ಎನ್ನುವ ಅಥವಾ ಸಚ್ಚಿಂತನೆ ಎನ್ನುವ ತೊಟ್ಟಿನ ನೆರವಿನಿಂದ ಪರಮಾತ್ಮ ಎನ್ನುವ ಗಿಡದ ಸಂಪರ್ಕದಲ್ಲಿದ್ದರೆ ಚಿತ್ತ-ಮನ-ಬುದ್ಧಿ-ಹೃದಯಗಳು ಅತ್ಯಂತ ಪ್ರಸನ್ನವಾಗಿ, ಕಳಾಯುಕ್ತವಾಗಿ ಇರುತ್ತವೆ. ಆ ದಿವ್ಯಧ್ಯಾನ-ಚಿಂತನೆಯ ಸಂಬಂಧ ಕಳೆದುಕೊಂಡ ಬಳಿಕ ಲೌಕಿಕ ಸುಖ-ವೈಭವದ ತಣ್ಣೀರು ಬಟ್ಟೆಯಲ್ಲಿ ಮುಚ್ಚಿಟ್ಟರೂ ಅವು ಬಾಡತೊಡಗುತ್ತವೆ. ಜೀವನದ ಅತ್ಯಂತ ಸಂಕಷ್ಟದ ಸನ್ನಿವೇಶದಲ್ಲೂ ಪರಮಾತ್ಮನ-ಧರ್ಮಗುರುವಿನ ಚಿಂತನೆ-ಶರಣಾಗತಿ ಕಳೆದುಕೊಳ್ಳದಿದ್ದರೆ ಚಿತ್ತ-ಮನಗಳು ಅಷ್ಟೇ ಪ್ರಸನ್ನವೂ-ಪ್ರಶಾಂತವೂ ಆಗಿರುತ್ತವೆ.

ಗಾಂಪ ಶಿಷ್ಯರು

ಗಾಂಪಗುರುಗಳ ಬಗ್ಗೆ ಪತ್ರಿಕೆಗಳಲ್ಲಿ ಲೇಖನಗಳು ಆಗಾಗ ಮುದ್ರಣವಾಗುವುದನ್ನು ಕಂಡು, ನಮ್ಮ ಶಿಷ್ಯರೂ ತಾವೂ ತಮ್ಮ ಗುರುಗಳ ಖ್ಯಾತಿಯನ್ನು ಬೆಳೆಸಬೇಕೆಂದು ತುಂಬಾ ಪ್ರಯತ್ನಿಸುತ್ತಿರುತ್ತಾರೆ. ಅಂಥ ಒಂದೆರಡು ಘಟನೆ ಕುರಿತು ಹೇಳುವೆ.

ಬೆಂಗಳೂರು ಕಾನ್ಸರ್ ಹುಣ್ಣಿನಂತೆ ಅಡ್ಡ-ಉದ್ದ ಮನಸ್ಸಿಗೆ ಬಂದಂತೆ ಬೆಳೆಯುತ್ತ ಹೊರಟಿರುವುದನ್ನು, ನೀರಿನ ಅಭಾವ ತೀವ್ರವಾಗುತ್ತಿರುವುದನ್ನು ನೀವೆಲ್ಲ ದಿನ ಪತ್ರಿಕೆಗಳ ಮೂಲಕ ಓದಿ, ಕೇಳಿ ಬಲ್ಲಿರಿ ಎಂದು ನಾನು ನಂಬುತ್ತೇನೆ. ಮಹಡಿಯ ಮೇಲಿನ ನಮ್ಮ ಸ್ನಾನದ ಮನೆಯಲ್ಲಿ ನೀರು ಇರಲಿಲ್ಲ. "ಇಲ್ಲಿ ನೀರು ಇಲ್ಲ ; ಬಹುಶಃ ಮಹಡಿಗೆ ಏರುವಂತೆ ಕಾಣದು. ಕೆಳಗಿನಿಂದ ತಂದು ಹಾಕಿರಿ..." ಎಂದು ನಮ್ಮ ಗಾಂಪ ಶಿಷ್ಯರಿಗೆ ಹೇಳಿದೆ. ಹೇಳಿದ ಮಾತು ಮೀರದಂತೆ ತಂದು ತುಂಬಿದರು. ನಂತರ ಆಕಸ್ಮಿಕವಾಗಿ ನಲ್ಲಿ ತಿರುವಿದೆ. ಜಗತ್ತಿನ ಹಲವಾರು ಆಶ್ಚರ್ಯಗಳಲ್ಲಿ ಒಂದೆಂಬಂತೆ ನಲ್ಲಿಯಲ್ಲಿ ಜೋರಾಗಿ ನೀರು ಬರುತ್ತಿತ್ತು. "ಪಾಪ, ಶಿಷ್ಯರು ಬರಿದೇ ಹೊತ್ತು ದಣಿದರಲ್ಲ"ಎಂದು ಕನಿಕರವಾಯಿತು. "ಛೇ...ನೀವು ಸುಮ್ಮನೇ ಹೊರುವಂತಾಯಿತು. ನೀರು ಬರುತ್ತಿದೆ. ನೀವು ಆಗಲೇ ನೋಡಲಿಲ್ಲವೆ ? ಇಲ್ಲೇ ತುಂಬಿಸಬಹುದಿತ್ತು."

"ನೋಡಿದೆವು. ನೀರು ಬರುತ್ತಿದ್ದುದು ಗೊತ್ತಿತ್ತು."

"ಮತ್ತೆ ಏಕೆ ತಂದಿರಿ ?"

"ನೀವೇ ಹೇಳಿದಿರಿ, ಕೆಳಗಿನಿಂದ ತಂದು ಹಾಕಿರಿ ಎಂದು". ನಾನು ಕೇಳಿ ಸುಸ್ತಾದೆ, ನೀವೂ ಆಗಿರಬೇಕಲ್ಲವೆ ?

— — —

ಅಭಾವ ಈಗ ಒಂದೇ ಎರಡೇ, ಡೀಸೈಲ್ ಇಲ್ಲದೆ ಗಾಡಿ ನಿಂತಿತ್ತು. ಹತ್ತಿರದ ಬಂಕಿನಲ್ಲಿ ಡೀಸೈಲ್ ಬಂದುದು ತಿಳಿಯಿತು. ಆಗಲೇ ಕ್ಯಾನ್ ತಗೊಂಡು ಬೇರೆಬೇರೆ ಕಡೆ ಡೀಸೈಲ್ ಹುಡುಕಲು ಹುಡುಗರು ಹೋಗಿದ್ದರು. ಹೀಗಾಗಿ ಹತ್ತಿರದ ಬಂಕಿಗೆ ಅಗಲಬಾಯಿಯಿರುವ ಒಂದು ಪ್ಲಾಸ್ಟಿಕ್ ಪೀಪಾಯನ್ನೇ ಕಳಿಸಿದೆವು. ಅಂದು ಯಾವ ಭಾವದಲ್ಲಿದ್ದರೋ ಅವರೂ ಕೊಟ್ಟರು, ಆಟೋ ರಿಕ್ಷಾ ತೆಗೆದುಕೊಂಡು ನಮ್ಮ ಗಾಂಪಾ ಶಿಷ್ಯರು ಡಿಸೈಲ್ ತಂದರು. ಆಟೋದವನಿಗೆ ಹಣ ಕೊಟ್ಟು (ಅದೂ ಜಗಳವಾಡಿದ್ದು ಕೇಳಿಸಿತು) ಒಳಗೆ ಬಂದರು. ಬೆಂಗಳೂರು ಆಟೋದವರು ಪ್ರಯಾಣಿಕರೊಡನೆ ತಕರಾರು ಮಾಡುವುದರಲ್ಲಿ, ಜಗಳ ತೆಗೆಯುವುದರಲ್ಲಿ, ಮತ್ತು ವಿನಾ ಕಾರಣ ಸುತ್ತಿಸುವುದರಲ್ಲಿ ಆಗಲೇ ಜಗತ್ ಪ್ರಸಿದ್ಧಿ ಪಡೆದಿದ್ದಾರೆ ಎಂಬುದು ಬೆಂಗಳೂರು ವಾಸಿಗರಿಗೆ ಹೆಮ್ಮೆಯ ಸಂಗತಿ. ಹೆಮ್ಮೆಗೆ ಕಾರಣ ವಿಧಾಯಕವಾಗಿಯೇ ಇರಬೇಕೆಂದೇನೂ ಇಲ್ಲವಲ್ಲ.

ಒಳಗೆ ಬಂದ ನಮ್ಮ ಗಾಂಪ ಶಿಷ್ಯರನ್ನು ಕೇಳಿದೆ, "ಆಟೋಗೆ ಎಷ್ಟು ಕೊಟ್ಟೆ ?" "25 ರೂಪಾಯಿ" ನಾನು ಹೌಹಾರಿದೆ. ಈಗ ಡೀಸೈಲ್ ತಂದ ಬಂಕು

ಅರ್ಧ ಕಿಲೋಮೀಟರ್ ಒಳಗೆ ಇತ್ತು. ಆಟೋದ ಮಿನಿಮಮ್ ಬೆಲೆ ಮೀರಿಸುವಷ್ಟು ದೂರವಿರಲಿಲ್ಲ.

"ಇದೆಂಥಾ ಮೂರ್ಖತನ !"

"ಇನ್ನೂ ಅವನು 35 ರೂಪಾಯಿ ಕೇಳಿ ಜಗಳ ತೆಗೆದಿದ್ದ. ನಾನು ಕಮ್ಮಿ ಅಂದರೆ, 25ರೂ ಕೊಟ್ಟೆ." ತಾನು ಬಹಳ ಉಳಿತಾಯ ಮಾಡಿದ ಬಗ್ಗೆ ಸಂಭ್ರಮದಿಂದ ಶಿಷ್ಯರು ವಿವರಿಸುತ್ತಿದ್ದರು.

"ಏಕಂತೆ ಅಷ್ಟು"

"ನೀವು ಬ್ಲಾಕಲ್ಲಿ ಡೀಸೈಲ್ ತರುತಿದ್ದೀರಿ..." ಎಂದು ಹೆದರಿಸಿದ.

"ಬಿಲ್ ಇಲ್ಲವೆ ?

"ಇದೆ." ಬಂಕಿನವರು ತಾವು ಕೊಟ್ಟ ಡೀಸೈಲ್‌ಗೆ ಬಿಲ್ಲು ಕೊಟ್ಟಿದ್ದರು ಮತ್ತು ಸರಿಯಾದ ರೇಟು ತಗೊಂಡಿದ್ದರು. ಅಂದಾಗ ಹೆದರುವ ಪ್ರಮೇಯವೇ ಇರಲಿಲ್ಲ.

"ಆಶ್ರಮದ ಮುಂದೆ ನಿಂತು ಅವನು ಜೋರು ಮಾಡುವಾಗ ನಮಗೆ ಹೇಳಬಾರದಿತ್ತೋ. ಎಲ್ಲರೂ ಇಲ್ಲೇ ಇದ್ದೆವು." ಜೋಲು ಮೋರೆ ಹಾಕಿಕೊಂಡು ಗಾಂಪ ಶಿಷ್ಯರು ನಿಂತರು. 10ರೂ ಉಳಿಸಿದ ಬಗ್ಗೆ ಪ್ರಶಂಸೆ ಸಿಗುತ್ತೆ ಎಂದು ನಿರೀಕ್ಷಿಸಿ ಬಂದಿದ್ದ ಅವರ ಉತ್ಸಾಹದ ಬಲೂನು ಪುಸ್ಸೆಂದಿತ್ತು. ಬೈಗುಳ-ಕೋಪ-ಬೇಸರದ ಮಧ್ಯದಲ್ಲೂ ಒಂದು ನಗೆ ಹನಿ ಹೇಳಿದೆ ; ಕಾವೇರಿದ ವಾತಾವರಣ ತಂಪು ಮಾಡಲು.

ಒಮ್ಮೆ ಮುಂಬಯಿ ನೋಡಲು ಒಬ್ಬ ಹಳ್ಳಿಗ ಬಂದ. ಬಹು ಎತ್ತರಕ್ಕೆ ಹೋಗಿದ್ದ ಬಹು ಮಹಡೀ ಕಟ್ಟಡವನ್ನು ನೋಡುತ್ತ, ಆಶ್ಚರ್ಯದಿಂದ ಬೆರಗಾದ. ಆ ಕಟ್ಟಡದ ಕೆಳಗಿದ್ದ ಕಾವಲುಗಾರ ಬಂದು, "ಏಯ್, ಏನು ನೋಡುವೆ. ಇಲ್ಲಿ ಒಂದೊಂದು ಅಂತಸ್ತು ನೋಡಲು ಒಂದೊಂದು ರೂಪಾಯಿ ಕೊಡಬೇಕು."

"ಹೌದಾ...ನಂಗೊತ್ತಿರಲಿಲ್ಲ ಬಿಡಪ್ಪ." ಹಳ್ಳಿಗ ಹೇಳಿದ.

"ಅದೆಲ್ಲಾ ನಡೆಯೋಲ್ಲ. ನೀನು ಎಷ್ಟನೇ ಅಂತಸ್ತು ದಿಟ್ಟಿಸುತ್ತಿದ್ದೆ. ಹೇಳು"

"ನಾನು 5ನೇದು ನೋಡುತ್ತಿದ್ದೆ."

"ತಾ 5 ರೂಪಾಯಿ....." ಕಾವಲುಗಾರ ಕೇಳಿದ. ಹಳ್ಳಿಗ 5 ರೂ. ಕೊಟ್ಟು ಒಳಗೊಳಗೇ ಖುಷಿ ಪಟ್ಟು ಅಂದು ಕೊಂಡ. "ಇವನಿಗೆ ಚೆನ್ನಾಗಿ ಮೋಸ ಮಾಡಿದೆ. ನಾನು ದಿಟ್ಟಿಸಿ ನೋಡುತ್ತಿದ್ದುದು ಒಂಭತ್ತನೇ ಅಂತಸ್ತು. ಸುಳ್ಳೇ 5 ಅಂತಸ್ತು ಅಂತ ಹೇಳಿ ನಾಲ್ಕು ರೂಪಾಯಿ ಉಳಿಸಿಕೊಂಡೆ."

ನಿರಾಶೆಯನ್ನುಂಟು ಮಾಡಿದ್ದಕ್ಕೆ ವಿಷಾದ

ಕಲ್ಯಾಣ ಕಿರಣದ ಓದುಗರು ಸರ್ವಾಂಗ ಸುಂದರವಾಗಿ, ವರ್ಣರಂಜಿತ ಚಿತ್ರಗಳೊಡನೆ 1990ರ ವಿಶೇಷ ಸಂಚಿಕೆ ಶರಣಸಾಗರವು ಬಾದಂತೆ, ಶರಣ ಸೌರಭವು ಹೊರ ಬರುತ್ತದೆ ಎಂದು ನಿರೀಕ್ಷಿಸುವವರಿಗೆ ಯಥಾಪ್ರಕಾರ ಮತ್ತು ಕಲರ್ ಹೊದ್ದಿಕೆಯೂ ಇಲ್ಲದೆ ಕಲ್ಯಾಣ ಕಿರಣ ಬಂದಾಗ ನಿರಾಶೆಯಾಗುವುದು ಬಲು ಸಹಜ. ನಾವು ವಿಶೇಷ ಸಂಚಿಕೆಗಳನ್ನು ಶರಣ ಮೇಳದಲ್ಲಿ ಹೊರತರುತ್ತಿದ್ದೆವು. ಕಾರ್ಯಕ್ರಮದ ಭಾವಚಿತ್ರಗಳೊಡನೆ ವಿಶೇಷ ಸಂಚಿಕೆ, ಬುದಕೆ ಒಳ್ಳೆಯದು ಎಂದು ಮೂರನೆಯ ಶರಣ ಮೇಳದ ಸಂಚಿಕೆ 'ಶರಣ ಸಾಗರ' ವನ್ನು ವರ್ಣರಂಜಿತ ಭಾವಚಿತ್ರಗಳೊಡನೆ ತಂದೆವು. ಜನರಿಗೂ ಇದು ಬಹಳ ಮೆಚ್ಚುಗೆಯೂಯಿತು. ಅದೇ ರೀತಿ ಈ ಸಲವೂ ಮಾಡುವ ಅಪೇಕ್ಷೆ ಹೊಂದಿದ್ದೆವು. ಆದರೆ,

1. ಶರಣ ಮೇಳ ಮುಗಿಸಿ ಬರುವಷ್ಟರಲ್ಲಿ ಮಾರ್ಕೆಟಿನಲ್ಲಿ ನ್ಯೂಸ್ ಪ್ರಿಂಟಿನ ಅಭಾವ ವಿಪರೀತವಾಗಿದೆ. ಮಾತ್ರವಲ್ಲ ಎಷ್ಟೇ ಪ್ರಯತ್ನಿಸಿದರೂ ನಮಗೆ ಬೇಕಾದ ಅಳತೆಯ ಪೇಪರ್ ಇನ್ನೂ ಸಿಕ್ಕಲಿಲ್ಲ. ಇನ್ನು ಕಾಯುವುದು ಅಸಹನೀಯವೆಂದು, ದೊರೆತ ಚಿಕ್ಕ ಸೈಜಿನ ಪೇಪರ್ ತಗೊಂಡು ಮುದ್ರಿಸಿದೆವು. ಈ ಪೇಪರ್ ಒಂದು ರೀಮಿಗೆ(480 ಹಾಳೆಗಳು) 165 ರೂ ಆಗಿದೆ, ಹಾಲು ಕಾಗದದ ಬೆಲೆ ರೀಮಿಗೆ 300 ರೂ ಆಗಿ ಪತ್ರಿಕೆಗೆ ಬಳಸುವುದು ಕನಸಿನ ಮಾತಾಗಿದೆ.
2. ಇದರಿಂದಾಗಿ ಮೊದಲೇ ಮುದ್ರಿಸಿಟ್ಟ ವರ್ಣರಂಜಿತ ಹೊದ್ದಿಕೆ ಈಗ ಮುದ್ರಿಸಿರುವ ಪತ್ರಿಕೆ ಗಾತ್ರಕ್ಕೆ ಹೊಂದದಂತೆ ಆಯಿತು. ಆದ್ದರಿಂದ ಸಾಮಾನ್ಯವಾದ ಕವರು ಮುದ್ರಿಸಿದೆವು.
3. ನಮ್ಮ ಶರಣ ಬಳಗದವರು ಹಿಂದಿನ ಎಲ್ಲ ವಿಶೇಷ ಸಂಚಿಕೆಗೆ ಜಾಹಿರಾತುಗಳನ್ನು ಚೆನ್ನಾಗಿ ಸಂಗ್ರಹಿಸಿದರು. ಈ ಬಾರಿ, ಹುಬ್ಬಳ್ಳಿಯ ಕಲ್ಯಾಣಪ್ಪ ಪರಮಾದಿಯವರನ್ನು ಬಿಟ್ಟರೆ ಯಾರೂ ಪ್ರಯತ್ನಿಸಲ್ಲಿಲ್ಲ. ಹೀಗಾಗಿ ಹೆಚ್ಚಿನ ಖರ್ಚು ಮಾಡಿ ಹೆಚ್ಚಿನ ಪುಟಗಳನ್ನು ಮುದ್ರಿಸಲು ಸಾಧ್ಯವಾಗಲ್ಲಿಲ್ಲ.
4. "ಕ್ರಾಂತಿಯೋಗಿ ಬಸವಣ್ಣ" ಚಲನಚಿತ್ರ ನಿರ್ಮಾಣಕ್ಕೆ ತೆಗೆದುಕೊಂಡ ಬ್ಯಾಂಕ್ ಸಾಲವನ್ನು ತೀರಿಸಬೇಕೆಂಬ ಒತ್ತಡ ಬ್ಯಾಂಕಿನಿಂದ ಬಂದ ಕಾರಣ ಅನಿವಾರ್ಯವಾಗಿ, ವಿಶ್ವಕಲ್ಯಾಣ ಮಿಷನ್ ಅತ್ತ ಗಮನ ಕೊಡಬೇಕಾದ್ದರಿಂದಲೂ ಹೆಚ್ಚಿನ ಹಣವನ್ನು ಕಲ್ಯಾಣ ಕಿರಣಕ್ಕೆ ವಿನಿಯೋಗಿಸಲು ಆಗಲಿಲ್ಲ.

ಆದ್ದರಿಂದ ಓದುಗರು ಸಹಕರಿಸಬೇಕೆಂದು ವಿನಂತಿಸುತ್ತೇವೆ.

—ಸೋದರಿ ಕಸ್ತೂರಿ, ವ್ಯವಸ್ಥಾಪಕಿ

ಭೃತ್ಯಾಚಾರ ಗಣ ತರಬೇತಿ ಕಮ್ಮಟ

ನಾಲ್ಕನೆಯ ಶರಣ ಮೇಳದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯವರು ಸುಮಾರು 85 ಜನ ಸ್ವಯಂ ಸೇವಕರನ್ನು ಕಳಿಸಿದ್ದು, ರಾಷ್ಟ್ರೀಯ ಬಸವ ದಳದವರು ಮತ್ತು ಸ್ಕೌಟ್ಸ್‌ನವರು ಮಾಡಿದ ಸೇವೆ ಅತ್ಯಂತ ಪ್ರಶಂಸಾರ್ಹವಾಗಿ ಜನರ ಮೆಚ್ಚುಗೆ ಗಳಿಸಿತು. ಹಿಂದಿನ ಎಲ್ಲ ಶರಣ ಮೇಳಗಳಿಗಿಂತಲೂ ಹೆಚ್ಚಿನ ಜನರು ಸಮಾವೇಶವಾದರಲ್ಲದೆ, ಪ್ರಸಾದ ದಾಸೋಹವೂ ಎರಡು ಪಟ್ಟು ಹೆಚ್ಚಾಯಿತು. ಇಷ್ಟು ದ್ವಿಗುಣ ಒತ್ತಡಬಿದ್ದರೂ ಅತ್ಯಂತ ಅಚ್ಚುಕಟ್ಟಾಗಿ ಕಾರ್ಯಕ್ರಮ–ಸೇವೆ ನೆರವೇರಿತು.

ಇನ್ನೂ ಅನೇಕ ಊರುಗಳ ಜನರು ಭಕ್ತಿಪೂರ್ವಕವಾಗಿ **ತನು ದಾಸೋಹ** ಮಾಡಲು ಮುಂದೆ ಬಂದರಾದರೂ, ಅವರಿಗೆ ಸೂಕ್ತ ತರಬೇತಿ ಇಲ್ಲದ್ದರಿಂದ ನಿರ್ವಹಿಸಲು ಆಗಲಿಲ್ಲ. ಕೆಲಸ ಮಾಡುವ ಕಲೆ ಮತ್ತು ತರಬೇತಿ ಇಲ್ಲದವರಿಂದ ಕೆಲಸ ಮಾಡಿಸಿಕೊಳ್ಳಲು 'ಗಣನಾಯಕ'(ಸ್ವಯಂ ಸೇವಕ ಮುಖಂಡ)ರಿಗೂ ಬಹಳ ತೊಂದರೆಯಾಗುತ್ತದೆ. ಶರಣ ಮೇಳ ಮುಗಿದ ನಂತರ ಕುಂದು-ಕೊರತೆಗಳ ಪುನರ್ವಿಮರ್ಶೆ ಮಾಡಲು ಸೇರಿದಾಗ, ಉತ್ಸವ ಸಮಿತಿಯವರಿಗೆ ಅನೇಕ ರಾಷ್ಟ್ರೀಯ ಬಸವ ದಳದವರು ತಮ್ಮದೇ ಆದ ಭೃತ್ಯಾಚಾರ ಗಣವನ್ನು ರೂಪಿಸಲು ಸೂಚಿಸಿದ್ದಾರೆ.

1. ರಜಾದಿನಗಳಲ್ಲಿ ಅಂದರೆ ಬೇಸಿಗೆ ರಜೆ ಮತ್ತು ಅಕ್ಟೋಬರ್ ರಜೆಯಲ್ಲಿ 15 ದಿವಸಗಳ ತರಬೇತಿ ಶಿಬಿರ ಇಡುವುದು.
2. 16 ವರ್ಷ ಮೇಲ್ಪಟ್ಟ ಮತ್ತು 45 ವರ್ಷ ಒಳಗಿನ ಶರಣ/ಶರಣೆಯರು ಇದರಲ್ಲಿ ಭಾಗವಹಿಸಿ ತರಬೇತಿ ಪಡೆಯುವುದು.
3. ಆರ್ಥಿಕವಾಗಿ ಸ್ವಾವಲಂಬಿಗಳಾದವರು ತಮ್ಮ ಸ್ವಂತ ಖರ್ಚಿನಲ್ಲಿ ತರಬೇತಿಯ ಸ್ಥಳವನ್ನು ತಲ್ಪುವುದು. ಕೆಲಸ ಮಾಡುವ ಉತ್ಸಾಹವಿದ್ದು ಆರ್ಥಿಕ ಅನುಕೂಲತೆ ಇಲ್ಲದವರನ್ನು ರಾಷ್ಟ್ರೀಯ ಬಸವ ದಳದವರೇ ನೆರವು ನೀಡಿ ತರಬೇತಿಗೆ ಕಳಿಸುವುದು. ಅವರಿಗೆ ದಾನಿಗಳ ನೆರವಿನಿಂದಲೂ ಬಸ್ ಛಾರ್ಜು ಒದಗಿಸಬಹುದು.
4. ಬಸವ ಧರ್ಮ ಪೀಠವು ಊಟ-ವಸತಿಗಳನ್ನು ಉಚಿತವಾಗಿ ನಿರ್ವಹಿಸುವುದು.
5. ಹೀಗೆ ತರಬೇತಿ ಹೊಂದಿದವರು ಬಸವ ತತ್ತ್ವಕ್ಕೆ ಸಂಬಂಧಿಸಿದ ಸಭೆ-ಸಮ್ಮೇಳನ ಎಲ್ಲೇ ನಡೆದರೂ, ಅವರು ಆಹ್ವಾನಿಸಿ ಸಾರಿಗೆ ವೆಚ್ಚಕೊಟ್ಟರೆ, ರಾಷ್ಟ್ರೀಯ ಬಸವ ದಳದಿಂದ ನೇಮಿಸಲ್ಪಟ್ಟು ಹೋಗಿ ಸೇವೆ ಮಾಡಿ ಬರುವುದು. ಸಾರಿಗೆ ವೆಚ್ಚ, ಸಂಭಾವನೆ ತೆಗೆದುಕೊಳ್ಳುವುದು, ಬಿಡುವುದು ಅವರಿಗೆ ಸೇರಿದ್ದು.

ಪ್ರಥಮ ತರಬೇತಿ ಕಮ್ಮಟ

ಮೊದಲನೆಯ ತರಬೇತಿ ಕಮ್ಮಟವು ಕೂಡಲ ಸಂಗಮದಲ್ಲಿ ಸುಮಾರು ದಿನಾಂಕ 16-4-91 ರಿಂದ 1-5-91 ರವರೆಗೆ ನಡೆಯಲಿದ್ದು, ಕೆಳಗೆ ಸೂಚಿಸಿದ ಶರಣರು ತರಬೇತಿ ನೀಡಲಿದ್ದಾರೆ.

1. ಶರಣ. ಎನ್. ಬಸವರಾಜು, ದೊಡ್ಡಬಳ್ಳಾಪುರ. (ಭಾರತ ಸ್ಕೌಟ್ಸ್ ಸಂಸ್ಥೆ)
2. ಶರಣ. ಟಿ. ಎನ್. ದಾಸಪ್ಪ, ತಿಪಟೂರು (ಸರ್ವೋದಯ ಸಂಸ್ಥೆ)
3. ಶರಣೆ. ಜಯಮ್ಮ ಚಂದ್ರಪ್ಪ. ಶಿವಮೊಗ್ಗ (ರಾಷ್ಟ್ರೀಯ ಬಸವ ದಳ)
4. ಶರಣ. ಬಾಣೂರು ಚೆನ್ನಪ್ಪ, ಚಿಕ್ಕಮಗಳೂರು(ಶ್ರೀ ಬಸವೇಶ್ವರ ಯೋಗಶಾಲೆ)
5. ಶರಣೆ. ಉಮಾದೇವಿ, ಕೂಡಲ ಸಂಗಮ (ಬಸವ ಧರ್ಮ ಪೀಠ)

ಆಸಕ್ತರು ಮೊದಲೇ ಅರ್ಜಿಯನ್ನು ಬರೆದುಕೊಳ್ಳಬೇಕು. ಆಯ್ಕೆಯಾದವರಿಗೆ ಒಪ್ಪಿಗೆ ಪತ್ರ ಕಳಿಸಲಾಗುವುದು.

ನಿಯಮಾವಳಿ :

1. 16 ವರ್ಷ ಮೇಲ್ಪಟ್ಟು 45 ವರ್ಷ ಕೆಳಗಿನ ವಯೋಮಿತಿ ಇರಬೇಕು.
2. ಹೆಣ್ಣು ಮಕ್ಕಳು/ಗಂಡು ಮಕ್ಕಳು ಉಭಯತರಲ್ಲಿ ಯಾರಾದರೂ ಸರಿ. ವಿಶ್ವ ಗುರು ಬಸವಣ್ಣನವರಲ್ಲಿ ಶ್ರದ್ಧೆ, ಬಸವ ತತ್ತ್ವದಲ್ಲಿ ನಿಷ್ಠೆ ಇರಬೇಕು. ಜಾತಿ, ಮತಗಳ ನಿರ್ಬಂಧವಿಲ್ಲ.
3. ತಮ್ಮ ಖರ್ಚಿನಲ್ಲಿ ಬರಬೇಕು, ಶಿಬಿರದಲ್ಲಿ ಊಟ-ವಸತಿ ವ್ಯವಸ್ಥೆ ಉಚಿತ.
4. ಸ್ವಯಂ ಸೇವಕ ಕಾರ್ಯದಲ್ಲಿ ಮಾತ್ರವಲ್ಲ ಧಾರ್ಮಿಕ ಚಟುವಟಿಕೆ, ಪ್ರವಚನ, ಪ್ರಾರ್ಥನೆ ಮುಂತಾದುವುಗಳ ತರಬೇತಿಯೂ ಇರುತ್ತದೆ.
5. ರಾಷ್ಟ್ರೀಯ ಬಸವ ದಳದವರು ಆಯ್ಕೆ ಮಾಡಿ ಕಳಿಸಿದವರಿಗೆ ಆದ್ಯತೆ ಸ್ವಯಂ ಪ್ರಯತ್ನದ ಮೇಲೂ ಸೇವಾ ತರಬೇತಿ ಪಡೆಯಲು ಬರಬಹುದು.

ವ್ಯವಹರಿಸುವ ವಿಳಾಸ :

ಸೋದರಿ ಜಯಮ್ಮ, ಬಸವ ಧರ್ಮ ಪೀಠ, ಕೂಡಲ ಸಂಗಮ



ಕೂಡಲ ಸಂಗಮದ ಬಸವ ಧರ್ಮ ಪೀಠಕ್ಕೆ ಕಟ್ಟಡ ನಿರ್ಮಾಣಕ್ಕೆ ನೆರವು ನೀಡಿದ ಧನ ದಾಸೋಹಿಗಳು

ಶರಣರುಗಳಾದ :

1. ಮೆ|| ಮಿತ್ರಾ ಫೈನಾನ್ಸ್ ಕಾರ್ಪೊರೇಷನ್, ಬೆಂಗಳೂರು. ಅದರ ನಿರ್ದೇಶಕರುಗಳಾದ : 30,000-00

1.	ಎನ್. ಸಿ. ಶಾಮನೂರು	6.	ಸುಶೀಲಾ ಆರ್. ಎಸ್. ರುದ್ರಗೌಡರು
2.	ಚಂದ್ರಕಲಾ ಕೆ. ಎಚ್. ಮಹೇಶ್ವರಪ್ಪ	7.	ಗೌರಮ್ಮಣ್ಣಿ ಆರ್. ಪಿ. ಶಿವಮೂರ್ತಿ
3.	ನಂದಾ ಡಿ. ಆರ್. ಶೇಖರಪ್ಪ	8.	ಹಂಪಾ ಎಂ. ನಾಗಯ್ಯ
4.	ಉಮಾ ಎನ್. ಆರ್. ಪ್ರಭುದೇವ	9.	ಬಸವಣ್ಣಪ್ಪ ಪಿ. ಜೆ. ತಾಳೀಕೋಟಿ ಮಠ
5.	ಶಂಕರಮ್ಮ ಎಸ್. ಸಂಗಪ್ಪ	10.	ಬಸವರಾಜ ಎನ್. ಪ್ರಭು

2.	ಗೌರಮ್ಮ ಮತ್ತು ಎ.ಎಂ.ಬಸವೇಗೌಡರು, ಚಿಕ್ಕಮಗಳೂರು	30,000-00
3.	ಲಕ್ಷ್ಮಿ ಮತ್ತು ಜೆ. ರಾಜು, ನೀಲಗಿರಿ (ಎರಡನೆಯ ಕೋಣೆಗೆ) ಇವರು ಈಗಾಗಲೇ 1 ಕೋಣೆ ಕಟ್ಟಿಸಿದ್ದು; ಇದು ಇನ್ನಿತರರಿಗಾಗಿ	30,000-00
4.	ನಾಗರತ್ನ ಮತ್ತು ಕೆ. ಆರ್. ಸೋಮಶೇಖರ್, ಬೆಂಗಳೂರು	30,000-00
5.	ಕೆ. ಎಂ. ಹೇಮಯ್ಯ ಸ್ವಾಮಿ, ಕಂಪ್ಲಿ	15,000-00
6.	ಬಿ. ಎಸ್. ರುದ್ರಪ್ಪ, ಬಿದರೆ	1001-00
7.	ಸಾವಿತ್ರಮ್ಮನವರು	1001-00
8.	ಗುಪ್ತ ಕಾಣಿಕೆ	1001-00
9.	ಬಿ. ಎಂ. ಮಲ್ಲಪ್ಪ, ತರೀಕೆರೆ	1001-00
10.	ದುಂಡಪ್ಪ ಅಪ್ಪಣ್ಣ ಜರಳಿ, ಉಳ್ಳಾಗಡ್ಡಿ, ಖಾನಾಪುರ	1001-00
11.	ಚಂದ್ರಕಲಾ ಮತ್ತು ಕುಮಾರಸ್ವಾಮಿ, ತುಮಕೂರು	1001-00
12.	ಪರಪ್ಪ ಕಲ್ಲಪ್ಪ ಅವರಾದಿ, ಗಾಮನಗಟ್ಟಿ	501-00
13.	ನೀಲಪ್ಪ ಗೌಡರು, ಕಟಗೇರಿ	501-00
14.	ವಿ. ಈಶ್ವರರಾವ್, ಚಿಕ್ಕಮಗಳೂರು	505-00

ಜನರೇಟರ್ ಸಲುವಾಗಿ ದೇಣಿಗೆ

ಕೂಡಲ ಸಂಗಮದಲ್ಲಿ ಸಾಮಾನ್ಯವಾಗಿ ವಿದ್ಯುತ್ ಹೋಗುವುದರಿಂದಲೂ, ಕತ್ತಲಿನಲ್ಲಿ ಪ್ರವಾಸಿಕರಿಗೆ ತೊಂದರೆಯಾಗುವುದರಿಂದಲೂ, ಸಂಜೆ ವೇಳೆ ವಿದ್ಯುತ್ ಇದ್ದರೂ ವೋಲ್ಟೇಜ್ ಕೊರತೆಯಿಂದ ಮೂರ್ತಿಗಳು ಕಾಣಬರದೆ, ಪ್ರವಾಸಿಕರು ನಿರಾಶರಾಗಿ ಹಿಂತಿರುಗುವುದರಿಂದಲೂ 7.5 ಕಿ.ವಾ ಜನರೇಟರ್, ಬೆಲೆ ಸುಮಾರು

30,000–00 ಅಗತ್ಯವಿದೆ ಎಂದಾಗ ಇದರ ಖರೀದಿಗೆ ನೆರವು ನೀಡಲು ಮುಂದಾದವರು.

1. ಶರಣ. ಆರ್. ಬಿ. ಹೆಬ್ಬಳ್ಳಿ, ಬಾಂಬೆ 1000–00
2. ಶರಣ. ಗಿರಿಜಾಪತಿ ಭಾವೀಕಟ್ಟಿ, ಗದಗ 1000–00
3. ಶರಣ. ಹೆಚ್. ಡಿ. ಶೆಟ್ಟಿ, ಸವದತ್ತಿ 505–00

ದಾಸೋಹ ನಿಧಿಗೆ ದೇಣಿಗೆ ಸಲ್ಲಿಸಿದವರು

ಅನೇಕ ಶರಣರು ಶರಣ ಮೇಳದ ದಾಸೋಹಕ್ಕೆ ನಿರಂತರವಾಗಿ ಕೊಡುತ್ತಲಿರುವುದಲ್ಲದೆ, ಅವರ ಹಿರಿಯರ ಹೆಸರಿನಲ್ಲಿ ಪುದುವಟ್ಟನ್ನು ಇಡುವ ಅಪೇಕ್ಷೆ ತಾಳಿದವರಾಗಿ, ಕೆಳಗಿನಂತೆ ದಾಸೋಹ ಮಾಡಿದ್ದಾರೆ. ಈ ಹಣವನ್ನು ಪುದುವಟ್ಟನ್ನಾಗಿ ಇಟ್ಟು ಅದರ ಬಡ್ಡಿ ಹಣವನ್ನು ಶರಣ ಮೇಳದ ಸಮಯದ ದಾಸೋಹಕ್ಕೆ ಉಪಯೋಗಿಸಿಕೊಳ್ಳಲಾಗುವುದು.

1. ಶರಣೆ. ಶಿವಮ್ಮ ಪಿ. ಸಿ. ಗುರುಮಲ್ಲಪ್ಪ, ಮೈಸೂರು 5000-00
2. ಶರಣ. ಬಿ. ಕೆ. ನಂಜುಂಡಪ್ಪ, ಬೆಂಗಳೂರು 5000-00
3. ಶರಣೆ. ನಿರ್ಮಲಾ ಮತ್ತು ಶರಣ ಬಿ. ಜಯದೇವ, ಬೆಂಗಳೂರು. 5000-00

ನಿತ್ಯ ದಾಸೋಹ ನಿಧಿಗೆ 1111-00 ಸಲ್ಲಿಸಿದವರು.

ಕ್ರ. ಸಂಖ್ಯೆ ಹೆಸರು ಮತ್ತು ಊರು

ಶರಣರುಗಳಾದ :

575 ಲೀಲಾವತಿ ಮತ್ತು ನಾಗರಾಜು, ಚಿಕ್ಕಮಗಳೂರು
576 ಮಲ್ಲಮ್ಮ ಮತ್ತು ಚೆನ್ನಪ್ಪ, ಚಿಕ್ಕಮಗಳೂರು
577 ಸಿ. ಆರ್. ಪಾರ್ವತಮ್ಮ ಮತ್ತು ಮಕ್ಕಳು, ಚಿಕ್ಕಮಗಳೂರು
578 ರಾಜೇಂದ್ರ ಉದೋಪಿ, ಚಿಕ್ಕಮಗಳೂರು
579 ಸಿ. ಎಸ್. ಪುಟ್ಟಪ್ಪ ಶೆಟ್ಟಿ, ಚಿಕ್ಕಮಗಳೂರು
580 ಸಿ. ಬಿ. ಮಲ್ಲೇಗೌಡರು, ಚಿಕ್ಕಮಗಳೂರು
581 ಎಸ್.ವಿ. ಕೋಟಗಿ, ರೋಣ, ಜಿ– ಧಾರವಾಡ
582 ಗೌರಮ್ಮ ಮತ್ತು ಎ. ಎಂ. ಬಸವೇಗೌಡರು, ಚಿಕ್ಕಮಗಳೂರು
583 ಎಸ್. ಆರ್. ನಾಗರತ್ನಮ್ಮ, ಉದ್ದೇಬೋರನ ಹಳ್ಳಿ
584 ಭಾರತಿ ಮತ್ತು ಪಿ. ಮಲ್ಲಪ್ಪ, ಚಿಕ್ಕಮಗಳೂರು
585 ಅನ್ನಪೂರ್ಣ ತಾರಪ್ಪನವರು, ಚಿಕ್ಕಮಗಳೂರು
586 ಬಿ. ಎಸ್. ಹಾಲಪ್ಪ, ಚಿಕ್ಕಮಗಳೂರು

587 ಎಸ್. ಪರಮೇಶ್ವರಪ್ಪ, ಅರಬಗಟ್ಟ
588 ಇಂದಿರಾ ಬಿ. ಎಸ್. ತಮ್ಮಣ್ಣ, ಮುದಿಗೆರೆ
589 ಎಂ. ಬಿ. ವೀರಶೆಟ್ಟರು, ಮುಗ್ಗೀ ಹಳ್ಳಿ
590 ಎ. ಎಂ. ಚಂದ್ರೇಗೌಡರು, ಹಿರೇಕೊಳಲೆ
591 ಟಿ. ಕೃಷ್ಣಪ್ಪ, ಚಿಕ್ಕಮಗಳೂರು
592 ಹೆಚ್. ಎನ್. ನಿರ್ವಾಣೇಗೌಡರು, ಹಲಸುಮನೆ
593 ಬಿ. ವಿ. ಲಿಂಗರಾಜ, ಚಿಕ್ಕಮಗಳೂರು
594 ಜಿ. ಜ್ಞಾನೇಶ್ವರಿ ಬಸವರಾಜ್, ಚಿಕ್ಕಮಗಳೂರು
595 ಕಾಳಮ್ಮ ಕೆ. ಸಿ. ಓಂಕಾರಪ್ಪ, ಚಿಕ್ಕಮಗಳೂರು
596 ಎಲ್. ಶಿವಮೂರ್ತಿ, ಚಿಕ್ಕಮಗಳೂರು
597 ಡಾ॥ ಶಿವಶಂಕರ್, ಚಿಕ್ಕಮಗಳೂರು
598 ಸಿ. ಬಿ. ಸದಾಶಿವಮೂರ್ತಿ, ಚಿಕ್ಕಮಗಳೂರು
599 ಬಿ. ಬಿ. ರೇಣುಕಾರ್ಯರು, ಆಲೂರು
600 ಬಿ. ಆರ್. ಜಗದೀಶ, ಚಿತ್ರದುರ್ಗ
601 ಶಂಕರಪ್ಪ, ಚಿಕ್ಕಮಗಳೂರು
602 ಅಡಿವೆಪ್ಪ ಹನುಮಂತಪ್ಪ ತಂಬಾಕೆ, ತಾಳಮಡಗಿ
603 ಬಸಪ್ಪ ಭೀಮಪ್ಪ ಉಣಕಲ್, ಗೋಕುಲ
604 ಡಾ॥ ಎಸ್. ಜಿ. ಹಿರೇಮಠ, ಕೂಡಲಸಂಗಮ
605 ಸಿದ್ಧರಾಮಪ್ಪ ಶಿವಶರಣಪ್ಪ ಬಾಲಪ್ಪಗೋಳ, ಗುಲಬರ್ಗಾ
606 ಮಣ್ಣಬಸಪ್ಪ ಮಣ್ಣಪ್ಪ ಕುಂಬಾರ, ಮಲಕಿನಕೊಪ್ಪ
607 ಡಾ॥ ಚಂದ್ರಶೇಖರ ಮಡಕಿ, ಬೀದರ
608 ಸುಶೀಲಾ ಮತ್ತು ಆರ್. ಹೆಬ್ಬಳ್ಳಿ, ಬಾಂಬೆ
609 ಗೌಡರ ರುದ್ರಪ್ಪನವರು, ಬೆಂಗಳೂರು
610 ಸೌಭಾಗ್ಯ ನಾಗರಾಜು, ಮೈಸೂರು
611 ಶ್ರೀಕಂಠದತ್ತ ನರಸಿಂಹರಾಜ ಒಡೆಯರ್, ಮೈಸೂರು
612 ಹೆಚ್. ಪಿ. ಗುರುಪಾದಪ್ಪ, ಮೈಸೂರು
613 ಪಾರ್ವತಮ್ಮ ಮಲ್ಲಿಕಾರ್ಜುನಪ್ಪ, ಮೈಸೂರು
614 ಎಂ. ಸಿ. ಚನ್ನಪ್ಪ, ಬೆಂಗಳೂರು
615 ಹೆಚ್. ಸಿ. ಶಿವಲಿಂಗಯ್ಯ, ಬೆಂಗಳೂರು
616 ಬಸವಂತರಾವ್ ಪಾಟೀಲ್, ಗುಲಬರ್ಗಾ

617 ಜಿ. ಶಾಂತಯ್ಯ, ಗನ್ನಾಯ್ಯನಹಳ್ಳಿ
618 ಜಿ. ಮಹಾಂತಪ್ಪ, ಅರಳೀಕಟ್ಟೆ
619 ಎಸ್. ಎಸ್. ಹಿರಂಡಗಿ, ಬಿಜಾಪುರ

(ಮುಂದುವರಿಯುವುದು)

ಧರ್ಮ ಗ್ರಂಥ ನಿಧಿಗೆ 1001 ರೂ. ಕೊಟ್ಟ ದಾಸೋಹಿಗಳು

(ಮುಂದುವರಿದ ಯಾದಿ)

ಕ್ರ. ಸಂಖ್ಯೆ ಹೆಸರು ಮತ್ತು ಊರು

ಶರಣರುಗಳಾದ :

335 ಶಕುಂತಲಾ ಮತ್ತು ಪುಟ್ಟಸಿದ್ದಪ್ಪ, ಬೆಂಗಳೂರು
336 ನಾಗಲಾಂಬಿಕೆ ಮತ್ತು ಪುಟ್ಟಸ್ವಾಮಿ, ಚಿಕ್ಕಮಗಳೂರು
337 ಲೀಲಾವತಿ ಮತ್ತು ನಾಗರಾಜು, ಚಿಕ್ಕಮಗಳೂರು
338 ಬಿ. ಎಸ್. ಹಾಲಪ್ಪ, ಚಿಕ್ಕಮಗಳೂರು
339 ಬಿ. ಎಸ್. ಶಿವರುದ್ರಪ್ಪ, ಚಿಕ್ಕಮಗಳೂರು
340 ಪಾರ್ವತಮ್ಮ ಮತ್ತು ನಂಜಪ್ಪ ಶೆಟ್ಟರು, ಚಿಕ್ಕಮಗಳೂರು
341 ಜಿ. ಜ್ಞಾನೇಶ್ವರಿ ಮತ್ತು ಬಸವರಾಜು, ಚಿಕ್ಕಮಗಳೂರು
342 ಸಿ. ಆರ್. ಮಲ್ಲಪ್ಪ, ಚಿಕ್ಕಮಗಳೂರು
343 ಮಾಣಿಕ ಪ್ರಭು, ಹುಬ್ಬಳ್ಳಿ
344 ಬಸವಣ್ಣಪ್ಪ ಬೆಳಕೇರಿ, ಮನ್ನಳ್ಳಿ
345 ಪಾರ್ವತಿ ಮತ್ತು ಸುನಂದ ಮೂರ್ತಿ, ಬೆಂಗಳೂರು (ಮುಂದುವರಿಯುವುದು)

ಕೂಡಲ ಸಂಗಮದ ಬಸವ ಮಂಟಪದಲ್ಲಿ ನಡೆಯುವ ಪೂಜಾನಿಧಿಗೆ 501 ರೂ. ಕೊಟ್ಟವರು

ಕ್ರ. ಸಂಖ್ಯೆ ಹೆಸರು ಮತ್ತು ಊರು

ಶರಣರುಗಳಾದ :

151 ಕೆ. ತಿಪ್ಪೇಸ್ವಾಮಿ, ವಿಜಯಪುರ
152 ಗೌರಮ್ಮ, ಎ. ಎಂ. ಬಸವೇಗೌಡರು, ಚಿಕ್ಕಮಗಳೂರು
153 ಮಲ್ಲಮ್ಮ, ಜಿ. ಕಲ್ಲತ್ತಪ್ಪ, ಉದ್ದೇಬೋನರಹಳ್ಳಿ
154 ಬಿ. ಎ. ಪುಟ್ಟಸ್ವಾಮಿ, ಚಿಕ್ಕಮಗಳೂರು
155 ಕೆ. ಬಿ. ಉಮಾಪತಿ, ಹೊಸಕಲ್ಯಾಡಿ
156 ಲಲಿತಾ ಎಂ. ಪಿ. ಹರೀಶ, ತೋಟದ ಹಳ್ಳಿ

157 ಹೆಚ್. ಕೆ. ಸದಾನಂದ, ಚಿಕ್ಕಮಗಳೂರು
158 ಶಿವಲಿಂಗಪ್ಪ ಎಂ. ಹೊಸಹಳ್ಳಿ, ಕಾಟಿಗನರೆ
159 ಸೋಮಣ್ಣಯ್ಯ, ಚಿಕ್ಕಮಗಳೂರು
160 ಸಿ. ಚಂದ್ರಶೇಖರಯ್ಯ, ಚಿಕ್ಕಮಗಳೂರು
161 ಎಸ್. ಎನ್. ಮೂರ್ತಿ, ದೇವನೂರು
162 ಎಂ. ಡಿ. ಪುಟ್ಟಸ್ವಾಮಿ, ಮಾವಿನ ಹಳ್ಳಿ
163 ಚಂಪಕ್ಕ, ಬಿ. ಆರ್. ಬಸವರಾಜಪ್ಪ, ಚಿಕ್ಕಮಗಳೂರು
164 ನಂಜಮ್ಮ ಎಸ್. ಎನ್. ರುದ್ರಪ್ಪ, ಜಾವಗಲ್
165 ಸೀನಣ್ಣ ದೊಡ್ಡಪ್ಪಯ್ಯನವರು, ಚಿಕ್ಕಮಗಳೂರು
166 ಟಿ. ಆರ್. ಶ್ರೀಕಂಠಪ್ಪ, ತುಮಕೂರು
167 ಡಾ॥ ಎಂ. ಪಿ. ಮಂಜುನಾಥ, ಚಿಕ್ಕಮಗಳೂರು
168 ಸಿ. ಚಂದ್ರಶೇಖರ, ಚಿಕ್ಕಮಗಳೂರು
169 ಎಂ. ಜಿ. ಪಂಚಾಕ್ಷರಯ್ಯ, ಚಿಕ್ಕಮಗಳೂರು
170 ಅಡಿವೆಪ್ಪ ಹನುಮಂತಪ್ಪ ತಂಬಾಕೆ, ತಾಳಮಡಗಿ
171 ಬಸವಂತರಾವ ಪಾಟೀಲ, ಗುಲಬರ್ಗಾ
172 ರತ್ನಮ್ಮ ಕಪ್ಪಡಿ ಮಠ, ಗುಲಬರ್ಗಾ
173 ವಿಮಲಕ್ಕ ಪಂಚಾಕ್ಷರಯ್ಯ, ಪಂಚಾಂಗಮಠ, ಹುಬ್ಬಳ್ಳಿ
174 ಹುಲಿಗೆಪ್ಪ ಕುರುಬರ, ಮಟಮಾರಿ (ಮುಂದುವರಿಯುವುದು)

ಈ ಎಲ್ಲ ದಾಸೋಹಿಗಳಿಗೆ ವಿಶ್ವಗುರು, ಮಂತ್ರಪುರುಷ ಬಸವಣ್ಣನವರು ಆಯುರಾರೋಗ್ಯಭಾಗ್ಯ ಸಕಲ ಸಂಪದವನ್ನು ನೀಡಲೆಂದು ಹಾರೈಸುತ್ತೇವೆ.

—**ಜಗದ್ಗುರು ಮಾತೆ ಮಹಾದೇವಿ,** ಬಸವ ಧರ್ಮ ಪೀಠ

-: ಒಂದು ವಿಶೇಷ ಸೂಚನೆ :-

ಪ್ರವಚನ ನಡೆದ ಕಾಲದಲ್ಲಿ, ನಮ್ಮ ಆತ್ಮೀಯರು ಶರಣ ಮೇಳಕ್ಕೆ ಹಣವನ್ನು ಸಂಗ್ರಹಿಸುವಾಗ ಅನೇಕರು ಬಸವ ಧರ್ಮ ಪೀಠದ ವಿವಿಧ ಉದ್ದೇಶಗಳಿಗೆ ದೇಣಿಗೆ ನೀಡಿರುವರಲ್ಲದೆ, ಶರಣ ಮೇಳಕ್ಕೆ ಬಂದಾಗಲೂ ನೀಡಿದ್ದಾರೆ, ಕಾರ್ಯ ಭಾರದ ಒತ್ತಡದಲ್ಲಿ ನಾವು ಅತ್ತ-ಇತ್ತ ಓಡಾಡುವಾಗ ವೇದಿಕೆ ಮೇಲೆ ಇರುವಾಗ ತಂದು ಹಣವನ್ನು ಒಪ್ಪಿಸಿಬಿಡುತ್ತಾರೆ. ನಾವು ಸಾಧ್ಯವಾದಷ್ಟೂ ನೆನಪು ಇಟ್ಟುಕೊಳ್ಳುತ್ತೇವೆ.. ಮಠಕ್ಕೆ ಬಂದ ನಂತರ ಲಿಸ್ಟ್ ಮಾಡಿಸುತ್ತೇವೆ. ಹಾಗೇನಾದರೂ ಮರೆತು ಈ ಯಾದಿಯಲ್ಲಿ 501 ರೂ ಮತ್ತು ಅದಕ್ಕಿಂತ ಮೇಲಿನ ಮೊತ್ತವನ್ನು ಪ್ರಕಟಿಸಿರದಿದ್ದರೆ, ಬೆಂಗಳೂರು ವಿಳಾಸಕ್ಕೆ ಪತ್ರ ಬರೆದು, ನೆನಪು ಮಾಡಿರಿ. ಯಾರ ಕೈಯಲ್ಲಿ ಕೊಟ್ಟಿರಿ? ರಸೀತಿ ಹಾಕಿಸಿದ್ದರೆ ಅದರ ಸಂಖ್ಯೆ ಏನು? ಹೆಸರು ಬಂದಿರದಿದ್ದರೆ ತಪ್ಪು ಭಾವಿಸದೆ, ಪತ್ರ ಬರೆದು ತಿಳಿಸಬೇಕು.

—ಮಾತಾಜಿ

ನಾಲ್ಕನೆಯ ಶರಣ ಮೇಳಕ್ಕೆ 501-00ರೂ.ಗಳ ಮೇಲೆ ಧನ ಸಹಾಯ ಮಾಡಿದವರು

1	ಪೂಜ್ಯ ಶ್ರೀ ನಿ.ಪ್ರ ಡಾ॥ಶಿವಕುಮಾರ ಸ್ವಾಮಿಗಳು, ಸಿದ್ಧಗಂಗಾ		2500-00
2	ಪೂಜ್ಯಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು, ಬೆಂಗಳೂರು		5000-00
3	ಪೂಜ್ಯಶ್ರೀ ನಿ.ಪ್ರ ಶಿವಲಿಂಗ ಸ್ವಾಮಿಗಳು, ಹಾಸನ		1001-00

ಶರಣರು:ಗಳಾದ :

1	ಟಿ.ಎಸ್. ಕರಿಬಸಯ್ಯ. ಬೆಂಗಳೂರು	(330)	2000.00
2	ಐ.ಎಂ.ಮುಗದಮ್. ಅ.ಭಾ.ವೀ.ಮ,ಬೆಂಗಳೂರು	(2343)	1111-00
3	ಕೆ. ಆರ್. ಸೋಮಶೇಖರ್, ಬೆಂಗಳೂರು		2000-00
4	ಜಿ. ಎನ್. ಬಸವರಾಜು, ಬೆಂಗಳೂರು	(329)	1001-00
5	ಸುಬ್ಬಣ್ಣ ನಂಜಪ್ಪ ಮೈಸೂರು, ಧಾರವಾಡ	(52)	1005.00
6	ಟಿ. ಡಿ. ಮುಮ್ಮಿಗಟ್ಟಿ, ಧಾರವಾಡ	(63)	1001-00
7	ಡಾ॥ ಸಿ. ಮುನಿಚೂಡಪ್ಪ, ಬೆಂಗಳೂರು	(320)	1001-00
8	ಎಸ್. ವಿ. ಕಾಂತಾಮಣಿ		1001.00
9	ಕೆ. ಆರ್. ಚನ್ನರಸಪ್ಪ, ಪಿಟ್ಸ್‌ಬರ್ಗ್, ಅಮೆರಿಕಾ	(738)	1001-00
10	ನಾಗರೆಡ್ಡಿ ಮಲ್ಲರೆಡ್ಡಿ, ಕೆರೂರು		1001-00
11	ಸಿ. ಎಸ್. ನಾಡಗೌಡ, ಸಚಿವರು, ಮುದ್ದೇಬಿಹಾಳ	(2344)	1001.00
12	ಬಸವರಾಜೇಶ್ವರಿ, ಲೋಕ ಸಭಾ ಸದಸ್ಯೆ, ಬಳ್ಳಾರಿ	(2345)	1001.00
13	ಡಾ॥ ಕೆ. ಚೆಂಗಲಪ್ಪ. ಪನರೂಟಿ, ತಮಿಳುನಾಡು	(1292)	1001-00
14	ಕೆ. ಆರ್. ಪರಂಜ್ಯೋತಿ, ಬೆಂಗಳೂರು	(1581)	1001-00
15	ಪುಟ್ಟತಾಯಮ್ಮ ಎ. ಸಿ. ನಂಜುಂಡಪ್ಪ, ಶ್ರೀನಿವಾಸಪುರ		1001-00
16	ಬೆಂಗಳೂರು ಎ. ಎಸ್. ವಿ. ನಗರ್ತ ಸೇವಾ ಸಮಿತಿ	(2207)	1000-00
17	ಬಸವ ಪರಿಷತ್ ಪ್ರಾರ್ಥನಾ ಮಂದಿರ, ಬಿಡದಿ	(2214)	1001-00
18	ಪಿ. ಡಿ. ಪಾಲ್ಕಂಡವಾರ್, ಬಾಂಬೆ	(2340)	1001.00
19	ಪರ್ವತಪ್ಪ ಕೋರವಾರ, ಹೈದರಾಬಾದ	(2341)	1001-00
20	ಮಲ್ಲಯ್ಯರಾಜ್, ಭವಾನಿ. ತಮಿಳು ನಾಡು		1001-00
21	ಆರ್. ಕೆ. ಮಣಿ, ಬೆಂಗಳೂರು		1000.00
22	ಎಸ್. ಆರ್. ನಾಗಪ್ಪ, ಪಚ್ಚೂರು, ತಮಿಳುನಾಡು		501-00
23	ರವಿ ಮತ್ತು ಮಹಾಬಳೇಶ್ವರಪ್ಪ,ಗುಡಿಯಾತ್ತಂ,ತಮಿಳುನಾಡು		501-00

24	ಮಲ್ಲಿಕಾರ್ಜುನಸ್ವಾಮಿ, ಗುರುಸ್ಥಳ ಮಠ, ಧಾರವಾಡ		501-00
25	ಅನಿತಾ ಈಶ್ವರ ಪಾಟೀಲ, ಬೆಂಗಳೂರು		501-00
26	ಬಸವ ಭಾರತಿ ದಿವ್ಯಜ್ಞಾನ ವಿದ್ಯಾಲಯ, ಬೆಂಗಳೂರು		501-00
27	ಸಂಗನಗೌಡ್ರು ಜಿ. ಖಾನಗೌಡ್ರು, ಧಾರವಾಡ	(58)	501-00
28	ಮರಿಬಸಪ್ಪ ಚನ್ನಪ್ಪ ದನದಮನಿ, ಧಾರವಾಡ	(61)	501.00
29	ಎಸ್. ಎನ್. ಪರಮೇಶ್ವರಯ್ಯ	(220)	501-00
30	ಜಿ. ಸಿದ್ಧರಾಜು, ವಿಶ್ವೇಶ್ವರಪುರಂ ಧಾರವಾಡ	(221)	501.00
31	ಶಕುಂತಲಾ ಪುಟ್ಟಸಿದ್ಧಪ್ಪ, ಧಾರವಾಡ	(226)	501-00
32	ಉಮಾದೇವಿ, ಡಿ. ಎಂ. ಚಂದ್ರಶೇಖರ್, ಧಾರವಾಡ	(314)	501-00
33	ಬಿ. ಕೆ. ನಂಜುಂಡಪ್ಪ, ಧಾರವಾಡ	(317)	501-00
34	ದಿ. ಪಿಳ್ಳಪ್ಪನವರ ಚನ್ನವೀರಮ್ಮ , ಧಾರವಾಡ	(331)	501-00
35	ಎಸ್. ಕೆ. ರಾಜಮಾನೆ, ಧಾರವಾಡ	(535)	501-00
36	ಕೆ. ಮಲ್ಲಿಕಾರ್ಜುನ ರಾಜಮನೆ	(536)	501-00
37	ಪರಮೇಶ್ವರಪ್ಪ, ಭದ್ರಾವತಿ	(539)	501-00
38	ಜಿ. ಜಯದೇವಪ್ಪ, ಭದ್ರಾವತಿ	(540)	501-00
39	ಬಸವೇಶ್ವರ ಫೈನಾನ್ಸ್, ಚಿತ್ರದುರ್ಗ	(630)	501-00
40	ಎಸ್. ಎನ್. ಚಂದ್ರಣ್ಣ, ಚಿತ್ರದುರ್ಗ	(631)	501-00
41	ಲಲಿತಮ್ಮ ಮತ್ತು ಡಾ॥ ಇಂದುಧರ, ಚಿತ್ರದುರ್ಗ	(639)	501-00
42	ಬಿ. ಆರ್. ವಿ. ಗೌಡ ಮತ್ತು ಕೋ	(712)	501-00
43	ಮೆ॥ ರೂಪ್‌ಕಲಾ ಸಿಲ್ಕ್ಸ್ ಆಂಡ್ ಸ್ಯಾರೀಸ್	(713)	501-00
44	ಸಿ. ಪುಟ್ಟಸ್ವಾಮಿಯವರು, ಸೂಲೀಬೆಲೆ	(722)	501-00
45	ದೇವೀರಮ್ಮ ಡಿ. ಎ. ನಂಜಪ್ಪ, ಬೆಂಗಳೂರು	(728)	501-00
46	ಮೆ॥ ಪ್ರಶಾಂತ್ ಸಿಲಿಂಡರ್ಸ್, ಬೆಂಗಳೂರು	(729)	501-00
47	ಮಹಮ್ಮದ್ ಗೌಸ ಗುಡಿಗೇರಿ, ಹುಬ್ಬಳ್ಳಿ	(769)	551-00
48	ಶಿವಲೀಲಾ ಶೆಟ್ಟರ, ಧಾರವಾಡ	(797)	500-00
49	ಶಿವಪ್ಪ ಕೆಂಪಣ್ಣನವರ್, ನಾಗೇನಹಳ್ಳಿ	(833)	501-00
50	ರಾಯಪ್ಪ ನಾಗಪ್ಪ ತೆಂಬದ, ಚಳಗೇರಿ	(834)	501-00
51	ಸಿದ್ಧನಗೌಡ್ರು ಗ್ಯಾನಗೌಡ್ರು, ಚಳಗೇರಿ	(835)	501-00
52	ಬಾಬೂರಾವ ತುಕಾರಾಂ ಅವತಾಡೆ, ಚಳಗೇರಿ	(851)	501-00
53	ಸಿದ್ಧಪ್ಪ ಬಣಕಾರ, ಹನಗವಾಡಿ	(857)	501-00

54	ಕೆ. ಸಿದ್ಧಪ್ಪ, ಹನಗವಾಡಿ	(861)	551-00
55	ಚನ್ನಬಸಪ್ಪ, ಮ. ಉಪ್ಪಿನ, ಹೊನ್ನತ್ತಿ	(873)	501-00
56	ಚನ್ನಬಸಪ್ಪ ಹೇಮಪ್ಪ ಎಲಿಗಾರ, ಎಲ್ಲಾಪುರ	(882)	501-00
57	ಹೇಮಪ್ಪ ಎಲಿಗಾರ, ಎಲ್ಲಾಪುರ	(883)	501-00
58	ಸಿದ್ಧಲಿಂಗಪ್ಪ ರಾಮತೀರ್ಥ, ಬಾಸುಹಳ್ಳಿ	(889)	501-00
59	ಹಾಲಪ್ಪ ರಾಮತೀರ್ಥ, ಬಾಸುಹಳ್ಳಿ	(890)	501-00
60	ಶೋಭಾದೇವಿ ಕಲ್ಯಾಣಪ್ಪ ಪರವಾದಿ, ಹುಬ್ಬಳ್ಳಿ	(1079)	501-00
61	ಬಿ. ಡಿ. ಕೊಪ್ಪದ, ಗದಗ	(1080)	501-00

ಮುಂದುವರಿಯುವುದು.

ಶರಣ ಮೇಳಕ್ಕೆ ಧನ ದಾಸೋಹ ಮಾಡಿದ ಎಲ್ಲ ಶರಣ ಬಂಧುಗಳಿಗೂ ಹೃತ್ಪೂರ್ವಕ ಶುಭಹಾರೈಕೆಗಳು. ವಿಶ್ವಗುರು ಬಸವಣ್ಣನವರು ಈ ಎಲ್ಲರಿಗೂ ಆಯುರಾರೋಗ್ಯ ಭಾಗ್ಯ ಸಕಲ ಸಂಪದ ಕೊಡಲೆಂದು ಹಾರೈಸುವೆವು.

—ಮಾತಾಜಿ, ಕಾರ್ಯಾಧ್ಯಕ್ಷೆ.

: ವಿಶೇಷ ಸೂಚನೆ :

1. ಬೆಂಗಳೂರಿಗೆ ತಲ್ಪಿದ ಲಿಸ್ಟದಲ್ಲಿಂದ ಮಾತ್ರ ಹೆಸರುಗಳನ್ನು ಆರಿಸಲಾಗಿದೆ. ಸಂಗ್ರಹಿಸಿದವರು ಮತ್ತು ಕೆಲವು ದಾಸೋಹಿಗಳು ನೇರವಾಗಿ ಶರಣ ಮೇಳಕ್ಕೆ ಬಂದಾಗಲೇ ಪಟ್ಟಿ, ರಸೀತಿ ಪುಸ್ತಕ, ಹಣ ಕೊಟ್ಟಿದ್ದಾರೆ. ಅವುಗಳಿಂದ ಇನ್ನೂ ಹೆಸರನ್ನು ಆರಿಸಿಲ್ಲ.
2. ಮುಂದಿನ ಸಂಚಿಕೆ (ಮಾರ್ಚ್–ಏಪ್ರಿಲ್) ಯಲ್ಲಿ ಉಳಿದ ಹೆಸರುಗಳನ್ನು ಪ್ರಕಟಿಸಲಾಗುವುದು.

ಶರಣ ಮೇಳದ ವಿವರ ಮುಂದಿನ ಸಂಚಿಕೆಯಲ್ಲಿ

ನಾಲ್ಕನೆಯ ಶರಣ ಮೇಳದ ವಿವರ, ಕೈಗೊಂಡ ನಿರ್ಣಯ ಮುಂತಾದುವನ್ನು ಕುರಿತು ಮಾರ್ಚ್–ಏಪ್ರಿಲ್ ಕಲ್ಯಾಣ ಕಿರಣದಲ್ಲಿ ಕೊಡಲಾಗುವುದು.

ವಿಶ್ವಧರ್ಮ ಪ್ರವಚನದ ಮುಂದುವರಿದ ಭಾಗವನ್ನೂ ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು.

KALYANA KIRANA- Monthly magazine Printed and Published by B. Shabhulingaiah, at Prabhudeva Printing Press, Basava Gangotri, Kumbalgod, Bangalore-560 074.

ಪ್ರಪ್ರಥಮ ಮಹಿಳಾ ಜಗದ್ಗುರುಗಳು, ಅಪೂರ್ವ ಧರ್ಮಪ್ರಸಾರಕರೂ ಆದ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಅವರ 46 ನೆಯ ವರ್ಧಂತಿ

ಪರಮ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬುಧವಾರ ದಿ. 13-3-1991 ರಂದು 45 ವರ್ಷಗಳನ್ನು ಪೂರೈಸಿ 46 ಕ್ಕೆ ಪಾದಾರ್ಪಣ ಮಾಡುತ್ತಿರುವ ಸಂದರ್ಭದಲ್ಲಿ, ಪೂಜ್ಯ ಮಾತಾಜಿಯವರ ವರ್ಧಂತಿ ಉತ್ಸವವನ್ನು ಧಾರವಾಡ ಜಿಲ್ಲೆಯ ರಾಣೇಬೆನ್ನೂರು ನಗರದಲ್ಲಿ ಆಚರಿಸುವ ಉದ್ದೇಶವನ್ನು ಹೊಂದಿದ್ದೇವೆ.

ಬೆಳಿಗ್ಗೆ : 10 ಗಂಟೆಗೆ ಪಾದಪೂಜೆ, ನುಡಿ ಕಾಣಿಕೆ ಸಮರ್ಪಣೆ.
ಸಂಜೆ : 6-30 ಕ್ಕೆ ಸಾರ್ವಜನಿಕ ಕಾರ್ಯಕ್ರಮ.
ಸ್ಥಳ : ರಾಣೇಬೆನ್ನೂರಿನ ಮುನಿಸಿಪಲ್ ಹೈಸ್ಕೂಲ್ ಮೈದಾನದಲ್ಲಿ.

ವ್ಯವಹರಿಸುವ ವಿಳಾಸ :

ಸೋದರಿ ಮಲ್ಲಮ್ಮ, ವಿಶ್ವಧರ್ಮ ಪ್ರವಚನ ಸಮಿತಿ,
ಶ್ರೀ ಸಿದ್ಧೇಶ್ವರ [illegible], ಪೂನಾ–ಬೆಂಗಳೂರು ರಸ್ತೆ
ರಾಣೇಬೆನ್ನೂರು, ಜಿಲ್ಲ–ಧಾರವಾಡ.

ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

ಪ್ರವಚನ ಪಿತಾಮಹ, ಅಪೂರ್ವವಾಗ್ಮಿ. ಕ್ರಾಂತಿಕಾರಿ ಧರ್ಮ ಪ್ರಸಾರಕ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ

ಅವರಿಂದ ವಿಶ್ವಧರ್ಮ ಪ್ರವಚನ ಕಾರ್ಯಕ್ರಮವು, ಸೋಮವಾರ ದಿ. 28-1-91 ರಿಂದ ಪ್ರತಿನಿತ್ಯ ಸಂಜೆ 7 ರಿಂದ 9 ರ ವರೆಗೆ ಧಾರವಾಡ ಜಿಲ್ಲೆಯ ರಾಣೇಬೆನ್ನೂರು ನಗರದ ಮುನಿಸಿಪಲ್ ಹೈಸ್ಕೂಲ್ ಮೈದಾನದಲ್ಲಿ ನಡೆಯುತ್ತಲಿದೆ.

—ಸರ್ವರಿಗೂ ಸುಸ್ವಾಗತ—

KRNB 312/BGW 92 JANUARY 1991

